ಮಂಗಳವಾರ, ಜುಲೈ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 187 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ

ಕೋವಿಡ್-19 ನಿರ್ಮೂಲನೆ ಕೇವಲ ವೈದ್ಯರ, ಸರ್ಕಾರದ ಜವಾಬ್ದಾರಿ ಮಾತ್ರವಲ್ಲ; ಪ್ರತಿಯೊಬ್ಬರ ಹೊಣೆಗಾರಿಕೆ. ಆತಂಕವನ್ನು ತಹಬದಿಗೆ ತಾರದೇ ಇಂಥ ಜವಾಬ್ದಾರಿಯ ನಿರ್ವಹಣೆ ಸಾಧ್ಯವಿಲ್ಲ. ಹಾಗಾದರೆ, ಆತಂಕದ ನಿರ್ವಹಣೆ ಹೇಗೆ?

ಆಳ-ಅಗಲ 'ಕರ್ಮಚಾರಿ'ಯನ್ನು 'ಕರ್ಮಯೋಗಿ' ಆಗಿಸುವತ್ತ
'ಮೇಕೆದಾಟು ಯೋಜನೆ ಮಾಡಿಯೇ ತೀರುತ್ತೇವೆ' 5
'ಪರಿಶಿಷ್ಟ ಸಿಎಂ: ಕಷ್ಟ, ಆದರೆ ಅಸಾಧ್ಯವಲ್ಲ' 5

ಸೆನ್ಸೆಕ್ಸ್	ನಿಫ್ಟಿ	₹/$
52,880 ▲	15,834 ▲	74.31 ▲

ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66ಎ ಅಡಿ ಸಾವಿರಕ್ಕೂ ಹೆಚ್ಚು ಪ್ರಕರಣ: ಸುಪ್ರೀಂ ಆಕ್ರೋಶ

ರದ್ದಾದ ಸೆಕ್ಷನ್ ದುರ್ಬಳಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ತಂತ್ರಜ್ಞಾನ ಕಾಯ್ದೆಯ 66 ಎ ಸೆಕ್ಷನ್ ಅನ್ನು 2015ರಲ್ಲಿಯೇ ರದ್ದುಪಡಿಸಲಾಗಿದೆ. ಹಾಗಿದ್ದರೂ ಈ ಸೆಕ್ಷನ್ ಅಡಿಯಯಲ್ಲಿ ಪ್ರಕರಣ ದಾಖಲಾಗುತ್ತಿರುವುದಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಆಘಾತ ವ್ಯಕ್ತಪಡಿಸಿದೆ. ಆನ್‌ಲೈನ್‌ನಲ್ಲಿ ಆಕ್ಷೇಪಾರ್ಹ ವಿಚಾರಗಳನ್ನು ಪ್ರಕಟಿಸುವವರ ವಿರುದ್ಧ ಈ ಸೆಕ್ಷನ್ ಅಡಿಯಲ್ಲಿ ದೂರು ದಾಖಲಿಸಲಾಗುತ್ತಿದೆ.

ಕಾಯ್ದೆಯ ರದ್ದುಪಡಿಸಲಾದ ಸೆಕ್ಷನ್‌ನ ದುರ್ಬಳಕೆ ಆಗುತ್ತಿದೆ ಎಂದು ದೂರಿ ಪಿಯುಸಿಎಲ್ ಎಂಬ ಎನ್‌ಜಿಒ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ನೀಡಿದ್ದು, ಸೆಕ್ಷನ್‌ನ ದುರ್ಬಳಕೆ ಸಂಬಂಧ ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಲು ಸೂಚಿಸಿದೆ. ತೀರ್ಪನ್ನು ಉಲ್ಲಂಘಿಸಿದ ಅಧಿಕಾರಿಗಳನ್ನು ಜೈಲಿಗೆ ಕಳುಹಿಸುವ ಎಚ್ಚರಿಕೆಯನ್ನೂ ನೀಡಿದೆ.

66 ಎ ಸೆಕ್ಷನ್ ಸಂವಿಧಾನಬಾಹಿರ ಎಂದು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ಬಳಿಕ ಈ ಸೆಕ್ಷನ್ ಅಡಿಯಲ್ಲಿ 1,307 ಪ್ರಕರಣಗಳು ದಾಖಲಾಗಿವೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ. ಅವುಗಳ ಪೈಕಿ 745 ಪ್ರಕರಣಗಳು ವಿವಿಧ ಜಿಲ್ಲಾ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇವೆ ಎಂದು ಅರ್ಜಿದಾರರ ಪರ ವಕೀಲ ಸಂಜಯ್ ಪಾರಿಖ್ ಹೇಳಿದ್ದಾರೆ.

'ಜನರಿಗೆ ತೊಂದರೆ ಅಗುತ್ತಿದೆ. ಸುಪ್ರೀಂ ಕೋರ್ಟ್‌ನ ನಿರ್ದೇಶನವು ಜಾರಿಯಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ವ್ಯವಸ್ಥೆ ಬೇಕು' ಎಂದು ಸಂಜಯ್ ಅವರು ಹೇಳಿದರು.

ಕಾಯ್ದೆಯಲ್ಲಿಯೇ ಸೆಕ್ಷನ್ 66 ಎಯ ನಂತರ 'ಈ ಕಾಯ್ದೆಯನ್ನು ರದ್ದುಪಡಿಸಲಾಗಿದೆ, ಇದು ಅಸಾಂವಿಧಾನಿಕ' ಎಂದು ಬರೆಯುವ ಪ್ರವೃತ್ತಿ ರೂಢಿಸಿಕೊಳ್ಳಬೇಕು. ಅಡಿಟಿಪ್ಪಣಿಯಲ್ಲಿ ಈ ವಿವರ ಕೊಟ್ಟರೆ ಅದನ್ನು ಪೊಲೀಸ್ ಅಧಿಕಾರಿಗಳು ಗಮನಿಸದೇ ಇರುವ ಸಾಧ್ಯತೆ ಇದೆ ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಹೇಳಿದರು.

ನ್ಯಾಯಮೂರ್ತಿ ಆರ್.ಎಫ್. ನರಿಮನ್ ಅವರು ಸಂವಿಧಾನದ 144ನೇ ವಿಧಿಯನ್ನು ಉಲ್ಲೇಖಿಸಿ, ಸುಪ್ರೀಂ ಕೋರ್ಟ್ ನಿರ್ದೇಶನಗಳಿಗೆ ಎಲ್ಲ ಪ್ರಾಧಿಕಾರಗಳೂ ಪೂರಕವಾಗಿ ವರ್ತಿಸಬೇಕು ಎಂಬುದನ್ನು ನೆನಪಿಸಿದರು. ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ಆರ್. ಗವಾಯಿ ಅವರ ಪೀಠವು ಪ್ರಕರಣದ ವಿಚಾರಣೆಯನ್ನು ಎರಡು ವಾರ ಬಳಿಕ ಕೈಗೆತ್ತಿಕೊಳ್ಳಲಿದೆ.

'ಈಗ ಏನು ಆಗುತ್ತಿದೆ ಎಂಬುದು ನಿಮಗೆ ಆಘಾತಕಾರಿ ಅನಿಸುತ್ತಿಲ್ಲವೇ? 2015ರಲ್ಲಿಯೇ ಇದನ್ನು ರದ್ದುಪಡಿಸಿದ ತೀರ್ಪು ಬಂದಿದೆ. ಸೆಕ್ಷನ್ ಈಗಲೂ ಬಳಕೆ ಆಗುತ್ತಿರುವುದು ಆಘಾತಕಾರಿ. ಇದು ಭಯಾನಕ' ಎಂದು ಪೀಠವು ಹೇಳಿದೆ.

2015ರ ತೀರ್ಪಿನ ಬಗ್ಗೆ ಪೊಲೀಸ್ ಸಿಬ್ಬಂದಿಗೆ ರಾಜ್ಯ ಸರ್ಕಾರಗಳು ಜಾಗೃತಿ ಮೂಡಿಸಬೇಕು ಎಂದು 2019ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡದ್ದರೂ, ಸೆಕ್ಷನ್‌ನ ದುರ್ಬಳಕೆ ಆಗುತ್ತಿದೆ ಎಂದು ಸಂಜಯ್ ವಿವರಿಸಿದರು.

ಎಷ್ಟು ಪ್ರಕರಣಗಳು ದಾಖಲಾಗಿವೆ ಎಂಬುದು ಗಮನದಲ್ಲಿ ಇದೆ. ಈ ಬಗ್ಗೆ ಏನನ್ನಾದರೂ ಮಾಡಲೇಬೇಕು ಎಂದು ಪೀಠವು ಹೇಳಿತು.

ಮುಖ್ಯಾಂಶಗಳು

- ಸೆಕ್ಷನ್ 66ಎ ಬಳಕೆ ಬೇಡ ಎಂದು ಸುಪ್ರೀಂ ಕೋರ್ಟ್ 2019ರಲ್ಲಿ ಎಚ್ಚರಿಕೆ ನೀಡಿತ್ತು
- ಈ ಸೆಕ್ಷನ್ ಬಳಸದಂತೆ ಕೇಂದ್ರವು ರಾಜ್ಯಗಳಿಗೆ ನಿರ್ದೇಶನ ನೀಡಿತ್ತು
- ಹಾಗಿದ್ದರೂ ಹಲವು ರಾಜ್ಯಗಳಲ್ಲಿ ಈ ಸೆಕ್ಷನ್ ಬಳಕೆ ಆಗಿದೆ

3 ವರ್ಷ ಶಿಕ್ಷೆ ಇತ್ತು



ಮಾಹಿತಿ ತಂತ್ರಜ್ಞಾನ ಕಾಯ್ದೆಯ 66 ಎ ಸೆಕ್ಷನ್ ಸಂವಿಧಾನದ 19(1) (ಎ) ವಿಧಿ (ವಾಕ್ ಸ್ವಾತಂತ್ರ್ಯ) ಮತ್ತು ವಿಧಿ 19 (2)ರ (ನ್ಯಾಯಯುತ ನಿರ್ಬಂಧಗಳು) ಉಲ್ಲಂಘನೆಯಾಗಿದೆ ಎಂದು 2015ರ ಮಾರ್ಚ್ 24ರಂದು ಸುಪ್ರೀಂ ಕೋರ್ಟ್ ಆದೇಶ ನೀಡಿ, ಸೆಕ್ಷನ್ ಅನ್ನು ವಜಾ ಮಾಡಿತ್ತು. ಆನ್‌ಲೈನ್‌ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿದವರಿಗೆ ಈ ಸೆಕ್ಷನ್ ಅಡಿಯಲ್ಲಿ ಮೂರು ವರ್ಷ ಶಿಕ್ಷೆ ವಿಧಿಸಲು ಅವಕಾಶ ಇತ್ತು.

ಅತಿ ಹೆಚ್ಚು ಎಲ್ಲಿ

381 ಮಹಾರಾಷ್ಟ್ರದಲ್ಲಿರುವ ಪ್ರಕರಣಗಳು

291 ಜಾರ್ಖಂಡ್‌ನಲ್ಲಿರುವ ಪ್ರಕರಣಗಳು

245 ಉತ್ತರ ಪ್ರದೇಶದಲ್ಲಿರುವ ಪ್ರಕರಣಗಳು

14 ಕರ್ನಾಟಕದಲ್ಲಿರುವ ಪ್ರಕರಣಗಳು

ಲಾಕ್‌ಡೌನ್ ಸಡಿಲಿಕೆಯಾದ ಬಳಿಕ ಬೆಂಗಳೂರಿನ ಕೆ.ಆರ್. ಮಾರುಕಟ್ಟೆ ವೃತ್ತದಲ್ಲಿ ಸೋಮವಾರ ಸಂಚಾರ ದಟ್ಟಣೆ ಕಂಡುಬಂತು ಪ್ರಜಾವಾಣಿ ಚಿತ್ರ/ ಜನಾರ್ದನ್ ಬಿ.ಕೆ.

ಮೂರನೇ ಹಂತದ ಲಾಕ್‌ಡೌನ್ ಸಡಿಲಿಕೆ

ರಾಜ್ಯದಲ್ಲಿ ಗರಿಗೆದರಿದ ಆರ್ಥಿಕ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೂರನೇ ಹಂತದ ಲಾಕ್‌ಡೌನ್ ಸಡಿಲಿಕೆ ಸೋಮವಾರದಿಂದ ಜಾರಿಗೆ ಬಂದಿದ್ದು, ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಚಟುವಟಿಕೆಗಳು ಪುನರಾರಂಭಗೊಂಡಿವೆ. ದೇವಸ್ಥಾನ, ಮಾಲ್‌ಗಳ ಬಾಗಿಲು ತೆರೆದ ಮೊದಲ ದಿನವೇ ಜನಸಂದಣಿ ಕಂಡುಬಂದಿದೆ.

ಕೋವಿಡ್ ಎರಡನೇ ಅಲೆ ಬಿರುಸಾಗಿದ್ದರಿಂದ ಮೇ 10ರಿಂದ ರಾಜ್ಯದಾದ್ಯಂತ ಲಾಕ್‌ಡೌನ್ ಜಾರಿಗೊಳಿಸಲಾಗಿತ್ತು. ಸೋಮವಾರದಿಂದ ಸಾರ್ವಜನಿಕ ಸಾರಿಗೆ, ವಾಣಿಜ್ಯ ವಹಿವಾಟು ಬಹುತೇಕ ಯಥಾಸ್ಥಿತಿಗೆ ಬಂದಿದೆ. ಲಾಕ್‌ಡೌನ್ ಸಡಿಲಿಕೆಯಾದ ಕಾರಣದಿಂದ ಜನರ ಓಡಾಟವೂ ಹೆಚ್ಚಿದ್ದು, ಪ್ರಮುಖ ನಗರಗಳಲ್ಲಿ ಸಂಚಾರ ದಟ್ಟಣೆ ಕಂಡುಬಂದಿದೆ.

ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಮಾತ್ರ ನಿರ್ಬಂಧ ಮುಂದುವರಿದಿದೆ. ಉಳಿದ ಎಲ್ಲ ಜಿಲ್ಲೆಗಳಲ್ಲೂ, ಸಾರ್ವಜನಿಕ ಸಾರಿಗೆ ಸೇವೆ ಪುನರಾರಂಭವಾಗಿದೆ. ಸರ್ಕಾರಿ ಸಾರಿಗೆ ನಿಗಮಗಳು ಮತ್ತು ಖಾಸಗಿ ಬಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಿಳಿದಿದ್ದವು. ಬೆಂಗಳೂರಿನಲ್ಲಿ ಮೆಟ್ರೊ ರೈಲು ಸಂಚಾರದಲ್ಲೂ ಹೆಚ್ಚಳವಾಗಿದ್ದು, ಅಸಂಖ್ಯ ಮಂದಿ ಪ್ರಯಾಣಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಒಂದರಲ್ಲೇ ಬಸ್‌ಗಳು 4,500 ಟ್ರಿಪ್ ನಡೆಸಿವೆ. ಇತರ ಮೂರು ನಿಗಮಗಳೂ ಸೇರಿದಂತೆ 7,000 ದಿಂದ 8,000 ಗಳಷ್ಟು ಟ್ರಿಪ್ ಬಸ್ ಸಂಚಾರ ನಡೆದಿದೆ ಎಂದು ಸಾರಿಗೆ ಇಲಾಖೆ ಮೂಲಗಳು ತಿಳಿಸಿವೆ.

ರಾಜ್ಯದ ಬಹುತೇಕ ಕಡೆಗಳಲ್ಲಿ ಮಾರುಕಟ್ಟೆಗಳಲ್ಲೂ ಜನಸಂದಣಿ ಜಾಸ್ತಿ ಇತ್ತು. ಹಲವೆಡೆ ಕೃಷಿ ಉತ್ಪನ್ನ ಮಾರುಕಟ್ಟೆಗಳು ಸೋಮವಾರದಿಂದ ಬಾಗಿಲು ತೆರೆದಿದ್ದು, ರೈತರು ತಮ್ಮ ಉತ್ಪನ್ನಗಳನ್ನು ಮಾರಲು ಅತ್ತ ಹೆಜ್ಜೆ ಹಾಕಿದ್ದರು. ಹೋಟೆಲ್, ರೆಸ್ಟೋರೆಂಟ್, ಕ್ಲಬ್, ಅಂಗಡಿ ಮುಂಗಟ್ಟುಗಳಲ್ಲಿ ಹೆಚ್ಚಿನ ಚಟುವಟಿಕೆ ಕಂಡುಬಂದಿದೆ.

ದೇವಸ್ಥಾನಗಳಲ್ಲಿ ದಟ್ಟಣೆ

ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ಸಾರ್ವಜನಿಕರ ಪ್ರವೇಶ, ದರ್ಶನ ಮತ್ತು ಪ್ರಾರ್ಥನೆ ಸಲ್ಲಿಕೆಗೆ ಅವಕಾಶ ದೊರೆತಿರುವುದರಿಂದ ಎಲ್ಲೆಡೆ ಧಾರ್ಮಿಕ ಮಂದಿರಗಳಲ್ಲಿ ಜನದಟ್ಟಣೆ ಇತ್ತು. ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶೃಂಗೇರಿ, ಘಾಟಿ ಸುಬ್ರಹ್ಮಣ್ಯ ಸೇರಿದಂತೆ ರಾಜ್ಯದ ಪ್ರಮುಖ ದೇವಸ್ಥಾನಗಳಲ್ಲಿ ಜನದಟ್ಟಣೆ ಇತ್ತು.

110 ಹಳ್ಳಿ

ಸಿಗದ ಅನುದಾನ ಬಿಬಿಎಂಪಿಗೆ ಅವಮಾನ

ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾಗಿರುವ 110 ಹಳ್ಳಿಗಳ ಜನರ ಬವಣೆಗಳ ಬಗ್ಗೆ ಬೆಳಕು ಚೆಲ್ಲುವ ಸರಣಿ ಇಂದಿನಿಂದ 2

ಮುಖ್ಯಮಂತ್ರಿ ಬದಲಾವಣೆ ಖಂಡಿತ –ವಿಶ್ವನಾಥ್

ವಿಶ್ವನಾಥ್-ಯತ್ನಾಳ ಗೋಪ್ಯ ಮಾತುಕತೆ

ಪ್ರಜಾವಾಣಿ ವಾರ್ತೆ

ಮೈಸೂರು: ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸೋಮವಾರ ಮೈಸೂರಿನ ಹೋಟೆಲ್‌ವೊಂದರಲ್ಲಿ ಭೇಟಿಯಾಗಿ ಚರ್ಚೆ ನಡೆಸಿದ್ದು, ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

ಈ ಇಬ್ಬರೂ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅವರ ಪುತ್ರ ವಿಜಯೇಂದ್ರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿರುವವರು. ಮುಖ್ಯಮಂತ್ರಿ ಬದಲಾವಣೆಗೆ ಒತ್ತಾಯಿಸುತ್ತಿರುವವರು. ಈ ಭೇಟಿ ಕುತೂಹಲ ಕೆರಳಿಸಿದೆ.

'ಸುತ್ತೂರು ಮಠಕ್ಕೆ ಹೋಗಿದ್ರಾ?' ಎಂದು ವಿಶ್ವನಾಥ್ ಕೇಳಿದ್ದಕ್ಕೆ; 'ಈ ಹಿಂದೆ ಸಾಕಷ್ಟು ಬಾರಿ ಹೋಗಿದ್ದೆ. ಈ ಬಾರಿ ಹೋಗಿಲ್ಲ. ಎಲ್ಲರಿಗಿಂತ ಸ್ವಲ್ಪ ಡಿಫರೆಂಟ್ ಇರಬೇಕಲ್ವಾ..?' ಎಂದು ಬಸನಗೌಡ ಪ್ರತಿಕ್ರಿಯಿಸಿದರು.

ಚಾಮುಂಡಿಬೆಟ್ಟ, ನಂಜನಗೂಡು, ದೇವನೂರು ಮಠ, ಹೊಸ ಮಠಕ್ಕೆ ಭೇಟಿ ನೀಡಿದ್ದ ಯತ್ನಾಳ, ವಿಶ್ವನಾಥ್ ಜೊತೆ ಉಭಯ ಕುಶಲೋಪರಿ ಹಂಚಿಕೊಂಡರು. ನಂತರ ಇಬ್ಬರೂ ಕೊಠಡಿಯೊಂದರಲ್ಲಿ ಗೋಪ್ಯ ಮಾತುಕತೆ ನಡೆಸಿದರು.

ಸಿ.ಎಂ ಬದಲಾಗಲೇಬೇಕು: ಯತ್ನಾಳ ಭೇಟಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ವಿಶ್ವನಾಥ್, 'ಮುಖ್ಯಮಂತ್ರಿ ಬದಲಾಗಲೇಬೇಕು. ಪ್ರಕ್ರಿಯೆ ನಡೆದಿದೆ. ಫಲ ಸ್ವಲ್ಪ ತಡವಾಗಬಹುದು. ಆದರೆ, ಬದಲಾವಣೆ ಖಂಡಿತ' ಎಂದರು.

'ವಿಜಯೇಂದ್ರನ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಹಿಂದುಳಿದ ನಾಯಕರನ್ನು ತುಳಿಯುವ ಕೆಲಸ ನಡೆದಿದೆ. ನನ್ನನ್ನು ರಾಜಕೀಯವಾಗಿ ಮುಗಿಸಿದ್ದು, ವಿಜಯೇಂದ್ರ. ಇದೀಗ ರಮೇಶ ಜಾರಕಿಹೊಳಿ, ಶ್ರೀರಾಮುಲು ಸರದಿ' ಎಂದು ವಾಗ್ದಾಳಿ ನಡೆಸಿದರು.

6ನೇ ಪುಟ ನೋಡಿ

ಸೆರೆಯಲ್ಲೇ ಸ್ಟ್ಯಾನ್ ಸ್ವಾಮಿ ಸಾವು

ಮುಂಬೈ (ಪಿಟಿಐ): 2018ರ ಭೀಮಾ ಕೋರೆಗಾಂವ್ ಹಿಂಸಾಚಾರಕ್ಕೆ ಕಾರಣ ಎನ್ನಲಾಗಿರುವ ಎಲ್ಗಾರ್ ಪರಿಷತ್ ಸಭೆಗೆ ಸಂಬಂಧಿಸಿದಂತೆ ಬಂಧನದಲ್ಲಿ ಇದ್ದ ಬುಡಕಟ್ಟು ಜನರ ಹಕ್ಕುಗಳ ಹೋರಾಟಗಾರ ಫಾದರ್ ಸ್ಟ್ಯಾನ್ ಸ್ವಾಮಿ (84) ಅವರು ಸೋಮವಾರ ಇಲ್ಲಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 10

ದ್ವಿತೀಯ ಪಿಯು: ಫಲಿತಾಂಶಕ್ಕೆ ಮಾರ್ಗದರ್ಶಿ ಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಥಮ ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಅಂಕಗಳು ಹಾಗೂ ದ್ವಿತೀಯ ಪಿಯುಸಿ ಶೈಕ್ಷಣಿಕ ಚಟುವಟಿಕೆಯ ಸಾಧನೆಗೆ ನಿಗದಿಪಡಿಸಿದ ಅಂಕಗಳು ಮತ್ತು ಕೃಪಾಂಕಗಳ ಆಧಾರದಲ್ಲಿ ಅಂಕಗಳನ್ನು ನಿಗದಿಪಡಿಸಿ ಅತಿ ಶೀಘ್ರದಲ್ಲಿ ದ್ವಿತೀಯ ಪಿಯುಸಿ ಫಲಿತಾಂಶ ಘೋಷಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟು ಫಲಿತಾಂಶ ಪ್ರಕಟಿಸಲು ಮಾರ್ಗದರ್ಶಿ ಸೂತ್ರಗಳನ್ನು ರಚಿಸಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಗೆ ಅನುಗುಣವಾಗಿ ಫಲಿತಾಂಶ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

'ಒಂದು ವೇಳೆ ಘೋಷಿತ ಫಲಿತಾಂಶದಿಂದ ಪಡೆದ ಅಂಕಗಳು ತೃಪ್ತಿಕರವೆನಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಮುಂದಿನ ದಿನಗಳಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯು ನಡೆಸುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು' ಎಂದೂ ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 5

ಇಂದಿನ ಪಾಡ್‌ಕಾಸ್ಟ್ ವಿಶೇಷ

ಸುದ್ದಿ ಸ್ವಾರಸ್ಯ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ತಾವರ್‌ಚಂದ್ ಗೆಹ್ಲೋಟ್ ನೂತನ ರಾಜ್ಯಪಾಲ? 4

ರಾಜ್ಯ ಕೋವಿಡ್ ಅಂಕಿ–ಅಂಶ

28,56,491 ▲ ಒಟ್ಟು ಸೋಂಕಿತರು (28,53,643 ನಿನ್ನೆಯ ವಿವರ)

41,996 ▼ ಸಕ್ರಿಯ ಪ್ರಕರಣಗಳು

27,79,038 ▲ ಗುಣಮುಖರಾದವರು

35,434 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	2,848	▲
ಗುಣಮುಖ	5,631	▲
ಸಾವು	67	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಿಷೇಧಾಜ್ಞೆ ಜಾರಿಗೊಳಿಸಿದ ಕಮಿಷನರ್

ಬೆಂಗಳೂರು: ಲಾಕ್‌ಡೌನ್ ಸಡಿಲಿಕೆ ಮಾಡಿರುವ ಬೆನ್ನಲ್ಲೇ ಪೊಲೀಸ್ ಕಮಿಷನರ್ ಕಮಲ್ ಪಂತ್, ನಗರದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಸೋಮವಾರ ಆದೇಶ ಹೊರಡಿಸಿದ್ದಾರೆ.

'ನಗರದ ಸಾರ್ವಜನಿಕ ಸ್ಥಳಗಳಲ್ಲಿ ನಾಲ್ಕು ಜನರು ಗುಂಪು ಸೇರಿ ನಿಲ್ಲಬಾರದು. ನಗರದ ಬಸ್ ನಿಲ್ದಾಣ, ಮೆಟ್ರೊ, ರೈಲು ನಿಲ್ದಾಣಗಳಿಗೆ ಇದು ಅನ್ವಯ-ವಾಗುವುದಿಲ್ಲ. ಉಳಿದಂತೆ ರಾಜ್ಯ ಸರ್ಕಾರದ ಎಲ್ಲ ನಿಯಮಗಳನ್ನು ಜನರು ಪಾಲಿಸಬೇಕು. ಇಲ್ಲದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 7ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯ-ಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಎಚ್‌ಎಂಟಿ ಮುಖ್ಯರಸ್ತೆ, ಸುಬೇದಾರ್ ಪಾಳ್ಯ, ದಿವಾನರ ಪಾಳ್ಯ, ಗೋಕುಲ, ಮಲ್ಲೇಶ್ವರ, ವಯ್ಯಾಲಿಕಾವಲ್, ಪ್ಯಾಲೇಸ್ ಗುಟ್ಟಹಳ್ಳಿ, ಪೈಪ್‌ಲೈನ್ ಪ್ರದೇಶ, ಅಂಬೇಡ್ಕರ್ ನಗರ, ಯಶವಂತಪುರ, ಬಿಇಎಚ್‌ಇಎಲ್ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ.

ಖಾಲಿ ಹುದ್ದೆ ಭರ್ತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನಿತ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವಿವಿಧ ಕಾರಣಗಳಿಂದ ಖಾಲಿಯಾಗಿರುವ ಹುದ್ದೆಗಳಲ್ಲಿ ಈಗಾಗಲೇ ಅನುಮೋದನೆಗೊಂಡಿರುವ ಪ್ರೌಢ ಶಾಲಾ ಬೋಧಕರ ಹುದ್ದೆ ಭರ್ತಿಗೆ ಸರ್ಕಾರ ಆದೇಶ ಹೊರಡಿಸಿದೆ.

2015 ರ ಡಿ. 31ರ ಪೂರ್ವದಲ್ಲಿ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆ ಹಾಗೂ ಇತರ ಕಾರಣಗಳಿಂದ ಖಾಲಿ ಇರುವ ಹುದ್ದೆಗಳಲ್ಲಿ ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡು, ನೇಮಕಾತಿ ಪ್ರಕ್ರಿಯೆ ಇಲಾಖಾ ಹಂತದಲ್ಲಿ ಬಾಕಿ ಇರುವ 257 ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ನೇಮಕಾತಿ ಆದೇಶವನ್ನು 2021-22ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭದ ನಂತರ ನೀಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ.

ರಾಜಕೀಯ ಮೇಲಾಟ; ಅನುದಾನ ಹಂಚಿಕೆಯಲ್ಲಿ ತಾರತಮ್ಯ; ನಲುಗಿದ ಜನ

ಹಳ್ಳಿ 110; ಸಮಸ್ಯೆ ಸಾವಿರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬಿಬಿಎಂಪಿ ಎಂಬ 'ಕಾಣದ ಕಡಲಿಗೆ' ಹಂಬಲಿಸಿ ಸೇರ್ಪಡೆಯಾದ 110 ಹಳ್ಳಿಗಳ ನಿವಾಸಿಗಳು ಕಳೆದ ಹಲವು ವರ್ಷಗಳಿಂದ ನರಕದಲ್ಲಿ ಸಿಲುಕಿದಂತೆ ನರಳುತ್ತಿದ್ದಾರೆ. ಇದ್ದ ಡಾಂಬರು ರಸ್ತೆಗಳು ಮಾಯವಾಗಿ ಗುಂಡಿ–ಗೊಟರುಗಳ ತಾಣವಾದವು. ರಾಜಕೀಯ ಮೇಲಾಟ, ಅನುದಾನ ಹಂಚಿಕೆಯಲ್ಲಿ ತಾರತಮ್ಯಗಳಿಂದ ನಿವಾಸಿಗಳು ಅಕ್ಷರಶಃ ನಲುಗಿ ಹೋಗಿದ್ದಾರೆ.

2007ರಲ್ಲಿ 7 ನಗರಸಭೆ, ಒಂದು ಪಟ್ಟಣ ಪಂಚಾಯಿತಿ ವ್ಯಾಪ್ತಿಯ 110 ಹಳ್ಳಿಗಳು ಪಾಲಿಕೆ ವ್ಯಾಪ್ತಿಗೆ ಸೇರಿದವು. ಮಹದೇವಪುರ, ಕೆ.ಆರ್. ಪುರ, ಯಶವಂತಪುರ, ಯಲಹಂಕ, ದಾಸರಹಳ್ಳಿ, ಬೆಂಗಳೂರು ದಕ್ಷಿಣ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದೊಳಗೆ 110 ಹಳ್ಳಿಗಳು ಹಂಚಿಕೆಯಾದವು. ಆ ಹಳ್ಳಿಗಳಿಗೆ ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಪರ್ಕ ಕಲ್ಪಿಸಿ ಸುಸಜ್ಜಿತ ರಸ್ತೆ ನಿರ್ಮಾಣ ಮಾಡುವ ಯೋಜನೆಯನ್ನು ಬಿಬಿಎಂಪಿ ಮತ್ತು ಜಲಮಂಡಳಿ ಜತೆಗೂಡಿ ಆರಂಭಿಸಿದವು. ಕಾಮಗಾರಿ ಆರಂಭವಾದ ನಂತರ 110 ಹಳ್ಳಿಗಳಲ್ಲಿ ಬಹುತೇಕ ರಸ್ತೆಗಳನ್ನು ಅಗೆಯಲಾಗಿದೆ.

ಕುಡಿಯುವ ನೀರಿನ ಸಂಪರ್ಕ ಮತ್ತು ಒಳಚರಂಡಿಗೆ ಸಂಬಂಧಿಸಿದ ಕಾಮಗಾರಿಯನ್ನು ನಿರ್ವಹಿಸುವುದು ಜಲಮಂಡಳಿ ಜವಾಬ್ದಾರಿಯಾದರೆ, ರಸ್ತೆ ಮರು ನಿರ್ಮಾಣ ಮಾಡುವುದು ಬಿಬಿಎಂಪಿ ಹೊಣೆ. ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿ ಹಲವು ವರ್ಷಗಳಿಂದ ನಡೆಯುತ್ತಲೇ ಇದೆ. ಬಹುತೇಕ ಕಡೆಗಳಲ್ಲಿ ಕಾಮಗಾರಿ ಪೂರ್ಣಗೊಂಡಿದ್ದರೂ ರಸ್ತೆ ಮರು ನಿರ್ಮಾಣ ಕಾಮಗಾರಿ ಆರಂಭವಾಗಿಲ್ಲ.

ಗುಂಡಿ ಬಿದ್ದ ರಸ್ತೆಗಳಲ್ಲಿ ವಾಹನ ಚಾಲನೆ ಮಾಡಲು ಸಾಧ್ಯವಾಗದೆ 110 ಹಳ್ಳಿಗಳ ವ್ಯಾಪ್ತಿಯ ಜನರು ಪರದಾಡುತ್ತಿದ್ದಾರೆ. ಗುಂಡಿಗಳಲ್ಲಿ ಬಿದ್ದು ಹಲವರು ಕೈಕಾಲು ಮುರಿದು-ಕೊಂಡಿದ್ದಾರೆ. ತಾಯಿಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೋಗುತ್ತಿದ್ದಾಗ ರಸ್ತೆ ಗುಂಡಿಯಲ್ಲಿ ಬಿದ್ದು ತೊಂದರೆ ಅನುಭವಿಸಿದ ದಾಸರಹಳ್ಳಿ ಕ್ಷೇತ್ರದ ಅಶ್ವತ್ಥನಾರಾಯಣ ಚೌಧರಿ ಎಂಬುವರು ಹೈಕೋರ್ಟ್ ಮೆಟ್ಟಿಲನ್ನೂ ಏರಿದ್ದಾರೆ.

'ಗ್ರಾಮ ಪಂಚಾಯಿತಿ ವ್ಯಾಪ್ತಿಯ-ಲ್ಲಿದ್ದಾಗ ಡಾಂಬರು ರಸ್ತೆಗಳಿದ್ದವು. ಈಗ ಜಲ್ಲಿ ರಸ್ತೆಯೂ ಇಲ್ಲದೆ ಕಲ್ಲು-ಗುಂಡಿಗಳ ಹಾದಿಯಾಗಿದೆ. ಬಿಬಿಎಂಪಿಗೆ ಸೇರ್ಪಡೆಯಾದರೆ ಬಡಾವಣೆ ಅಭಿವೃದ್ಧಿ ಆಗಲಿದೆ ಎಂದು ಕನಸು ಕಂಡಿದ್ದೆವು. ವಾಸ್ತವವಾಗಿ ಎಲ್ಲವೂ ತಲೆಕೆಳಗಾಗಿದೆ' ಎಂದು ನಿವಾಸಿಗಳು ಅಳಲು ತೋಡಿ-ಕೊಳ್ಳುತ್ತಾರೆ.

ಈ ನಡುವೆ, ರಸ್ತೆಗಳ ಮರು ನಿರ್ಮಾಣ ಕಾಮಗಾರಿ ಆರಂಭಿಸಲು ಸರ್ಕಾರ ಇತ್ತೀಚೆಗೆ ₹1 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡಿದೆ. ಬ್ಯಾ-ಟರಾಯನಪುರ ಮತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರಗಳಿಗೆ ತಲಾ ₹25 ಕೋಟಿ ಬಿಡುಗಡೆ ಮಾಡಿದರೆ, ಉಳಿದ ಕ್ಷೇತ್ರಗಳಿಗೆ ತಲಾ ₹160 ಕೋಟಿಯಿಂದ ₹210 ಕೋಟಿ ತನಕ ಬಿಡುಗಡೆ ಮಾಡಿದೆ. ಬ್ಯಾಟರಾಯನಪುರ ಕ್ಷೇತ್ರವನ್ನು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, ದಾಸರಹಳ್ಳಿಯನ್ನು ಜೆಡಿಎಸ್‌ನ ಆರ್. ಮಂಜುನಾಥ್ ಪ್ರತಿನಿಧಿಸುತ್ತಿದ್ದಾ-ರೆ. ಉಳಿದ ಐದು ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರಿದ್ದಾರೆ. ಅವರಲ್ಲಿ ಮೂವರು ಪ್ರಭಾವಿ ಸಚಿವರು ಕೂಡ ಆಗಿದ್ದಾರೆ.

'ದಾಸರಹಳ್ಳಿ ಕ್ಷೇತ್ರದ ಜನರು ಕೂಡ ನಾಗರಿಕರೇ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಅಭಿವೃದ್ಧಿ ಕಾಮಗಾರಿಗಳ ವಿಷಯದಲ್ಲಿ ರಾಜಕೀಯ ಮಾಡಬಾರದು. ರಾಜಕೀಯ ಮೇಲಾಟಕ್ಕೆ ನಾವು ನಲುಗಬೇಕಾಗಿದೆ' ಎಂದು ಸಿಡೇದಹಳ್ಳಿ ನಿವಾಸಿ ಕೃಷ್ಣ ದೂರುತ್ತಾರೆ.

'ಬಿಜೆಪಿ ಸರ್ಕಾರದಿಂದ ಮತ್ತೆ ಅನ್ಯಾಯ'

'ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ ಹಿಂದಿನ ಸರ್ಕಾರ ಹಂಚಿಕೆ ಮಾಡಿದ್ದ ಅನುದಾನವನ್ನು ಮರು ಹಂಚಿಕೆ ಮಾಡಿತು. ವಿರೋಧ ಪಕ್ಷದ ಶಾಸಕರಿರುವ ಕ್ಷೇತ್ರಗಳಿಗೆ ನೀಡಿದ್ದ ಅನುದಾನವನ್ನು ಶೇ 75ರಷ್ಟು ವಾಪಸ್ ಪಡೆದುಕೊಂಡಿತು. ಈಗ 110 ಹಳ್ಳಿಗಳ ಯೋಜನೆ ಅಡಿಯಲ್ಲೂ ಇದೇ ರೀತಿ ಮಾಡಲಾಗಿದೆ. ಬಿಜೆಪಿ ಸರ್ಕಾರದಿಂದ ಮತ್ತೆ ಮತ್ತೆ ಅನ್ಯಾಯ ನಡೆಯುತ್ತಿದೆ' ಎಂದು ಜೆಡಿಎಸ್ ಶಾಸಕ ಆರ್.ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

110 ಹಳ್ಳಿ ಕುಡಿಯುವ ನೀರಿನ ಯೋಜನೆ ಕಾಮಗಾರಿಯನ್ನು ಚಿಕ್ಕತೋಗೂರು ಗ್ರಾಮದಲ್ಲಿ ಕೈಗೊಳ್ಳಲಾಗಿದೆ. –ಪ್ರಜಾವಾಣಿ ಚಿತ್ರ/ ಎಂ.ಎಸ್ ಮಂಜುನಾಥ್

51 ಹಳ್ಳಿಗೆ ಕುಡಿಯುವ ನೀರು

ಹಳ್ಳಿಗಳಿಗೆ ಕಾವೇರಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿ ಬಹುತೇಕ ಮುಗಿದಿದೆ. 51 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲು ಅಧಿಸೂಚನೆಯನ್ನೂ ಹೊರಡಿಸಲಾಗಿದೆ ಎಂದು ಜಲ ಮಂಡಳಿ ಅಧಿಕಾರಿಗಳು ಹೇಳುತ್ತಾರೆ.

'ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿ ಇನ್ನೂ ಪ್ರಗತಿಯಲ್ಲಿ-ದೆ. ಶೌಚ ಸಂಸ್ಕರಣಾ ಘಟಕಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಇದೀಗ ಟೆಂಡರ್ ಕರೆಯಲಾಗಿದೆ. ಕುಡಿಯುವ ನೀರಿನ ಸಂಪರ್ಕ ಮತ್ತು ಒಳಚರಂಡಿ ಕಾಮಗಾರಿ ನಿರ್ವಹಿಸುವುದು ನಮ್ಮ ಜವಾಬ್ದಾರಿ. ರಸ್ತೆ ಮರು ನಿರ್ಮಾಣ ಕಾಮಗಾರಿಯನ್ನು ಬಿಬಿಎಂಪಿ ನಿರ್ವಹಿಸಲಿದೆ. ಪ್ರಮುಖ ರಸ್ತೆಗಳನ್ನು ಅಗೆದಿರುವ ಕಾರಣ ₹89 ಕೋಟಿಯನ್ನು ಬಿಬಿಎಂಪಿಗೆ ನೀಡಲಾಗಿದೆ' ಎಂದು ಜಲಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

110 ಹಳ್ಳಿ
ಸಿಗದ ಅನುದಾನ
ಬಿಬಿಎಂಪಿಗೆ ಅವಮಾನ

ಯಾವ ಕ್ಷೇತ್ರಕ್ಕೆ ಎಷ್ಟು ಅನುದಾನ (₹ ಕೋಟಿಗಳಲ್ಲಿ)

ಕ್ಷೇತ್ರ	ಪ್ರತಿನಿಧಿಸುವ ಶಾಸಕ	ಅನುದಾನ
ಮಹದೇವಪುರ	ಅರವಿಂದ ಲಿಂಬಾವಳಿ	210
ಯಶವಂತಪುರ	ಎಸ್.ಟಿ. ಸೋಮಶೇಖರ್	200
ಕೆ.ಆರ್.ಪುರ	ಬೈರತಿ ಬಸವರಾಜ	190
ಬೆಂಗಳೂರು ದಕ್ಷಿಣ	ಎಂ. ಕೃಷ್ಣಪ್ಪ	190
ಯಲಹಂಕ	ಎಸ್.ಆರ್. ವಿಶ್ವನಾಥ್	160
ಬ್ಯಾಟರಾಯನಪುರ	ಕೃಷ್ಣ ಬೈರೇಗೌಡ	25
ದಾಸರಹಳ್ಳಿ	ಆರ್.ಮಂಜುನಾಥ್	25

ಜರಗನಹಳ್ಳಿ ಶಿವಶಂಕರ್ ಸ್ಮರಣಾರ್ಥ ಪ್ರಶಸ್ತಿ

ಬೆಂಗಳೂರು: 'ಚುಟುಕು ಕವಿ ಜರಗನಹಳ್ಳಿ ಶಿವಶಂಕರ್ ಅವರ ನೆನಪಾರ್ಥಕವಾಗಿ ಪ್ರತಿ ವರ್ಷ ಮೇ 5ರಂದು 'ಹನಿಗವನ ಸಾಹಿತ್ಯ ಪ್ರಶಸ್ತಿ' ನೀಡಲಾಗುವುದು' ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇ-ಗೌಡ ತಿಳಿಸಿದರು.

ಶಿವಶಂಕರ್ ಅವರ ಸಮಾಧಿ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಪೂಜೆ ಸಲ್ಲಿಸಿದ ಬಳಿಕ ಅವರು ಮಾತ-ನಾಡಿ 'ಶ್ರೇಷ್ಠ ಹನಿಗವನ ಕವಿಗೆ ಪ್ರಶಸ್ತಿ ಕೊಡಲಾಗುತ್ತದೆ. ಇದು ₹5 ಸಾವಿರ ನಗದು ಒಳಗೊಂಡಿದೆ' ಎಂದರು.

ರಫಾಯಲ್ ರಾಜ್, ಪ.ಗಜಣ್ಣ, ವೀರಭದ್ರಪ್ಪ, ಜಯಣ್ಣ ಹಾಗೂ ಶಿವಣ್ಣ ಇದ್ದರು.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,

ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಟೆಂಡರ್ / ಸ್ಥಿರಾಸ್ತಿಯ ಬಹಿರಂಗ ಹರಾಜು

ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002 ರಡಿ ಹರಾಜು ಮಾರಾಟ

ಮುಂದುವರಿದಂತೆ, **ಸಾಲಗಾರರಾದ : 1) ಶ್ರೀ ರೋಹಿತ್ ಯಾದವ್ ಎಸ್** ಬಿನ್ ಶ್ರೀ ಬಿ ಶ್ರೀನಿವಾಸ್, **2. ಶ್ರೀಮತಿ ಪ್ರಭಾವತಿ ಎ ಬಿ** ಕೋಂ ಬಿ ಶ್ರೀನಿವಾಸ್, ಇವರಿಬ್ಬರ ವಿಳಾಸ : ನಂ.22, 2ನೇ ಮಹಡಿ, 3ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಎನ್‌ಎಸ್ ಪಾಳ್ಯ, ಬಿಟಿಎಂ 2ನೇ ಹಂತ, ಬೆಂಗಳೂರು–560076, **ಜಾಮೀನುದಾರರು : 1. ಶ್ರೀ ಶ್ರೀನಿವಾಸ್ ಬಿ, 2. ಶ್ರೀಮತಿ ಸೌಮ್ಯ ಎಸ್** D/o ಶ್ರೀನಿವಾಸ್ ಬಿ, ನಂ.22, 2ನೇ ಮಹಡಿ, 3ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಎನ್‌ಎಸ್ ಪಾಳ್ಯ, ಬಿಟಿಎಂ 2ನೇ ಹಂತ, ಬೆಂಗಳೂರು–560076, ಇವರುಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,'** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ರೂ.1,62,17,714/– (ರೂಪಾಯಿ ಒಂದು ಕೋಟಿ ಅರವತ್ತೆರಡು ಲಕ್ಷದ ಹದಿನೇಳು ಸಾವಿರದ ಏಳು ನೂರ ಹದಿನಾಲ್ಕು ಮಾತ್ರ) ದಿನಾಂಕ 02.07.2021 ರಂದು** ಇದ್ದಂತೆ ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ಥಿರಾಸ್ತಿಯ ವಿವರಗಳು	ಟೆಂಡರ್ ತೆರೆಯುವ ದಿನಾಂಕ ಮತ್ತು ಹರಾಜು ಸ್ಥಳ	ಮೀಸಲು ಬೆಲೆ ಮತ್ತು ಇಎಂಡಿ
ಮನೆ ಆಸ್ತಿಯ ನಂ. 22 (ಹಳೆ ನಂ. 44 & 44–ಎ), ಪಿಐಡಿ ನಂ. 65–375–22, ಬಿಬಿಎಂಪಿ ವಾರ್ಡ್ ನಂ.65, ಬಿಟಿಎಂ ಲೇಔಟ್, 3ನೇ ಮುಖ್ಯ ರಸ್ತೆ, ಎನ್ ಎಸ್ ಪಾಳ್ಯ, ರಾಷ್ಟ್ರಕವಿ ಕುವೆಂಪು ನಗರ, ಬೆಂಗಳೂರು, ಈ ಹಿಂದೆ ನೈಟಪ್ಪಶೆಟ್ಟಿ ಪಾಳ್ಯ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ಉತ್ತರದ ಕಡೆಗೆ 53 ಅಡಿ ಮತ್ತು ದಕ್ಷಿಣದ ಕಡೆಗೆ 46 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 59 ಅಡಿ, ಒಟ್ಟು ವಿಸ್ತೀರ್ಣ 2920.5 ಚದರ ಅಡಿ, ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ಬಿ ನಾರಾಯಣಸ್ವಾಮಿರವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 22ರ ಉತ್ತರ ಭಾಗ, ಎ ಬಿ ಸುಜಾತ ರವರಿಗೆ ಸೇರಿದ ಹೊಸ ಮುನಿಸಿಪಲ್ ನಂ.22/1, ದಕ್ಷಿಣಕ್ಕೆ : ರಸ್ತೆ.	09.08.2021 ಬೆಳಿಗ್ಗೆ 11.30 ಗಂಟೆಗೆ -------------- ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಕೇಂದ್ರ ಕಛೇರಿ : ವಿಜಯನಗರ, ಬೆಂಗಳೂರು–560104.	ಮೀಸಲು ಬೆಲೆ ರೂ.3,17,01,000/– (ರೂಪಾಯಿ ಮೂರು ಕೋಟಿ ಹದಿನೇಳು ಲಕ್ಷದ ಒಂದು ಸಾವಿರಗಳು ಮಾತ್ರ) -------------- ಇಎಂಡಿ: ರೂ.31,70,100/– (ರೂಪಾಯಿ ಮೂವತ್ತೊಂದು ಲಕ್ಷದ ಎಪ್ಪತ್ತು ಸಾವಿರದ ನೂರು ಮಾತ್ರ) ಇಎಂಡಿ ಮೀಸಲು ಬೆಲೆಯ 10%

ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳು:–

1. ಟೆಂಡರ್ ಅರ್ಜಿಯನ್ನು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.14, "ರಜತ ಭವನ" 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು (ದೂ.080–23300497, 41159606)**ರಲ್ಲಿ ಎಲ್ಲಾ ಕೆಲಸದ ದಿನಗಳಂದು ಕೆಲಸದ ಸಮಯದಲ್ಲಿ ಪಡೆಯಬಹುದು.
2. ಉದ್ದೇಶಿತ ಬಿಡ್‌ದಾರರು ನಿಗದಿತ ಟೆಂಡರ್ ಫಾರ್ಮ್ ಅನುಸಾರ ಮುಚ್ಚಿದ ಲಕೋಟೆಯಲ್ಲಿ ಮೀಸಲು ಬೆಲೆಯ 10% ಇಎಂಡಿಯೊಂದಿಗೆ ಡಿಮಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್/ ಪೇ ಆರ್ಡರ್‌ನ್ನು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು** ಇವರ ಪರವಾಗಿ ಪಾವತಿಸಬೇಕು. ಡಿಮಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್ / ಪೇ ಆರ್ಡರ್‌ನ್ನು ಈ ಟೆಂಡರ್–ಕಮ್–ಹರಾಜು ಸೂಚನೆ ಪ್ರಕಟಣೆ ದಿನಾಂಕದ ನಂತರ ಡ್ರಾ ಮಾಡಬಹುದಾಗಿದೆ.
3. ನಿಗದಿತ ಸ್ವರೂಪದಲ್ಲಿಲ್ಲದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್ ಜೊತೆಗೆ ಇಎಂಡಿಯನ್ನು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು** ಇವರಿಗೆ ದಿನಾಂಕ **07.08.2021 ಸಂಜೆ 5.00 ಗಂಟೆ**ಯ ಒಳಗಾಗಿ ತಲುಪಿಸಬೇಕು. ಇಎಂಡಿ ಇಲ್ಲದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಮೀಸಲು ಬೆಲೆಗಿಂತ **ಕಡಿಮೆ ಮೊತ್ತಕ್ಕೆ** ಮಾರಾಟ ಮಾಡಲಾಗುವುದಿಲ್ಲ.
5. ಬಿಡ್‌ದಾರರು ಯಶಸ್ವಿಗೊಳ್ಳದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿ ಇಲ್ಲದೆ ಹಿಂದಿರುಗಿಸಲಾಗುವುದು.
6. ಹರಾಜು ಮಾರಾಟದ ಷರತ್ತು ಮತ್ತು ನಿಯಮಗಳನ್ನು ಪಾಲಿಸದ ಯಶಸ್ವಿ ಬಿಡ್ಡರ್‌ನ ಇಎಂಡಿ ಮೊತ್ತವನ್ನು ಯಾವುದೇ ಮುನ್ಸೂಚನೆಗಳನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಸಂಬಂಧಪಟ್ಟಿರುತ್ತದೆ.
7. ಮುಚ್ಚಿದ ಲಕೋಟೆಗಳು ಅಧಿಕೃತ ಅದಿಕಾರಿಗಳು, ಹಾಜರಿರುವ ಬಿಡ್ಡರ್‌ಗಳು / ಲಭ್ಯವಿರುವ ಬಿಡ್ಡರ್‌ಗಳ ಉಪಸ್ಥಿತಿಯಲ್ಲಿ ದಿನಾಂಕ **09.08.2021 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.**
8. ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್ದಾರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಅವಕಾಶ ನೀಡಬಹುದು.
9. ಯಶಸ್ವಿ ಬಿಡ್‌ದಾರನು ಹರಾಜು ಮಾರಾಟದ ನಂತರ, ಅದೇ ದಿನ, ನಗದು ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಮಾರಾಟದ ಬೆಲೆಯ 25% (ಇಎಮ್‌ಡಿ ಸೇರಿದಂತೆ) ಠೇವಣಿ ಮಾಡಬೇಕು ಮತ್ತು ಮಾರಾಟದ ದೃಢೀಕರಣದ ದಿನಾಂಕದಿಂದ 15 ದಿನಗಳ ಒಳಗೆ ಯಶಸ್ವಿ ಬಿಡ್‌ದಾರರು ಬಾಕಿ ಮಾರಾಟದ ಮೊತ್ತವನ್ನು ಪಾವತಿಸಬೇಕು, ಇಲ್ಲದಿದ್ದಲ್ಲಿ ಅಲ್ಲಿಯವರೆಗೆ ಠೇವಣಿ ಮಾಡಲಾದ ಎಲ್ಲಾ ಮೊತ್ತವನ್ನು ಸೂಚನೆ ಇಲ್ಲದೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಆಸ್ತಿಯನ್ನು ಮರು ಹರಾಜಿಗೆ ಇಡಲಾಗುತ್ತದೆ.
10. ಅನ್ವಯವಾಗುವ ಕಾನೂನುಗಳ ಪ್ರಕಾರ ಯಶಸ್ವಿ ಬಿಡ್‌ದಾರನು ಶಾಸನಬದ್ಧ ಬಾಕಿ / ತೆರಿಗೆಗಳು / ಶುಲ್ಕಗಳು / ಆಸ್ತಿ ತೆರಿಗೆ / ಇಬಿ ಶುಲ್ಕಗಳು / ನೀರಿನ ಶುಲ್ಕಗಳು / ಸ್ಟಾಂಪ್ ಡ್ಯೂಟಿ, ನೋಂದಣಿ ಶುಲ್ಕ ಮುಂತಾದ ಸಾಗಣೆ ಶುಲ್ಕಗಳನ್ನು ಭರಿಸಬೇಕು, ಅದು ತನ್ನ ಪರವಾಗಿ ಆಸ್ತಿಯನ್ನು ಪರಿವರ್ತಿಸಲು ಪಾವತಿಸಬೇಕಾಗುತ್ತದೆ.
11. ಪೂರ್ವ ಸೂಚನೆ ಇಲ್ಲದೆ ಯಾವುದೇ ಅಥವಾ ಎಲ್ಲಾ ಟೆಂಡರ್ ಅಥವಾ / ಬಿಡ್ / ಆಫರ್ ಅನ್ನು ಸ್ವೀಕರಿಸಲು ಅಥವಾ ತಿರಸ್ಕರಿಸಲು ಮತ್ತು / ಅಥವಾ ಯಾವುದೇ ಕಾರಣವನ್ನು ನಿಗದಿಪಡಿಸದೆ ಹರಾಜು ಮಾರಾಟವನ್ನು ಮುಂದೂಡಲು / ರದ್ದುಗೊಳಿಸಲು ಮತ್ತು ಮಾರಾಟದ ಒಂದು ಅಥವಾ ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸಲು ಅಧಿಕೃತ ಅಧಿಕಾರಿಗೆ ಸಂಪೂರ್ಣ ಹಕ್ಕಿದೆ.
12. ಮಾರಾಟವು ಬ್ಯಾಂಕ್‌ನ ದೃಢೀಕರಣಕ್ಕೆ ಸಂಬಂಧಪಟ್ಟಿರುತ್ತದೆ.
13. ಮೇಲ್ಕಂಡ ಆಸ್ತಿಯನ್ನು ಉದ್ದೇಶಿತ ಬಿಡ್‌ದಾರರು ತನ್ನ ಸ್ವಂತ ಖರ್ಚಿನಲ್ಲಿ **ಬೆಳಿಗ್ಗೆ 10.00ರಿಂದ ಸಂಜೆ 5 ಗಂಟೆಯ** ಒಳಗೆ ಹೋಗಿ ಪರಿಶೀಲಿಸಬಹುದಾಗಿದೆ
14. ಆಸ್ತಿಯನ್ನು **"ಎಲ್ಲಿದೆಯೋ ಹಾಗೆ" ಮತ್ತು "ಹೇಗಿದೆಯೋ ಹಾಗೆ"** ಆಧಾರದಲ್ಲಿ ಮಾರಾಟ ಮಾಡಲಾಗುವುದು. ಉದ್ದೇಶಿತ ಬಿಡ್‌ದಾರರು ಸ್ವತಃ ಆಸ್ತಿಯ ಶೀರ್ಷಿಕೆ, ಮಾಲೀಕತ್ವ, ಶಾಸನಬದ್ಧ ಅನುಮೋದನೆ, ಎನ್ಕಂಬರೆನ್ಸ್ ಇತರೆಗಳನ್ನು ತಾವೇ ದೃಢೀಕರಿಸಿಕೊಳ್ಳಬೇಕು.

ಉದ್ದೇಶಿತ ಬಿಡ್‌ದಾರರು ಹೆಚ್ಚಿನ ವಿವರಗಳಿಗಾಗಿ ಅಧಿಕೃತ ಅಧಿಕಾರಿಗಳು, ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., (ಕೇಂದ್ರ ಕಛೇರಿ) ಬೆಂಗಳೂರು – 560104, ನಂ.14, "ರಜತ ಭವನ" 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104, (ದೂ.080–23300497, 41159606), E-Mail: vjn@jscbl.com

ದಿನಾಂಕ : 05.07.2021
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಸುದ್ದಿ 2 ನಿಮಿಷ

ಪಾಲಿಕೆ ಮಾಜಿ ಸದಸ್ಯೆ ಹತ್ಯೆ; ರೌಡಿ ವಿಚಾರಣೆ

ಬೆಂಗಳೂರು: ಪಾಲಿಕೆಯ ಛಲವಾದಿಪಾಳ್ಯ ವಾರ್ಡ್‌ನ ಮಾಜಿ ಸದಸ್ಯೆ ರೇಖಾ ಕದಿರೇಶ್ ಹತ್ಯೆ ಪ್ರಕರಣದಲ್ಲಿ ರೌಡಿ ಸೆಲ್ವರಾಜ್ ಅಲಿಯಾಸ್ ಪೂಬಾಳನ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಹತ್ಯೆ ಪ್ರಕರಣದಲ್ಲಿ ಕದಿರೇಶ್ ಅಕ್ಕ ಮಾಲಾ, ಆಕೆಯ ಮಗ ಅರುಳ್ ಸೇರಿ ಏಳು ಮಂದಿಯನ್ನು ಬಂಧಿಸಿರುವ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಅಪರಾಧ ಸಂಚಿನಲ್ಲಿ ಭಾಗಿಯಾಗಿದ್ದ ಹಾಗೂ ಕೃತ್ಯದ ನಂತರ ಆರೋಪಿಗಳು ಪರಾರಿಯಾಗಲು ಸಹಾಯ ಮಾಡಿದ್ದವರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

'ವಿವೇಕನಗರ ಠಾಣೆ ರೌಡಿ ಪಟ್ಟಿಯಲ್ಲಿ ಹೆಸರಿರುವ ಸೆಲ್ವರಾಜ್, ಹತ್ಯೆ ಪ್ರಕರಣದ ಆರೋಪಿ ಪೀಟರ್ ಹಾಗೂ ಇತರರಿಗೆ ಸಹಾಯ ಮಾಡಿರುವ ಮಾಹಿತಿ ಸಿಕ್ಕಿದೆ. ಹೀಗಾಗಿ, ಆತನನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸರ್ಕಾರದ ನಿರ್ಲಕ್ಷ್ಯದಿಂದ ಮಕ್ಕಳ ಭವಿಷ್ಯ ಡೋಲಾಯಮಾನ'

ಬೆಂಗಳೂರು: 'ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಹದಗೆಡುತ್ತಿದೆ. ಸರ್ಕಾರದ ನಿರ್ಲ-ಕ್ಷ್ಯದಿಂದಾಗಿ ಮಕ್ಕಳ ಭವಿಷ್ಯ ಡೋಲಾಯಮಾನವಾಗಿದೆ. ಜನರ ಹಿತ ಕಾಯಬೇಕಾದ ಸರ್ಕಾರವು ಖಾಸಗಿ ಶಾಲಾ ಆಡಳಿತ ಮಂಡಳಿಯವರ ಜೊತೆ ಕೈಜೋಡಿಸಿ ಪೋಷಕರ ಜೀವ ಹಿಂಡುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಆರೋಪಿಸಿದರು.

ಪಕ್ಷವು ಆರಂಭಿಸಿರುವ 'ಶುಲ್ಕ ಇಳಿಸಿ; ಮಕ್ಕಳ ಭವಿಷ್ಯ ಉಳಿಸಿ' ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.

'ಕೋವಿಡ್ ಬಿಕ್ಕಟ್ಟಿನಿಂದಾಗಿ ಹಲವು ಪೋಷಕರು ಕೆಲಸ ಕಳೆದುಕೊಂ-ಡಿದ್ದಾರೆ. ಮಕ್ಕಳ ಶಾಲಾ ಶುಲ್ಕ ಪಾವತಿಸಲಾಗದ ಪರಿಸ್ಥಿತಿಗೆ ತಲುಪಿದ್ದಾರೆ. ಕೆಲವರು ಕೂಡಿಟ್ಟ ಹಣವನ್ನು ಕೊಟ್ಟಿದ್ದಾರೆ. ಕೆಲ ಶಾಲೆಯವರು ಶುಲ್ಕ ಭರಿಸದ ಮಕ್ಕಳನ್ನು ಆನ್‌ಲೈನ್ ತರಗತಿಗಳಿಂದ ಹೊರಗಿಟ್ಟಿದ್ದಾರೆ. ಅಂತಹ ಶಾಲೆಗಳ ಮೇಲೆ ಯಾವ ಕ್ರಮವನ್ನೂ ಜರುಗಿಸಿಲ್ಲ' ಎಂದು ಆಗ್ರಹಿಸಿದರು.

ನಗರ ಅಧ್ಯಕ್ಷ ಮೋಹನ್ ದಾಸರಿ, 'ಸರ್ಕಾರ ಕಣ್ಣಿದ್ದೂ ಕುರುಡಾಗಿದೆ. ಆಳುವವರಿಗೆ ಪೋಷಕರ ಕಷ್ಟಗಳು ಕಾಣುತ್ತಿಲ್ಲ. ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರು ಈ ಸಮಸ್ಯೆ ಬಗೆಹರಿಸಲು ತಾತ್ಸಾರ ತೋರುತ್ತಿದ್ದಾರೆ. ಖಾಸಗಿ ಶಾಲೆಯವರೊಂದಿಗೆ ಕೈಜೋಡಿಸಿರುವ ಅವರು ಸಚಿವ ಸ್ಥಾನದಲ್ಲಿ ಮುಂದುವರಿಯುವ ನೈತಿಕತೆಯನ್ನೇ ಕಳೆದುಕೊಂಡಿದ್ದಾರೆ' ಎಂದರು.

ಪಕ್ಷದ ಕಾರ್ಯಕರ್ತರು, ಅಭಿಯಾನವನ್ನು ಬೆಂಬಲಿಸಿ 7669100500 ಸಂಖ್ಯೆಗೆ ಮಿಸ್ಡ್ ಕಾಲ್ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಫಲಿತಾಂಶ ವಿಳಂಬ: ಅಭ್ಯರ್ಥಿಗಳ ಆಕ್ರೋಶ

ಕೆಪಿಎಸ್‌ಸಿ: ಕೆಎಎಸ್ ಮುಖ್ಯ ಪರೀಕ್ಷೆ ನಡೆದು 5 ತಿಂಗಳಾದರೂ ಫಲಿತಾಂಶ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 2017ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 106 ಹುದ್ದೆಗಳ ನೇಮಕಾತಿಗೆ ಮುಖ್ಯ ಪರೀಕ್ಷೆ ನಡೆಸಿ ಐದು ತಿಂಗಳು ಕಳೆದರೂ ಫಲಿತಾಂಶ ಪ್ರಕಟಿಸದಿರುವುದನ್ನು ಪ್ರತಿಭಟಿಸಿ ಸಹಿ ಸಂಗ್ರಹ, ಟ್ವಿಟರ್ ಅಭಿಯಾನದ ಮೂಲಕ ಹೋರಾಟ-ಕ್ಕಿಳಿಯಲು ಉದ್ಯೋಗ ಆಕಾಂಕ್ಷಿಗಳು ನಿರ್ಧರಿಸಿದ್ದಾರೆ.

'ಮುಖ್ಯ ಪರೀಕ್ಷೆಯ ಫಲಿತಾಂಶದ ಬಗ್ಗೆ ಇ- ಮೇಲ್ ಮೂಲಕ ವಿಚಾರಿಸಿದರೆ, 'ಪ್ರಕ್ರಿಯೆ ನಡೆಯುತ್ತಿದೆ. ಆದಷ್ಟು ಶೀಘ್ರದಲ್ಲಿ ಫಲಿತಾಂಶ ಪ್ರಕ-ಟಿಸಲಾಗುವುದು' ಎಂಬ ಉತ್ತರವನ್ನು ಕೆಪಿಎಸ್‌ಸಿ ನೀಡಿದೆ. ಫಲಿತಾಂಶ ನಿರೀ-ಕ್ಷೆಯಲ್ಲಿರುವವರ ಆತಂಕ, ದುಗುಡ ಕೆಪಿಎಸ್‌ಸಿಗೆ ಅರ್ಥವೇ ಆಗುವುದಿಲ್ಲ' ಎಂದು ಅಭ್ಯರ್ಥಿಗಳು ಆಕ್ರೋಶ ವ್ಯಕ್ತ-ಪಡಿಸಿದ್ದಾರೆ.

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆಗೆ ನಡೆದ ಮುಖ್ಯ ಪರೀಕ್ಷೆಯ ಆಸುಪಾಸಿನಲ್ಲಿ ಪ್ರಥಮ ದರ್ಜೆ ಸಹಾಯಕ, ನಿಯಂತ್ರಕ ಮತ್ತು ಲೆಕ್ಕ ಪರಿಶೋಧಕ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ನೇಮಕಾತಿಗೂ ಪರೀಕ್ಷೆ ನಡೆದಿದೆ. ಆ ಸ್ಪರ್ಧಾತ್ಮಕ ಪರೀಕ್ಷೆಗಳ ಫಲಿತಾಂಶಗಳು ಕೂಡಾ ಪ್ರಕಟ ಆಗಿಲ್ಲ. ಕೆಪಿಎಸ್‌ಸಿ ವಿಳಂಬ ನೀತಿಯಿಂದ ಮಾನಸಿಕವಾಗಿ ಕುಗ್ಗಿದ್ದೇವೆ. ಸರ್ಕಾರಿ ಹುದ್ದೆ ಗಿಟ್ಟಿಸಿಕೊ-ಳ್ಳುವ ಕನಸು ನನಸಾಗುವ ನಿರೀಕ್ಷೆಯೂ ಇಲ್ಲದಾಗುತ್ತಿದೆ' ಎಂದೂ ಉದ್ಯೋ-ಗಾಂಕ್ಷಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

'106 ಹುದ್ದೆಗಳ ನೇಮಕಾತಿಗೆ 2020 ಜ. 31ರಂದು ಅಧಿಸೂಚನೆ ಹೊರಡಿಸಿದ್ದ ಕೆಪಿಎಸ್‌ಸಿ, ಆ. 24ರಂದು ಪೂರ್ವಭಾವಿ ಪರೀಕ್ಷೆ ನಡೆಸಿತ್ತು. 2021ರ ಫೆ. 13ರಿಂದ 16ರವರೆಗೆ ಮುಖ್ಯ ಪರೀಕ್ಷೆ ನಡೆಸಿದೆ. ಮುಖ್ಯ ಪರೀಕ್ಷೆಯ ಫಲಿತಾಂಶದ ಬಗ್ಗೆ ವಿಚಾರಿಸಿದರೆ, ಇನ್ನೂ ಮೌಲ್ಯಮಾಪನ ಪ್ರಕ್ರಿಯೆಯೇ ನಡೆದಿಲ್ಲ ಎಂದು ಕೆಪಿಎಸ್‌ಸಿ ಮೂಲಗಳು ಹೇಳುತ್ತಿವೆ' ಎಂದೂ ಕೆಲವು ಅಭ್ಯರ್ಥಿಗಳು ದೂರಿದ್ದಾರೆ.

'ಈಗಾಗಲೇ ನಡೆದಿರುವ ನೇಮಕಾತಿ ಪರೀಕ್ಷೆಗಳ ಫಲಿತಾಂಶವನ್ನು ಕೆಪಿಎಸ್‌ಸಿ ತಕ್ಷಣ ಪ್ರಕಟಿಸಬೇಕು, ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಪ್ರತಿವರ್ಷ ಪರೀಕ್ಷೆ ನಡೆಸಬೇಕು, ಇಡಿ ಪ್ರಕ್ರಿಯೆನ್ನು ಪಾರದರ್ಶಕವಾ-ಗಿ ನಡೆಸಬೇಕು, ಪಿ.ಸಿ. ಹೋಟಾ ಸಮಿತಿಯ ಶಿಫಾರಸ್ಸಿನಂತೆ ಕೆಪಿಎಸ್‌ಸಿ ಸಿಬ್ಬಂದಿಯನ್ನು ಬದಲಾಯಿಸಬೇಕು' ಎಂದೂ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ

106 ಹುದ್ದೆಗಳ ಮುಖ್ಯ ಪರೀಕ್ಷೆಯ ಫಲಿತಾಂಶ ವಿಳಂಬ ಬಗ್ಗೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ ಅವರಿಗೆ ಕರೆ ಮಾಡಿದರೂ, ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಗುಂಡು ತಗುಲಿ ಯುವಕ ಸಾವು

ಬೇಲೂರು (ಹಾಸನ): ತಾಲ್ಲೂಕಿನ ಕಲ್ಲಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಶಿಕಾರಿಗೆ ಹೋಗಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ತಗುಲಿದ ಗುಂಡಿಗೆ ಕುಶಾವರ ಗ್ರಾಮದ ಮಧು (24) ಮೃತಪಟ್ಟಿದ್ದಾರೆ.

ಇವರೊಂದಿಗಿದ್ದ ಸ್ನೇಹಿತರು ಘಟನೆ ಬಳಿಕ ತಲೆ ಮರೆಸಿಕೊಂಡಿದ್ದಾ-ರೆ. ಪುತ್ರನ ಸಾವಿನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಮಧು, ಲಾಕ್‌ಡೌನ್‌ನಿಂದಾಗಿ ಸ್ವಗ್ರಾಮಕ್ಕೆ ಬಂದಿದ್ದರು. ಭಾನುವಾರ ಶುಂಠಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸ್ನೇಹಿತರು ಕರೆ ಮಾಡಿದ್ದಾರೆ. ಸುಮಾರು 10 ಮಂದಿ ಗೆಳೆಯರ ಜೊತೆ ಬಂದೂಕು ಹಿಡಿದು ಮಧ್ಯಾಹ್ನ 3.30ರ ಸುಮಾರಿಗೆ ಕಲ್ಲಹಳ್ಳಿ ಅರಣ್ಯಕ್ಕೆ ಶಿಕಾರಿಗೆ ಹೋಗಿದ್ದರು.

ಕೃಷಿ ವಿಶ್ವವಿದ್ಯಾಲಯದಿಂದ ರೈತ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವ-ವಿದ್ಯಾಲಯವು ಈ ಸಾಲಿನ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ 'ಅತ್ಯುತ್ತಮ ರೈತ ಪ್ರಶಸ್ತಿ' ಹಾಗೂ 'ರೈತ ಮಹಿಳೆ ಪ್ರಶಸ್ತಿ'ಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ರಾಜ್ಯಮಟ್ಟದಲ್ಲಿ ಎಚ್. ಡಿ.ದೇವೇಗೌಡ ಅತ್ಯುತ್ತಮ ರೈತ–ರೈತ ಮಹಿಳೆ ಪ್ರಶಸ್ತಿ, ಎಂ.ಎಚ್. ಮರಿಗೌಡ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಆರ್.ದ್ವಾರಕಿನಾಥ್ ಅತ್ಯುತ್ತಮ ರೈತ ಹಾಗೂ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಕ್ಯಾನ್‌ಬ್ಯಾಂಕ್ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ನೀಡಲಾಗುವುದು.

ಜಿಲ್ಲಾಮಟ್ಟದಲ್ಲಿ ಅತ್ಯುತ್ತಮ ರೈತ ಹಾಗೂ ರೈತ ಮಹಿಳೆ, ತಾಲ್ಲೂಕು ಮಟ್ಟದಲ್ಲಿ ಯುವ ರೈತ ಹಾಗೂ ಯುವ ರೈತ ಮಹಿಳೆ ಪ್ರಶಸ್ತಿಗಳನ್ನು ನೀಡಲಾಗುವುದು. ಈ ಅಕ್ಟೋ-ಬರ್‌ನಲ್ಲಿ ನಡೆಯಲಿರುವ ಕೃಷಿ ಮೇಳದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ಆಸಕ್ತರು ಅರ್ಜಿ ನಮೂನೆಗಳನ್ನು ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗಳು, ಕೃಷಿ ವಿಜ್ಞಾನ ಕೇಂದ್ರಗಳು ಅಥವಾ ವಿಶ್ವ-ವಿದ್ಯಾಲಯದ ವೆಬ್‌ಸೈಟ್ www.uasbangalore.edu.inನಿಂದಲೂ ಪಡೆದುಕೊಳ್ಳಬಹು-ದು. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೃಷಿ ವಿಸ್ತರಣಾ ನಿರ್ದೇಶಕರ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಂಗಳೂರು ಕೃಷಿ ವಿಶ್ವವಿದ್ಯಾಲಯ.

ಸಂಪರ್ಕ: 080-23330153

ವೈದ್ಯರೂ ಕನ್ನಡ ಕಲಿಯಲಿ: ನಾಗಾಭರಣ

'ಇಂಗ್ಲಿಷ್–ಕನ್ನಡ ವೈದ್ಯ ಪದಕೋಶ'ದ ಮೂರನೇ ಆವೃತ್ತಿಯನ್ನು ಟಿ.ಎಸ್‌.ನಾಗಾಭರಣ (ಮಧ್ಯ) ಬಿಡುಗಡೆ ಮಾಡಿದರು

ಬೆಂಗಳೂರು: 'ರಾಜ್ಯದಲ್ಲಿ ಶಿಕ್ಷಣ ಪಡೆದು ಇಲ್ಲಿಯೇ ಜೀವನ ರೂಪಿಸಿಕೊಂಡ ವೈದ್ಯರು, ರೋಗಿಗಳ ಜೊತೆಗಿನ ಸಂವಹನದ ದೃಷ್ಟಿಯಿಂದ-ಲಾದರೂ ಕನ್ನಡ ಭಾಷೆ ಕಲಿಯಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಸೋಮವಾರ ತಿಳಿಸಿದರು.

ಡಾ.ಬಿ.ಸಿ.ರಾಯ್ ಜನ್ಮದಿನದ ನಿಮಿತ್ತ ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ವೈದ್ಯಕೀಯ ವಲಯದಲ್ಲಿ ಕನ್ನಡ ಸೇವೆ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ. ಇದರ ಅಂಗವಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲ-ಯವು ಹೊರತಂದಿರುವ 'ಇಂಗ್ಲಿಷ್–ಕನ್ನಡ ವೈದ್ಯ ಪದಕೋಶ'ದ ಮೂರನೇ ಆವೃತ್ತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

'ವೈದ್ಯರು ನೀಡುವ ಔಷಧಿಯಿಂದ ಮಾತ್ರ ರೋಗಿಯ ಕಾಯಿಲೆ ವಾಸಿಯಾ-ಗುವುದಿಲ್ಲ. ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವೈದ್ಯಕೀಯ ವಲಯದವರು ಹೇಳುವ ಸಾಂತ್ವನದ ಮಾತುಗಳೂ ಕೂಡ ರೋಗಿಯ ಚೇತರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹೀಗಾಗಿ ವೈದ್ಯಕೀಯ ವಲಯದವರು ಆಯಾ ರಾಜ್ಯ ಭಾಷೆಗಳನ್ನು ಕಲಿತು ಸಂವಹನ ನಡೆಸಿದಲ್ಲಿ ಚಿಕಿತ್ಸೆಯ ಫಲಿತಾಂಶ ಹಾಗೂ ಬಳಕೆಯ ವಿಧಾನದಲ್ಲಿ ಹೆಚ್ಚಿನ ಪರಿಣಾಮಗಳನ್ನು ಕಾಣಬಹುದು' ಎಂದರು.

ಡಾ.ಡಿ.ಎಸ್.ಶಿವಪ್ಪ ಬರೆದಿರುವ 'ಇಂಗ್ಲಿಷ್–ಕನ್ನಡ ವೈದ್ಯ ಪದಕೋಶ'ದ ಮೊದಲ ಎರಡು ಆವೃತ್ತಿಗಳು ಕ್ರಮವಾಗಿ 1973 ಹಾಗೂ 1987ರಲ್ಲಿ ಬಿಡುಗಡೆಯಾಗಿದ್ದವು.

ದಂಡ ಪಾವತಿಗೆ 'ಪೇಟಿಎಂ'; ಕಮಿಷನರ್ ಚಾಲನೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ನಗದುರಹಿತ ದಂಡ ವಸೂಲಿಗೆ ಹಲವು ಮಾರ್ಗ ಕಂಡುಕೊಂಡಿರುವ ಪೊಲೀಸರು, ಇದೀಗ ಪೇಟಿಎಂ ಆ್ಯಪ್ ಮೂಲಕ ದಂಡ ಸಂಗ್ರಹಕ್ಕೆ ಮುಂದಾಗಿದ್ದಾರೆ.

ಸ್ಥಳದಲ್ಲೇ ದಂಡ ವಿಧಿಸಲು ಜನರಿಗೆ ಅನುಕೂಲವಾಗುವಂತೆ ಪೇಟಿಎಂ ಆ್ಯಪ್ ವ್ಯವಸ್ಥೆ ರೂಪಿಸಲಾಗಿದ್ದು, ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸೋಮವಾರ ಚಾಲನೆ ನೀಡಿದರು. ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಪೇಟಿಎಂ ಹಿರಿಯ ಸಲಹೆಗಾರ ವೇಣುಗೋಪಾಲ್, ಟೆಲಿಬ್ರಹ್ಮ ಕಂಪನಿಯ ರವಿ ಇದ್ದರು.

'ತಂತ್ರಜ್ಞಾನಕ್ಕೆ ತಕ್ಕಂತೆ ದಂಡ ವಸೂಲಿ ಪ್ರಕ್ರಿಯೆಯಲ್ಲೂ ಬದಲಾವಣೆ ಮಾಡಲಾಗುತ್ತಿದೆ. ಬೆಂಗಳೂರು ಒನ್ ಕೇಂದ್ರ, ಜಾಲತಾಣ, ಪಿಡಿಎ ಯಂತ್ರಗಳ ಮೂಲಕ ದಂಡ ಪಾವತಿಸಲು ಇದುವರೆಗೂ ಅವಕಾಶವಿತ್ತು. ಇದೀಗ ಪೇಟಿಎಂ ಮೂಲಕವೂ ದಂಡ ಪಾವತಿಗೆ ವ್ಯವಸ್ಥೆ ಮಾಡಲಾಗಿದೆ. ಮೊಬೈಲ್ ಬಳಕೆದಾರರೇ ಹೆಚ್ಚಿರುವ ಇಂದಿನ ದಿನಗಳಲ್ಲಿ ಹೊಸ ವ್ಯವಸ್ಥೆಯಿಂದ ಹಲವರಿಗೆ ಉಪಯೋ-ಗವಾಗಲಿದೆ' ಎಂದು ಪಂತ್ ಹೇಳಿದರು.

'ಟೆಲಿಬ್ರಹ್ಮ ಸಾಫ್ಟ್‌ವೇರ್ ಕಂಪನಿ ಸಹಯೋಗದಲ್ಲಿ ಪೇಟಿಎಂ ಕಂಪನಿ ಜೊತೆ ಸೇರಿ ಈ ಹೊಸ ವ್ಯವಸ್ಥೆ ರೂಪಿಸಲಾಗಿದೆ' ಎಂದರು.

ಪೇಟಿಎಂ ಮೂಲಕ ದಂಡ ಪಾವತಿಸುವ ವ್ಯವಸ್ಥೆಗೆ ಕಮಿಷನರ್ ಕಮಲ್ ಪಂತ್ ಅವರು ಮೊಬೈಲ್‌ನಲ್ಲಿ ಚಾಲನೆ ನೀಡಿದರು

ದಂಡ ಪಾವತಿ ಹೇಗೆ ?

- ಪೇಟಿಎಂ ಆ್ಯಪ್‌ನಲ್ಲಿ ರೀಚಾರ್ಜ್ ಅಥವಾ ಪೇ ಫಾರ್ ಚಲನ್ ಆಯ್ಕೆ ಮಾಡಿಕೊಳ್ಳಬೇಕು
- ಬೆಂಗಳೂರು ಸಂಚಾರ ಪೊಲೀಸ್ (ಬಿಟಿಪಿ) ಆಯ್ಕೆ ಮಾಡಿಕೊಂಡು ವಾಹನ ನೋಂದಣಿ ಸಂಖ್ಯೆ ನಮೂದಿಸಬೇಕು. ಚಲನ್ ವಿವರ ಪರಿಶೀಲಿಸಿದರು
- ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್ ಅಥವಾ ಯುಪಿಐ ಮೂಲಕ ಹಣ ಪಾವತಿಸಿ ರಸೀದಿ ಪಡೆದುಕೊಳ್ಳಬೇಕು

ಹೆಬ್ಬಾಳ ಶಾಸಕ ಬೈರತಿ ಸುರೇಶ್ ಅವರು ಹೆಬ್ಬಾಳದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಟ್ಯಾಬ್‌ಗಳನ್ನು ಉಚಿತವಾಗಿ ವಿತರಿಸಿದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಪಾಲಿಕೆಯ ಮಾಜಿ ಸದಸ್ಯರಾದ ಅಬ್ದುಲ್ ವಾಜೀದ್, ಆನಂದ್ ಕುಮಾರ್, ಹೆಬ್ಬಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿ, ಆರ್.ಟಿ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಜಾಮಿಲ್ ಅಹ್ಮದ್, ಕ್ಷೇತ್ರದ ಆರೋಗ್ಯಾಧಿಕಾರಿ ಡಾ.ವೇದಾವತಿ ಇದ್ದರು

₹ 1.85 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆಂಧ್ರಪ್ರದೇಶದಿಂದ ನಗರಕ್ಕೆ ಡ್ರಗ್ಸ್ ತಂದು ಮಾರಾಟ ಮಾಡುತ್ತಿದ್ದ ಜಾಲ ಭೇದಿಸಿರುವ ಮಡಿವಾಳ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಅನೀಸ್ (29), ಮೋಹನ್ ಕುಮಾರ್ (23), ಲೋಕೇಶ್ (35) ಹಾಗೂ ಜಬಿ (24) ಬಂಧಿತರು. ಅವರಿಂದ ₹ 1.85 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೇರಳದ ಅನೀಸ್, ದುಬೈಗೆ ಹೋಗಿ ಕಂಪನಿಯೊಂದರಲ್ಲಿ ಕೆಲವರ್ಷ ಕೆಲಸ ಮಾಡಿದ್ದ. ನಂತರ ಬೆಂಗಳೂರಿಗೆ ಬಂದು ನೆಲೆಸಿದ್ದ. ಪೆಡ್ಲರ್ ಜೊತೆ ಒಡನಾಟ ಹೊಂದಿದ್ದ ಅನೀಸ್, ಇತರೆ ಆರೋಪಿಗಳ ಜೊತೆ ಸೇರಿ ಕೃತ್ಯ ಎಸಗಲಾರಂಭಿಸಿದ್ದ.'

'ಸ್ಥಳೀಯ ನಿವಾಸಿಗಳಾದ ಲೋಕೇಶ್, ಮೋಹನ್‌ಕುಮಾರ್ ಹಾಗೂ ಜಬಿ ಸಹ ಕೃತ್ಯಕ್ಕೆ ಸಹಕರಿಸುತ್ತಿದ್ದರು. ತಮ್ಮದೇ ಜಾಲದ ಸದಸ್ಯರ ಮೂಲಕ ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಇತರರಿಗೆ ಡ್ರಗ್ಸ್ ಮಾರುತ್ತಿದ್ದರು' ಎಂದೂ ತಿಳಿಸಿದರು.

ಕಾರಿನಲ್ಲಿ ಸಾಗಿಸುತ್ತಿದ್ದ ಡ್ರಗ್ಸ್: 'ಆಂಧ್ರಪ್ರದೇಶದಲ್ಲಿ ಡ್ರಗ್ಸ್ ಖರೀದಿ ಮಾಡಿದ್ದ ಆರೋಪಿಗಳು, ಕಾರಿನಲ್ಲಿಟ್ಟುಕೊಂಡು ಬೆಂಗಳೂರಿಗೆ ಬರುತ್ತಿದ್ದರು. ಈ ಮಾಹಿತಿ ಆಧರಿಸಿ ಮಡಿವಾಳ ಠಾಣೆ ವ್ಯಾಪ್ತಿಯಲ್ಲಿ ಕಾರು ಅಡ್ಡಗಟ್ಟಿ ಪರಿಶೀಲನೆ ನಡೆಸಲಾಗಿತ್ತು' ಎಂದೂ ಪೊಲೀಸರು ಹೇಳಿದರು.

'ವೈಯಕ್ತಿಕ ಕೆಲಸ ನಿಮಿತ್ತ ಬೆಂಗಳೂರಿಗೆ ಬಂದಿರುವುದಾಗಿ ಆರೋಪಿಗಳು ಹೇಳಿದ್ದರು. ಅನುಮಾನಗೊಂಡು ಪರಿಶೀಲಿಸಿದಾಗ ಕಾರಿನಲ್ಲಿ ಡ್ರಗ್ಸ್ ಪತ್ತೆಯಾಯಿತು. ಈ ಬಗ್ಗೆ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿದರು.

ಕೊಕೇನ್ ಜಪ್ತಿ: ಮಹಿಳೆ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೊಕೇನ್ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ಮಹಿಳೆ ಸೇರಿ ಇಬ್ಬರು ವಿದೇಶಿ ಪ್ರಜೆಗಳನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಚ್‌ಬಿಆರ್ ಲೇಔಟ್ ಬಳಿಯ ಅಲ್ ಹಿಲಾಲ್ ನಗರದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ ₹ 4.70 ಲಕ್ಷ ಮೌಲ್ಯದ ಕೊಕೇನ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ತರುತ್ತಿದ್ದ ಆರೋಪಿಗಳು, ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಉದ್ಯಮಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಡ್ರಗ್ಸ್ ಖರೀದಿಸುತ್ತಿದ್ದರು' ಎಂದೂ ತಿಳಿಸಿದರು.

ಮಾಲೀಕರ ವಿಚಾರಣೆ: 'ಬಂಧಿತ ವಿದೇಶಿ ಪ್ರಜೆಗಳಿಗೆ ಸ್ಥಳೀಯ ವ್ಯಕ್ತಿಯೊಬ್ಬರು ಮನೆ ಬಾಡಿಗೆ ನೀಡಿದ್ದರು. ಆರೋಪಿಗಳ ಕೆಲಸವೇನು ಎಂಬುದನ್ನು ವಿಚಾರಿಸಿರಲಿಲ್ಲ. ಸೂಕ್ತ ದಾಖಲೆಗಳನ್ನೂ ಪಡೆದಿರಲಿಲ್ಲ. ಹೀಗಾಗಿ, ಮನೆ ಮಾಲೀಕನನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಪೊಲೀಸರು ಹೇಳಿದರು.

110 ಕೆ.ಜಿ ಗಾಂಜಾ ಜಪ್ತಿ

ಬೆಂಗಳೂರು: ಹೊರವರ್ತುಲ ರಸ್ತೆ ಮೂಲಕ ಸಾಗಿಸುತ್ತಿದ್ದ 110 ಕೆ.ಜಿ ಗಾಂಜಾ ಜಪ್ತಿ ಮಾಡಿರುವ ಪಶ್ಚಿಮ ವಿಭಾಗದ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ದೇವನಹಳ್ಳಿಯಿಂದ ಹೊರವರ್ತುಲ ರಸ್ತೆ ಮೂಲಕ ನಾಗರಬಾವಿ ಕಡೆಗೆ ಹೊರಟಿದ್ದ ವಾಹನದಲ್ಲಿ ಗಾಂಜಾ ಇದ್ದ ಬಗ್ಗೆ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗಾಂಜಾ ಜೊತೆಯಲ್ಲೇ ಆರೋಪಿಗಳ ಬಳಿ ಡ್ರ್ಯಾಗರ್ ಸಿಕ್ಕಿದೆ. ದಾರಿಯಲ್ಲಿ ಯಾರಾದರೂ ತಮ್ಮನ್ನು ತಡೆಯಲು ಬಂದರೆ ಅವರ ಮೇಲೂ ಹಲ್ಲೆ ಮಾಡಲು ಆರೋಪಿಗಳು ಯೋಚಿಸಿದ್ದರು. ಆರೋಪಿಗಳ ವಿರುದ್ಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದೂ ತಿಳಿಸಿದರು.

'ಮನೆಗೆಲಸ ಕಾರ್ಮಿಕರಿಗೆ ಪರಿಹಾರ ಪಾವತಿಸಲಾಗಿದೆಯೇ?'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಲಾಕ್‌ಡೌನ್ ಪರಿಹಾರ ಪಡೆಯಲು ಮನೆಗೆಲಸ ಕಾರ್ಮಿಕರು ನೋಂದಣಿ ಮಾಡಿಕೊಳ್ಳಲು ಇದ್ದ ತೊಡಕು ನಿವಾರಿಸಿ ಮಾರ್ಪಡಿಸಿರುವ ಮಾರ್ಗಸೂಚಿಯನ್ನು ಇತರ ಎಲ್ಲ ಅಸಂಘಟಿತ ಕಾರ್ಮಿಕರಿಗೂ ಅನ್ವಯಗೊಳಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮನೆಗೆಲಸ ಕಾರ್ಮಿಕರಿಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಎಲ್ಲಾ ಮನೆಗೆಲಸ ಕಾರ್ಮಿಕರಿಗೆ ಪರಿಹಾರ ಪಾವತಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಬೇಕು' ಎಂದು ತಿಳಿಸಿದೆ.

ಮನೆಗೆಲಸ ಕಾರ್ಮಿಕರು ಪರಿಹಾರಕ್ಕೆ ನೋಂದಣಿ ಮಾಡಿಕೊಳ್ಳಲು ಅನುಕೂಲ ಆಗುವಂತೆ ಮಾರ್ಗಸೂಚಿ ಬದಲಿಸಲಾಗುವುದು ಎಂದು ಕಾರ್ಮಿಕ ಇಲಾಖೆ ತಿಳಿಸಿತ್ತು. ಉದ್ಯೋಗದಾತರಿಂದ ಪ್ರಮಾಣ ಪತ್ರ, ದೂರವಾಣಿ ಸಂಖ್ಯೆ ಸಹಿತ ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ವಿವರ ಸಲ್ಲಿಸುವುದರೊಂದಿಗೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಈ ಸಂಬಂಧ ಜುಲೈ 2ರಂದು ಮಾರ್ಪಡಿಸಿದ ಅಧಿಸೂಚನೆ ಹೊರಡಿಸಲಾಗಿದೆ ಎಂದು ಕಾರ್ಮಿಕ ಇಲಾಖೆ ವಿವರಿಸಿತು.

ವಿಚಾರಣೆಯನ್ನು ಪೀಠ ಜುಲೈ 13ಕ್ಕೆ ಮುಂದೂಡಿತು.

ದೆಹಲಿ ಸಮೀಪ 3.7 ತೀವ್ರತೆಯ ಭೂಕಂಪ

ನವದೆಹಲಿ (ಪಿಟಿಐ): ಸೋಮವಾರ ರಾತ್ರಿ ಹರಿಯಾಣದ ಝೂಜ್ಜರ್‌ನಲ್ಲಿ 3.7 ರಷ್ಟು ತೀವ್ರತೆಯ ಭೂಕಂಪ ಸಂಭವಿಸಿದೆ. ಇದರಿಂದ ದೆಹಲಿ ಮತ್ತು ಹತ್ತಿರದ ಪ್ರದೇಶಗಳಲ್ಲಿ ಭೂಮಿ ಕಂಪಿಸಿದ ಅನುಭವ ಉಂಟಾಗಿದೆ ಎಂದು ರಾಷ್ಟ್ರೀಯ ಭೂಕಂಪ ವಿಜ್ಞಾನ ಕೇಂದ್ರ (ಎನ್‌ಸಿಎಸ್) ತಿಳಿಸಿದೆ.

ರಿಕ್ಟರ್ ಮಾಪಕದಲ್ಲಿ 3.7 ರಷ್ಟು ತೀವ್ರತೆ ದಾಖಲಾಗಿದೆ. ರಾತ್ರಿ 10.36 ಕ್ಕೆ 5 ಕಿ.ಮೀ ಆಳದಲ್ಲಿ ಕಂಪನದ ಕೇಂದ್ರ ಬಿಂದು ಪತ್ತೆಯಾಗಿದೆ ಎಂದು ಎನ್‌ಸಿಎಸ್ ತಿಳಿಸಿದೆ.

ದೆಹಲಿಯಲ್ಲಿ ಜೂನ್ 20 ರಂದು 2.1 ರಷ್ಟು ತೀವ್ರತೆಯ ಲಘು ಭೂಕಂಪ ಸಂಭವಿಸಿತ್ತು.

ನಗರದ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಸೋಮವಾರ ಮೈಸೂರು ಕಡೆಗೆ ಹೊರಟ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕಂಡು ಬಂದ ಪ್ರಯಾಣಿಕರು (ಚಿತ್ರ:1) ನಗರದ ಮಂತ್ರಿಮಾಲ್ ಎದುರು ಸೋಮವಾರ ಕಂಡು ಬಂದ ನೋಟ(ಚಿತ್ರ:2) ನಗರದ ಸಂಜಯನಗರದಲ್ಲಿನ ರಾಧಾಕೃಷ್ಣ ದೇಗುಲದಲ್ಲಿ ಸೋಮವಾರ ಭಕ್ತರು ದೇವರ ದರ್ಶನ ಪಡೆದರು (ಚಿತ್ರ:3) – ಪ್ರಜಾವಾಣಿ ಚಿತ್ರಗಳು

ಸಾರ್ವಜನಿಕ ಸಾರಿಗೆ ಪೂರ್ಣ ಪ್ರಮಾಣದಲ್ಲಿ ಆರಂಭ– ಪುನರಾರಂಭಗೊಂಡ ಶಾಪಿಂಗ್ ಮಾಲ್‌ಗಳು

ಸಹಜ ಸ್ಥಿತಿಗೆ ಮರಳಿದ ಉದ್ಯಾನ ನಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ಎರಡೂವರೆ ತಿಂಗಳ ಬಳಿಕ ನಗರ ಸಹಜ ಸ್ಥಿತಿಯತ್ತ ಮರಳಿತು. ಮೆಟ್ರೊ ರೈಲು, ಬಿಎಂಟಿಸಿ ಬಸ್‌ಗಳು ಸೋಮವಾರ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆಗೆ ಇಳಿದರೆ, ಶಾಪಿಂಗ್ ಮಾಲ್, ರೆಸ್ಟೋರೆಂಟ್‌ಗಳೂ ಗ್ರಾಹಕರಿಗೆ ತೆರೆದುಕೊಂಡವು. ಜಿಮ್‌ಗಳೂ ಪುನರಾರಂಭಗೊಂಡರೆ, ದೇಗುಲಗಳಲ್ಲಿ ಭಕ್ತರ ಸಡಗರ ಕಂಡು ಬಂತು.

ದೇವಾಲಯ ಮತ್ತು ಶಾಪಿಂಗ್ ಮಾಲ್‌ಗಳ ಪ್ರವೇಶ ದ್ವಾರಗಳಲ್ಲಿ ಥರ್ಮಲ್ ಸ್ಕ್ರೀನಿಂಗ್ ಯಂತ್ರಗಳನ್ನು ಅಳವಡಿಸಲಾಗಿತ್ತಲ್ಲದೆ, ಸ್ಯಾನಿಟೈಸರ್ ವ್ಯವಸ್ಥೆ ಮಾಡಲಾಗಿತ್ತು. ಮಾಸ್ಕ್ ಧರಿಸಿದ್ದವರಿಗೆ ಮಾತ್ರ ಪ್ರವೇಶಾವಕಾಶವಿತ್ತು. ಅಂತರ ನಿಯಮ ಪಾಲನೆಯತ್ತ ಸಿಬ್ಬಂದಿ ಗಮನ ನೀಡಿದ್ದರು.

ಹೋಟೆಲ್ ಮತ್ತು ಬಾರ್‌ಗಳಲ್ಲಿ ರಾತ್ರಿ 9ರವರೆಗೆ ಅವಕಾಶ ಇದ್ದುದರಿಂದ ಈ ಸ್ಥಳಗಳಲ್ಲಿಯೂ ಗ್ರಾಹಕರ ಸಂಖ್ಯೆ ಹೆಚ್ಚಾಗಿತ್ತು. 20 ಸಾವಿರಕ್ಕೂ ಹೆಚ್ಚು ಹೋಟೆಲ್–ರೆಸ್ಟೋರೆಂಟ್‌ಗಳು ಪೂರ್ಣ ಪ್ರಮಾಣದಲ್ಲಿ ಸೇವೆಯನ್ನು ಪುನರಾರಂಭಿಸಿದವು.

ಕಳೆಗಟ್ಟಿದ ಶಾಪಿಂಗ್ ಮಾಲ್: ನಗರದಲ್ಲಿರುವ ಸುಮಾರು 70 ಶಾಪಿಂಗ್ ಮಾಲ್‌ಗಳು ಸೋಮವಾರ ಕಳೆಗಟ್ಟಿದ್ದವು. ಬೆಳಿಗ್ಗೆ 10ರಿಂದ ರಾತ್ರಿ 9ರವರೆಗೆ ತೆರೆದಿದ್ದವು. ಸೀಮಿತ ಸಂಖ್ಯೆಯಲ್ಲಿ ಪ್ರವೇಶಾವಕಾಶ ಇದ್ದುದರಿಂದ ಗ್ರಾಹಕರ ಸಂಖ್ಯೆ ಹೆಚ್ಚಾಗಿರಲಿಲ್ಲ. ಹೋಟೆಲ್, ಬಾರ್‌ಗಳಲ್ಲಿ ಕಂಡು ಬಂದ ಜನಸಂದಣಿ ಶಾಪಿಂಗ್ ಮಾಲ್‌ಗಳಲ್ಲಿ ಕಂಡು ಬರಲಿಲ್ಲ. ಮಾಲ್‌ಗಳಲ್ಲಿ ಥಿಯೇಟರ್‌ಗಳಲ್ಲಿ ಚಿತ್ರಪ್ರದರ್ಶನಕ್ಕೆ ಮತ್ತು ಮಕ್ಕಳ ಆಟಗಳಿಗೆ ಅವಕಾಶ ಇಲ್ಲದಿದ್ದರಿಂದಲೂ ಹೆಚ್ಚು ಜನ ಕಂಡು ಬರಲಿಲ್ಲ.

ಬ್ರಿಗೇಡ್ ರಸ್ತೆ ಬಳಿಯಲ್ಲಿನ ಗರುಡಾ ಮಾಲ್‌ನಲ್ಲಿ ಒಂದು ಲಸಿಕಾ ಕೇಂದ್ರವನ್ನು ತೆರೆಯುವ ಮೂಲಕ ಪುನರಾರಂಭಿಸಲಾಯಿತು. ಮಾಲ್‌ನ ಸಿಬ್ಬಂದಿ ಮತ್ತು ಕೆಲವು ಗ್ರಾಹಕರಿಗೆ ಲಸಿಕೆ ಹಾಕಲಾಯಿತು.

ದೇಗುಲಗಳಲ್ಲಿ ದರ್ಶನ: ನಗರದ ದೇವಸ್ಥಾನಗಳಲ್ಲಿ ಯಾವುದೇ ವಿಶೇಷ ಸೇವೆಗಳು ಇರಲಿಲ್ಲ. ದರ್ಶನಕ್ಕೆ ಮಾತ್ರ ಅವಕಾಶ ಇದ್ದುದರಿಂದ ಭಕ್ತರು ಬಂದು ದೇವರ ದರ್ಶನ ಪಡೆದರು. ಅಂತರ ಕಾಯ್ದುಕೊಳ್ಳಲು ಅನುಕೂಲವಾಗುವಂತೆ ದೇವಾಲಯಗಳ ಆವರಣಗಳಲ್ಲಿ ವೃತ್ತಾಕಾರದ ಪಟ್ಟಿಗಳನ್ನು ಹಾಕಲಾಗಿತ್ತು. ಪ್ರಮುಖ ದೇವಾಲಯಗಳ ಮುಖ್ಯ ದ್ವಾರದಲ್ಲೇ ಭಕ್ತರ ಕೈಗೆ ಸ್ಯಾನಿಟೈಸರ್ ಹಾಕಲಾಗುತ್ತಿತ್ತು. ಅಲ್ಲದೆ, ದೇಹದ ಉಷ್ಣಾಂಶ ಪರೀಕ್ಷಿಸಿ ಒಳಬಿಡಲಾಗುತ್ತಿತ್ತು. ತೀರ್ಥ, ಪ್ರಸಾದ ವಿನಿಯೋಗ ಇರಲಿಲ್ಲ. ನಗರದ ಬನಶಂಕರಿ ದೇವಾಲಯಕ್ಕೆ ಸುಮಾರು 700 ಮಂದಿ ಬಂದು ದೇವಿಯ ದರ್ಶನ ಪಡೆದರು.

ತರಕಾರಿ, ಹೂವು ಮತ್ತು ಹಣ್ಣಿನ ಮಾರುಕಟ್ಟೆಗಳಲ್ಲಿ ಎಂದಿನ ಜನಸಂದಣಿ ಕಂಡು ಬಂತು. ಪ್ರವಾಸಿ ತಾಣಗಳನ್ನು ತೆರೆಯಲೂ ಅವಕಾಶವಿದ್ದುದರಿಂದ ನಗರದ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಪ್ರವಾಸಿಗರು ಭೇಟಿ ನೀಡಿ ಪ್ರಾಣಿ–ಪಕ್ಷಿಗಳನ್ನು ವೀಕ್ಷಿಸಿದರು.

ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

12,16,181 ▲ ಒಟ್ಟು ಸೋಂಕಿತರು

15,395 ▲	11,85,110 ▲	15,675 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಸೋಮವಾರದ ಏರಿಕೆ	
ಹೊಸ ಪ್ರಕರಣ	520 ▲
ಗುಣಮುಖ	3,136 ▲
ಸಾವು	7 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮೆಟ್ರೊ ರೈಲು: ಲಕ್ಷ ಜನರ ಪ್ರಯಾಣ

ನಮ್ಮ ಮೆಟ್ರೊ ರೈಲುಗಳು ದಿನದಲ್ಲಿ 13 ತಾಸು ಸೇವೆ ನೀಡಿದ್ದು, ಮೊದಲ ದಿನ ಒಂದು ಲಕ್ಷಕ್ಕೂ ಹೆಚ್ಚು ಜನ ಪ್ರಯಾಣಿಸಿದರು. ಸ್ಮಾರ್ಟ್ ಕಾರ್ಡ್ ಮಾತ್ರವಲ್ಲದೆ ಟೋಕನ್ ಖರೀದಿಸಿ ಪ್ರಯಾಣಿಸಲು ಅವಕಾಶ ಇದ್ದುದರಿಂದ ಕಳೆದ ವಾರಕ್ಕಿಂತ ಹೆಚ್ಚು ಪ್ರಯಾಣಿಕರು ಕಂಡು ಬಂದರು.

ದಟ್ಟಣೆಯ ಅವಧಿಯಲ್ಲಿ ಮೆಜೆಸ್ಟಿಕ್‌ನ ಕೆಂಪೇಗೌಡ ನಿಲ್ದಾಣ ಮತ್ತು ವಿಧಾನಸೌಧದ ಡಾ.ಬಿ.ಆರ್. ಅಂಬೇಡ್ಕರ್ ನಿಲ್ದಾಣ ಸೇರಿದಂತೆ ಪ್ರಮುಖ ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಕಂಡು ಬಂತು. ಬೇರೆ ಅವಧಿಯಲ್ಲಿ, ಮೆಜೆಸ್ಟಿಕ್ ನಿಲ್ದಾಣ ಹೊರತು ಪಡಿಸಿ ಉಳಿದ ನಿಲ್ದಾಣಗಳಲ್ಲಿ ಬೆರಳೆಣಿಕೆಯಷ್ಟು ಪ್ರಯಾಣಿಕರಿದ್ದರು. ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ನೇರಳೆ ಮತ್ತು ಹಸಿರು ಮಾರ್ಗಗಳು ಸೇರಿ 220 ಟ್ರಿಪ್‌ಗಳಲ್ಲಿ 1,06,069 ಜನ ಪ್ರಯಾಣಿಸಿದರು ಎಂದು ಬಿಎಂಆರ್‌ಸಿಎಲ್ ಹೇಳಿದೆ.

ಬಿಎಂಟಿಸಿ ಬಸ್‌ನಲ್ಲಿ 15 ಲಕ್ಷ ಜನರ ಪ್ರಯಾಣ

ಬಿಎಂಟಿಸಿಯ 4,500 ಬಸ್‌ಗಳು 40 ಸಾವಿರ ಟ್ರಿಪ್‌ನಲ್ಲಿ ಸೋಮವಾರ ರಸ್ತೆಗಿಳಿದವು. ಸುಮಾರು 15 ಲಕ್ಷದಿಂದ 16 ಲಕ್ಷ ಜನ ಪ್ರಯಾಣಿಸಿದರು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮೆಜೆಸ್ಟಿಕ್, ಶಾಂತಿನಗರ, ಮೈಸೂರು ರಸ್ತೆಯ ಸ್ಯಾಟಲೈಟ್ ನಿಲ್ದಾಣ ಸೇರಿದಂತೆ ಹಲವು ಪ್ರಮುಖ ನಿಲ್ದಾಣಗಳಲ್ಲಿ ಜನ ದಟ್ಟಣೆ ಹೆಚ್ಚಾಗಿತ್ತು.

ರಾತ್ರಿ ಪಾಳಿ ಬಸ್‌ಗಳು ಬೆಳಿಗ್ಗೆ ಆರು ಗಂಟೆ ಸುಮಾರಿಗೆ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬಂದಿದ್ದವು. ಈ ವೇಳೆ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಬೆಳಿಗ್ಗೆ 10ರ ವೇಳೆಗೆ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಯಿತು. ಶೇ 100ರಷ್ಟು ಆಸನ ಭರ್ತಿ ಪ್ರಯಾಣಕ್ಕೆ ಅವಕಾಶ ಇದ್ದುದರಿಂದ ಅನುಕೂಲವಾಯಿತು. ಕೋವಿಡ್ ಮಾರ್ಗಸೂಚಿಗಳ ಪಾಲನೆಗೆ ಸಿಬ್ಬಂದಿ ಹರಸಾಹಸ ಪಡುತ್ತಿದ್ದುದು ಕಂಡು ಬಂತು.

ಮಳೆ: ಮನೆಗೆ ನುಗ್ಗಿದ ನೀರು, ಉರುಳಿ ಬಿದ್ದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದ್ದು, ಕೆಲವೆಡೆ ಮರಗಳು ಉರುಳಿಬಿದ್ದಿದ್ದವು.

ಮೋಡ ಕವಿದ ವಾತಾವರಣ ಜೊತೆಯಲ್ಲೇ ನಗರದಲ್ಲಿ ಉತ್ತಮ ಮಳೆ ಸುರಿಯಿತು. ರಾಜಗೋಪಾಲನಗರ ಬಳಿಯ ಎಂ.ಎಸ್. ಲೇಔಟ್‌ನಲ್ಲಿರುವ ಕೆಲ ಮನೆಗಳಿಗೆ ನೀರು ನುಗ್ಗಿತ್ತು.

ಜೋರಾಗಿ ಮಳೆ ಸುರಿಯುವಾಗಲೇ ರಸ್ತೆಯಲ್ಲಿ ಹೊಳೆಯಂತೆ ನೀರು ಹರಿಯಿತು. ಅದೇ ನೀರು ಮನೆಯೊಳಗೆ ನುಗ್ಗಿದ್ದರಿಂದ ಪೀಠೋಪಕರಣ ಹಾಗೂ ಇತರೆ ವಸ್ತುಗಳು ನೀರಿನಲ್ಲೇ ತೇಲಾಡುತ್ತಿದ್ದವು. ಕೆಲ ನಿವಾಸಿಗಳು ನೀರಿನಲ್ಲೇ ನಿಂತುಕೊಂಡಿದ್ದರು.

ನೀರಿನ ಹರಿಯುವಿಕೆ ಪ್ರಮಾಣ ಹೆಚ್ಚಿದ್ದರಿಂದ ನಿವಾಸಿಗಳು ಎಷ್ಟೇ ಪ್ರಯತ್ನಪಟ್ಟರೂ ನೀರನ್ನು ಸಂಪೂರ್ಣವಾಗಿ ಹೊರಹಾಕಲು ಸಾಧ್ಯವಾಗಲಿಲ್ಲ. ನಸುಕಿನ ಸಮಯದಲ್ಲಿ ಮಳೆ ಕಡಿಮೆಯಾದ ನಂತರವೇ ನಿವಾಸಿ ನೀರು ಹೊರ ಹಾಕಿದರು. ಈ ಬಗ್ಗೆ ದೂರು ಬರುತ್ತಿದ್ದಂತೆ ಬಿಬಿಎಂಪಿ ಸಿಬ್ಬಂದಿಯೂ ಸ್ಥಳಕ್ಕೆ ಹೋಗಿ ನೀರು ಹರಿದುಹೋಗಲು ದಾರಿ ಮಾಡಿದರು.

ಮಳೆ ಸುರಿಯುವ ಸಂದರ್ಭದಲ್ಲೇ ನಗರದಲ್ಲಿ ಮರಗಳು ಉರುಳಿಬಿದ್ದಿವೆ.

ಮಲ್ಲೇಶ್ವರ ರೈಲ್ವೆ ನಿಲ್ದಾಣ ರಸ್ತೆ ಹಾಗೂ ವೈಟ್‌ಫೀಲ್ಡ್ ಮುಖ್ಯರಸ್ತೆಯಲ್ಲಿ ಮರಗಳು ನೆಲಕ್ಕುರುಳಿದ್ದವು. ಇದರಿಂದಾಗಿ ಸೋಮವಾರ ಬೆಳಿಗ್ಗೆ ರಸ್ತೆಯಲ್ಲಿ ವಾಹನಗಳ ಓಡಾಟಕ್ಕೆ ತೊಂದರೆ ಉಂಟಾಯಿತು. ಸಂಚಾರ ದಟ್ಟಣೆಯೂ ಕಂಡುಬಂತು. ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ, ಮರಗಳನ್ನು ಕತ್ತರಿಸಿ ಬೇರೆಡೆ ಸಾಗಿಸಿದರು. ನಂತರವೇ ಸಂಚಾರ ಸ್ಥಿತಿ ಯಥಾಸ್ಥಿತಿಗೆ ಬಂತು.

‘ನಗರದಲ್ಲಿ ಮಳೆ ಜೋರಾಗಿದ್ದು, ಹಲವೆಡೆ ರಸ್ತೆಯಲ್ಲಿ ನೀರು ಹರಿದಿದೆ. ಮನೆಗಳಿಗೆ ನೀರು ನುಗ್ಗಿದ್ದ ಹಾಗೂ ಮರಗಳು ಬಿದ್ದ ಬಗ್ಗೆ ಮಾತ್ರ ದೂರುಗಳು ಬಂದಿದೆ. ಉಳಿದಂತೆ ಯಾವುದೇ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಚಿಕ್ಕಬಾಣಾವರ ಕೆರೆ ಕೋಡಿಯಲ್ಲಿ ಭಾನುವಾರ ರಾತ್ರಿ ಸುರಿದ ಮಳೆಗೆ ಕಾಣಿಸಿಕೊಂಡ ನೊರೆ

ಚಿಕ್ಕಬಾಣಾವರ: ಕೆರೆಯಲ್ಲಿ ಉಕ್ಕಿದ ನೊರೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ಚಿಕ್ಕಬಾಣಾವರ ಗ್ರಾಮದ ಕೆರೆಯಲ್ಲಿ ನೊರೆ ಉಕ್ಕಿ ಬಂದಿದೆ.

ಶೆಟ್ಟಿಹಳ್ಳಿ, ಬಾಗಲಗುಂಟೆ ಮತ್ತು ಮೆದರಹಳ್ಳಿ ಗ್ರಾಮದಿಂದ ಹರಿದು ಬರುವ ಚರಂಡಿ ನೀರಿನಿಂದಾಗಿ ಇಡೀ ಜಲಕಾಯ ಕಲುಷಿತಗೊಂಡಿದೆ. ಕೆಲವು ಕಾರ್ಖಾನೆಗಳಿಂದ ಹೊರ ಬರುತ್ತಿರುವ ರಾಸಾಯನಿಕ ತ್ಯಾಜ್ಯದ ನೀರು ಕೆರೆಯ ಒಡಲನ್ನು ತುಂಬುತ್ತಿದೆ. ರಾಸಾಯನಿಕ ನೀರು ಕೆರೆಯಲ್ಲಿ ಇರುವುದರಿಂದ ಮಳೆಯ ನೀರು ಮಿಶ್ರಣಗೊಂಡು ನೊರೆ ಉಕ್ಕಿರುವ ಸಾಧ್ಯತೆ ಇದೆ ಎನ್ನುತ್ತಾರೆ ತಜ್ಞರು.

‘ಕೆರೆಯು ಐದಾರು ವರ್ಷಗಳಿಂದ ಸಂಪೂರ್ಣವಾಗಿ ಹಾಳಾಗಿದೆ. ಪ್ರತಿ ಚುನಾವಣೆಯ ವೇಳೆಯಲ್ಲಿ ಕೆರೆಯನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ರಾಜಕೀಯ ಮುಖಂಡರು ಭರವಸೆ ನೀಡುತ್ತಾರೆ. ಆದರೆ, ಈವರೆಗೆ ಅಭಿವೃದ್ಧಿ ಕೆಲಸ ಆಗಿಲ್ಲ’ ಎಂದು ಗ್ರಾಮದ ನಿವಾಸಿ ಆನಂದ್ ದೂರಿದರು.

‘ಸೊಳ್ಳೆಗಳು ವಿಪರೀತವಾಗಿ ಕೆರೆಯ ಅಸುಪಾಸು ಇರುವ ಮನೆಗಳ ನಿವಾಸಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಕೆಲವು ಮಾಂಸದಂಗಡಿಯವರು ತ್ಯಾಜ್ಯವನ್ನು ಗೋಣಿಚೀಲದಲ್ಲಿ ತುಂಬಿ ಕೆರೆಯಲ್ಲಿ ಬಿಸಾಕಿ ಹೋಗುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದ ಜಲಕಾಯವು ಕಲುಷಿತಗೊಂಡಿದೆ’ ಎಂದು ಗ್ರಾಮದ ನಿವಾಸಿ ಪ್ರವೀಣ್ ಬೇಸರ ವ್ಯಕ್ತಪಡಿಸಿದರು.

‘ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಕೆರೆ ಅಭಿವೃದ್ಧಿಗೆ ₹30 ಕೋಟಿ ಮಂಜೂರು ಮಾಡಿಸಲಾಗಿತ್ತು. ಅಭಿವೃದ್ಧಿಗೆ ನೀಲನಕ್ಷೆ ರೂಪಿಸಲಾಗಿತ್ತು. ಬಿಜೆಪಿ ಸರ್ಕಾರ ಬರುತ್ತಿದ್ದಂತೆ ಅನುದಾನವನ್ನು ಕಿತ್ತುಕೊಳ್ಳಲಾಯಿತು. ಅನುದಾನ ಬಿಡುಗಡೆ ಮಾಡುವಂತೆ ಮತ್ತೆ ಒತ್ತಡ ಹೇರುತ್ತೇನೆ’ ಎಂದು ಶಾಸಕ ಆರ್.ಮಂಜುನಾಥ್ ಹೇಳಿದರು.

ಕೋವಿಡ್: ನ್ಯಾಯಾಂಗದಿಂದ ₹3.38 ಕೋಟಿ ನೆರವು

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿಗಳು ಪಾವತಿಸಿದ (ಆನ್‌ಲೈನ್ ಪಾವತಿ) ₹11.6 ಲಕ್ಷ ಸೇರಿ ಮುಖ್ಯಮಂತ್ರಿಗಳ ಕೋವಿಡ್ ಪರಿಹಾರ ನಿಧಿಗೆ ₹3.38 ಕೋಟಿ ಕೊಡುಗೆಯನ್ನು ಕರ್ನಾಟಕ ನ್ಯಾಯಾಂಗ ನೀಡಿದೆ.

ನ್ಯಾಯಾಂಗ ಅಧಿಕಾರಿಗಳು (₹1.15 ಕೋಟಿ), ಹೈಕೋರ್ಟ್ ಸಿಬ್ಬಂದಿ (₹43.97 ಲಕ್ಷ), ಜಿಲ್ಲಾ ನ್ಯಾಯಾಂಗದ ಸಿಬ್ಬಂದಿ (₹1.66 ಕೋಟಿ) ಒಂದು ದಿನದ ವೇತನವನ್ನು ಪರಿಹಾರ ನಿಧಿಗೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ಕೋವಿಡ್ ದೃಢ ಪ್ರಮಾಣ ಶೇ 1.94ಕ್ಕೆ ಏರಿಕೆ

ಬೆಂಗಳೂರು: ಲಾಕ್‌ಡೌನ್ ತೆರವುಗೊಳಿಸಿರುವ ಬೆನ್ನಲ್ಲೇ ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಮತ್ತೆ ಏರುಮುಖವಾಗಿದೆ. ಸೋಮವಾರ 2,848 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಹೀಗಾಗಿ ಸೋಂಕು ದೃಢ ಪ್ರಮಾಣವು ಶೇ 1.94ಕ್ಕೆ ಏರಿದೆ.

ಹಿಂದಿನ 24 ಗಂಟೆಗಳಲ್ಲಿ 67 ಮಂದಿ ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.35ಕ್ಕೆ ತಗ್ಗಿದೆ. ರಾಜ್ಯದಲ್ಲಿ ಈವರೆಗೆ 35,434 ಮಂದಿ ಕೋವಿಡ್‌ನಿಂದ ಅಸುನೀಗಿದ್ದಾರೆ.

ಸೋಮವಾರ 5,631 ಜನ ಚೇತರಿಸಿಕೊಂಡಿದ್ದು, ಗುಣಮುಖರ ಒಟ್ಟು ಸಂಖ್ಯೆಯು 27.79 ಲಕ್ಷಕ್ಕೆ ಹೆಚ್ಚಿದೆ.

ಬೆಂಗಳೂರಿನಲ್ಲಿ ಮತ್ತೆ ಹೊಸ ಪ್ರಕರಣಗಳ ಸಂಖ್ಯೆ 500ರ ಗಡಿ ದಾಟಿದೆ. ಒಂದು ದಿನದಲ್ಲಿ 520 ಮಂದಿ ರೋಗದಿಂದ ಬಾಧಿತರಾಗಿದ್ದಾರೆ. ದಕ್ಷಿಣ ಕನ್ನಡ (265), ಹಾಸನ (383), ಮೈಸೂರು (371) ಜಿಲ್ಲೆಗಳಲ್ಲೂ ಅಧಿಕ ಪ್ರಕರಣಗಳು ವರದಿಯಾಗಿವೆ. 14 ಜಿಲ್ಲೆಗಳಲ್ಲಿ ಪ್ರಕರಣಗಳು ಎರಡಂಕಿಯಷ್ಟಿವೆ. ಏಳು ಜಿಲ್ಲೆಗಳಲ್ಲಿ ಒಂದಂಕಿಗೆ ತಗ್ಗಿದೆ. ರಾಜ್ಯದಲ್ಲಿ ಇದುವರೆಗೆ 28.56 ಲಕ್ಷ ಮಂದಿ ಸೋಂಕಿತರಾದಂತಾಗಿದೆ.

ಒಂದು ದಿನದಲ್ಲಿ 1.46 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸಕ್ರಿಯ ಪ್ರಕರಣಗಳ ರಾಜ್ಯದಲ್ಲಿ ಸದ್ಯ 41,996 ಜನ ಆಸ್ಪತ್ರೆ, ಮನೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಎರಡು ಸೆಮಿಸ್ಟರ್ ಪರೀಕ್ಷೆಯಿಂದ ಒತ್ತಡ: ವಿದ್ಯಾರ್ಥಿಗಳ ಪ್ರತಿಭಟನೆ

ಬೆಂಗಳೂರು: ಹಿಂದಿನ ಸೆಮಿಸ್ಟರ್‌ನ ಪರೀಕ್ಷೆಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಹೋರಾಟ ಸಮಿತಿ ಹಾಗೂ ಎಐಡಿಎಸ್‌ಒ ನೇತೃತ್ವದಲ್ಲಿ ಜ್ಞಾನಭಾರತಿಯ ಆಡಳಿತ ಕಚೇರಿ ಎದುರು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

‘ಕೋವಿಡ್‌ನಿಂದ ಎದುರಾಗಿರುವ ಸವಾಲುಗಳ ನಡುವೆಯೇ ಒಂದು ತಿಂಗಳಲ್ಲಿ ಎರಡು ಪರೀಕ್ಷೆಯ ವಿಚಾರ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಆಘಾತ ಉಂಟು ಮಾಡಿದೆ. ಇದೊಂದು ಅವೈಜ್ಞಾನಿಕ ನಿರ್ಣಯ’ ಎಂದು ದೂರಿದರು.

‘ಒಂದೇ ತಿಂಗಳಿನಲ್ಲಿ ಎರಡು ಸೆಮಿಸ್ಟರ್‌ಗಳ ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳಲ್ಲಿ ಪರೀಕ್ಷೆಯ ಒತ್ತಡ ಹೆಚ್ಚಾಗಲಿದೆ. ಹಾಗಾಗಿ, ಹಿಂದಿನ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಕೂಡಲೇ ರದ್ದು ಮಾಡಿ, ಒಂದು ಸೆಮಿಸ್ಟರ್‌ನ ಪರೀಕ್ಷೆಗಳನ್ನು ಮಾತ್ರ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಶಿಕ್ಷಣ ತಜ್ಞರು, ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳ ಜೊತೆ ಚರ್ಚಿಸಿ, ಯಾವುದೇ ಶೈಕ್ಷಣಿಕ ವಿಷಯದ ನಿರ್ಧಾರ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳ ಆರೋಗ್ಯ ದೃಷ್ಟಿಯಿಂದ ಎಲ್ಲರಿಗೂ ಕೋವಿಡ್‌ನ ಎರಡೂ ಲಸಿಕೆ ಪೂರ್ಣಗೊಂಡ ನಂತರ ತರಗತಿಗಳನ್ನು ಕಾರ್ಯಾರಂಭಗೊಳಿಸಬೇಕು’ ಎಂಬ ಮನವಿ ಪತ್ರವನ್ನು ಕುಲಪತಿ ಕೆ.ಆರ್.ವೇಣುಗೋಪಾಲ್ ಅವರಿಗೆ ಸಲ್ಲಿಸಿದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.47 ಕೋಟಿ ▲	3.06 ಕೋಟಿ ▲
ಸಕ್ರಿಯ ಪ್ರಕರಣ	1.17 ಕೋಟಿ ▲	4.65 ಲಕ್ಷ ▼
ಗುಣಮುಖ	16.90 ಕೋಟಿ ▲	2.97 ಕೋಟಿ ▲
ಸಾವು	39.96 ಲಕ್ಷ ▲	4.03 ಲಕ್ಷ ▲

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	3.30 ಲಕ್ಷ ▼	27,020 ▼
ಗುಣಮುಖ	3.97 ಲಕ್ಷ ▲	44,532 ▼
ಸಾವು	6,182 ▼	451 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	ಬ್ರೆಜಿಲ್	ರಷ್ಯಾ
24,170	27,783 ▼	25,142 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ರಷ್ಯಾ
48.74 ▼	11.62 ▼	4.04 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.23 ಲಕ್ಷ ▲
ದೆಹಲಿ	24,997 ▲
ತಮಿಳುನಾಡು	32,721 ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	61.04 ▲
ಕೇರಳ	29.81 ▲
ತಮಿಳುನಾಡು	24.96 ▲

ಪ್ರಜಾವಾಣಿ ಗ್ರಾಫಿಕ್ಸ್

ವಿಚಾರ ಕಲರವ ಕಲಹ ಪ್ರಕರಣ: ಸದಸ್ಯರು ಜನಪ್ರತಿನಿಧಿಗಳಂತೆ ನಡೆದುಕೊಳ್ಳಬಾರದು– ಅಭಿಮತ

‘ಆದೇಶಿಸುವ ಅಧಿಕಾರ ಸಿಂಡಿಕೇಟ್ ಸದಸ್ಯರಿಗಿಲ್ಲ’

• ಗುರು ಪಿ.ಎಸ್.

ಬೆಂಗಳೂರು: ಕುಲಪತಿ ಮತ್ತು ಕುಲಸಚಿವರ ನಡುವಣ ಶೀತಲ ಸಮರಕ್ಕೆ ಸಾಕ್ಷಿಯಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದಲ್ಲೀಗ ಸಿಂಡಿಕೇಟ್ ಸದಸ್ಯರು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು–ಬೋಧಕ ಸಿಬ್ಬಂದಿಯ ನಡುವೆ ‘ಜಟಾಪಟಿ’ ನಡೆಯುತ್ತಿದೆ. ಜೊತೆಗೆ, ಸಿಂಡಿಕೇಟ್ ಸದಸ್ಯರ ಅಧಿಕಾರ ಮತ್ತು ಪಾತ್ರವೇನು ಎಂಬ ಪ್ರಶ್ನೆಯೂ ಮುನ್ನೆಲೆಗೆ ಬಂದಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೂಚನೆಯಂತೆ ವಿಶ್ವವಿದ್ಯಾಲಯದಲ್ಲಿ ವಿಚಾರ ಕಲರವ ಎಂಬ ಕಾರ್ಯಕ್ರಮ ನಡೆಯುತ್ತಿದೆ. ದಿನಕ್ಕೊಬ್ಬರು ಗಣ್ಯರು ಮುಖ್ಯ ಅತಿಥಿಯಾಗಿ ಬಂದು ಉಪನ್ಯಾಸ ನೀಡುತ್ತಿದ್ದಾರೆ. ಈ ಎಲ್ಲ ಕಾರ್ಯಕ್ರಮಕ್ಕೆ ಕುಲಪತಿಯವರೇ ಅಧ್ಯಕ್ಷತೆ ವಹಿಸುತ್ತಿದ್ದಾರೆ ಎಂದು ಸಿಂಡಿಕೇಟ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ, ಕಾರ್ಯಕ್ರಮದ ನಿರ್ವಹಣೆ ಹೊಣೆ ಹೊತ್ತಿದ್ದ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಸತೀಶ್‌ಗೌಡ ಅವರನ್ನು ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ.

ಇದಕ್ಕೂ ಮುನ್ನ, ಸಿಂಡಿಕೇಟ್ ಸದಸ್ಯರು, ಕಾರ್ಯಕ್ರಮ ಸಂಯೋಜನಾಧಿಕಾರಿಯನ್ನು ಕರೆಸಿಕೊಂಡು ನೇರವಾಗಿ ಈ ಬಗ್ಗೆ ಪ್ರಶ್ನಿಸಿರುವುದು ಮತ್ತು ಆದೇಶಿಸಿರುವುದು ಸರಿಯಲ್ಲ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಪ್ರಜಾವಾಣಿ ವಿಶೇಷ

‘ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆಯ ಪ್ರಕಾರ, ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯದ ಯಾವುದೇ ಸಿಬ್ಬಂದಿ ಅಥವಾ ಪ್ರಾಧ್ಯಾಪಕರನ್ನು ಸ್ಥಳಕ್ಕೆ ಕರೆಸಿ ವಿಚಾರಣೆ ನಡೆಸುವ ರೀತಿಯಲ್ಲಿ ಮಾತನಾಡಿಸುವಂತಿಲ್ಲ. ಸಿಬ್ಬಂದಿಯ ಕುರಿತು ಯಾವುದೇ ದೂರುಗಳಿದ್ದರೆ ಕುಲಪತಿ, ಕುಲಸಚಿವರ ಗಮನಕ್ಕೆ ತರಬೇಕು ಅಥವಾ ವರದಿ ನೀಡಬೇಕೇ ವಿನಾ ಯಾವುದೇ ಆದೇಶ ಮಾಡುವಂತಿಲ್ಲ’ ಎಂದು ಬೇರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಿಂಡಿಕೇಟ್‌ನ ಅನೇಕ ಸದಸ್ಯರಿಗೆ ಕಾನೂನು ಗೊತ್ತಿರುವುದಿಲ್ಲ. ಹಲವರು ನಿಯಮಾವಳಿಗಳ ಪುಸ್ತಕವನ್ನೇ ಓದಿರುವುದಿಲ್ಲ. ಸಿಂಡಿಕೇಟ್ ಚುನಾಯಿತ ಮಂಡಳಿಯಲ್ಲ, ಸಲಹಾ ಮಂಡಳಿಯಷ್ಟೇ. ಸಿಂಡಿಕೇಟ್ ಸದಸ್ಯರೂ ಚುನಾಯಿತರಲ್ಲ, ನಾಮನಿರ್ದೇಶನಗೊಂಡಿರುತ್ತಾರೆ. ಅವರು ಜನಪ್ರತಿನಿಧಿಗಳಂತೆ ವರ್ತಿಸಲು ಪ್ರಾರಂಭಿಸಿದರೆ ಇಂತಹ ಸಮಸ್ಯೆಗಳು ಉದ್ಭವಿಸುತ್ತವೆ’ ಎಂದೂ ಅವರು ಹೇಳಿದರು.

‘ವಿಶ್ವವಿದ್ಯಾಲಯದಲ್ಲಿನ ಇಂತಹ ಬೆಳವಣಿಗೆಗಳನ್ನು ವಿದ್ಯಾರ್ಥಿಗಳು ಮಾತ್ರವಲ್ಲದೆ ಸಾರ್ವಜನಿಕರೂ ಗಮನಿಸುತ್ತಿದ್ದಾರೆ. ಕುಲಪತಿ, ಕುಲಸಚಿವರು, ಪ್ರಾಧ್ಯಾಪಕರು ಮತ್ತು ಸಿಂಡಿಕೇಟ್ ಸದಸ್ಯರ ನಡುವಣ ಹೊಂದಾಣಿಕೆಯ ಕೊರತೆ ವಿಶ್ವವಿದ್ಯಾಲಯದ ಗೌರವಕ್ಕೆ ಧಕ್ಕೆ ತರುತ್ತಿದೆ’ ಎಂದು ಪ್ರಾಧ್ಯಾಪಕರೊಬ್ಬರು ಬೇಸರ ವ್ಯಕ್ತಪಡಿಸಿದರು.

‘ವಿಶ್ವವಿದ್ಯಾಲಯದ ಎಲ್ಲ ಪ್ರಕ್ರಿಯೆಗಳು ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆಯ ಪ್ರಕಾರವೇ ನಡೆಯಬೇಕು. ವಿಶ್ವವಿದ್ಯಾಲಯದ ಆಡಳಿತ ಮತ್ತು ಹಣಕಾಸು ಪ್ರಕ್ರಿಯೆಗಳು ಸಿಂಡಿಕೇಟ್‌ನಲ್ಲಿ ತೆಗೆದುಕೊಂಡ ನಿರ್ಣಯಗಳಂತೆಯೇ ನಡೆಯುತ್ತದೆ. ಸಿಂಡಿಕೇಟ್‌ಗೆ ಕುಲಪತಿಯವರೇ ಮುಖ್ಯಸ್ಥರು. ಸಿಂಡಿಕೇಟ್ ಸದಸ್ಯರು ಸಲಹೆ ನೀಡಬಹುದು. ದೂರುಗಳಿದ್ದರೆ ಅಥವಾ ಶಿಷ್ಟಾಚಾರ ಪಾಲನೆಯಾಗುತ್ತಿಲ್ಲ ಎಂದರೆ, ಅವರು ಕುಲಪತಿ ಅಥವಾ ಕುಲಸಚಿವರಿಗೆ ಲಿಖಿತವಾಗಿ ತಿಳಿಸಬೇಕು. ಕುಲಪತಿಯವರ ತೀರ್ಮಾನ ಅಂತಿಮವಾಗಿರುತ್ತದೆ’ ಎಂದು ಕುಲಸಚಿವರಾದ (ಆಡಳಿತ) ಕೆ. ಜ್ಯೋತಿ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಲಭ್ಯರಾಗಲಿಲ್ಲ.

‘ಆದೇಶಿಸಿರಲಿಲ್ಲ, ಸಲಹೆ ನೀಡಿದ್ದೆವು’

‘ಬೆಂಗಳೂರು ವಿಶ್ವವಿದ್ಯಾಲಯ ಎನ್ನುವುದು ಸಾರ್ವಜನಿಕ ಸಂಸ್ಥೆ. ನಾವು (ಸಿಂಡಿಕೇಟ್ ಸದಸ್ಯರು) ಸರ್ಕಾರ ಮತ್ತು ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುತ್ತೇವೆ. ವಿಶ್ವವಿದ್ಯಾಲಯದಲ್ಲಿ ಲೋಪ–ದೋಷಗಳಾದರೆ ಅದನ್ನು ಪ್ರಶ್ನಿಸಲು ನಮಗೆ ಅವಕಾಶವಿದೆ. ನಾವು ಸತೀಶ್‌ಗೌಡ ಅವರನ್ನು ಈ ಬಗ್ಗೆ ಕೇಳಲು ಕರೆಸಿಕೊಂಡಿದ್ದು ನಿಜ. ಆದರೆ, ಅವರಿಗೆ ನಾವು ಯಾವುದೇ ಆದೇಶ ನೀಡಿರಲಿಲ್ಲ. ಸಲಹೆ ಮಾತ್ರ ನೀಡಿದ್ದೆವು’ ಎಂದು ಸಿಂಡಿಕೇಟ್ ಸದಸ್ಯ ಡಾ. ಸುಧಾಕರ್ ತಿಳಿಸಿದರು.

‘ಸತೀಶ್ ಗೌಡ ಅವರನ್ನು ಕರೆಸುವುದಕ್ಕೆ ಮುನ್ನ ಕುಲಪತಿಯವರ ಗಮನಕ್ಕೂ ಈ ವಿಷಯವನ್ನು ತಂದಿದ್ದೆವು. ನೀವೇ ಕರೆಸಿ ಅವರಿಗೆ ಹೇಳಿ ಎಂದಿದ್ದರು. ಅದರಂತೆ ಸತೀಶ್‌ಗೌಡ ಅವರನ್ನು ಕರೆಸಿ ಪ್ರಶ್ನಿಸಿದ್ದೆವು’ ಎಂದೂ ಅವರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS
Business to Business
Finance
NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

REAL ESTATE SELLING
Sites
General
BUDA APPROVED Rera Registered Plots For Sale In SriVaralakshmi Layout On Bengaluru Road Ballari Contact 9845446005, 9949533633.

SOCIAL SERVICES
Others
HOME NURSING SERVICES available 24/7 @ Bangalore for Diabetic wound care, Gediatric Baby-Care, Physiotherapy, Senior-Care and all services at Home/Hospital 24/7. Contact: 6366883838, 7022399993

PERSONAL
Change of Name
AMRITA KALA DEVI M/o 14882409H- Sep- SHIVAM KUMAR R/a Pithariya Kala, Jogiara, Darbhanga, Bihar changed name from AMRITA KALA DEVI to AMIRKALA DEVI notary KV Mani Bangalore.

I, GANESHA Haridas S/o Haridas Nyandamadath Pulikambeth R/o 25, OPRIYA NIVAS, Riches Garden Layout, Ramamurthynagar, Dooravaninagar, Bengaluru - 560016, have changed my name to Ganesh Haridas for all purposes

CONNECT

ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ವರಮಹಾಲಕ್ಷ್ಮೀ ಹಬ್ಬದ ಮಾರಾಟ
ತೆರಿಗೆ ಭವನ
6/9, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ, ನಾಗರಭಾವಿ, ಬೆಂಗಳೂರು–560 072. ಮೊ. : 7904413982
ದಿನಾಂಕ: 8,9,10,11,12 & 13 ಜುಲೈ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ – ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

I, PALLAVI MANJUNATHA (DOB: 29.03.1983) D/o. V.S. Kumar and W/o. Manjunatha. B.S. R/a#188, 'Anjali' 10th Cross, 1st Main, Health Layout, Viswaneedam Post, Nagarabhavi, Bangalore- 560091 Have Changed My Name to PALLAVI IYENGAAR Vide Affidavit Dated: 03.07.2021 Before Notary H.R.Karunakara, Bengaluru-10.

I PILOMINA W/o.A Raja, Residing at #85/1, Harris Barrack, Artillery road, Halsuru, Bengaluru 560008. Have changed my name to Filomeena vide affidavit Dt: 15/06/2021 sworn before notary A R Muneer Ahmed Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

I, SHARANABASAVA S/o Shivaraja, Residing at Wadgera, Wadgera Post, Taluk Shahapur, Former District Gulbarga, present district Yadgir, Karnataka-585355 today at Bangalore Have changed my name from SHARANABASAVA to SHARANABASAVA CHINNI Vide affidavit date 03.07.2021 Before Advocate & Notary Devaraja E. Banglore.

I, BAGYAVATHI W/o. Mohan Reddy, N. R/o.#35, 1st Cross, 1st Block, Opp. Jayashree Hospital, Vishwapriya Nagar, Bangalore- 560068 Have Changed My Name to BHAGYA. C. Vide Affidavit Dated: 05-07-2021 Sworn Before Notary B.Chitra, Bangalore.

I, SHAGUFTA AJAZ residing at No.44, 2nd Floor, 2nd Cross, 'A' Block, Kaveri Nagar, R.T.Nagar Post, Bangalore-560032 have changed my name to SHAGUFTA AHMED vide affidavit dated 01/07/2021 sworn before notary Sivakumara.M.N, Bangalore

I, VARSHA KARUNANATH ANANTH aged about 22 years D/o.Balakrishnan Karunananth, residing at No.216, A Block, D-wing, Esteem Enclave Apartments, Arekere, Bannerghatta Road, Bengaluru- 560076 have changed my name to VARSHA KARUNANANTH Vide Affidavit dated 02-07-2021 before H.G.Venkataramu, Notary

I, MICHAEL AGNES KUMAR W/o Gnana Selva Kumar residing at No.10, C-1, 1 C Main ,1st Block, Sector-6, Hosur, Sarjapura Layout, IAS.Colony, MPHCS, Bangalore-560102 have changed my name to AGNES KUMAR vide affidavit dated 05.07.2021 sworn before notary L.Gopalakrishna, Bangalore-27.

I, SHASHIKALA SRINIVASA., R/at Flat No.32, Yamuna Goodwill Apartments, Chandra Layout, Vijayanagar, Bengaluru- 560040 have changed my name to SHASHIKALA BHAT vide affidavit dated: 1/7/2021 Before Notary M.K.Devaki Bangalore

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಮಂಗಳವಾರ • ಜುಲೈ 6, 2021 ಪ್ರಜಾವಾಣಿ

ತಾವರ್‌ಚಂದ್ ಗೆಹ್ಲೋಟ್ ನೂತನ ರಾಜ್ಯಪಾಲ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವ ತಾವರ್‌ಚಂದ್ ಗೆಹ್ಲೋಟ್ ರಾಜ್ಯದ ನೂತನ ರಾಜ್ಯಪಾಲರಾಗಿ ನೇಮಕಗೊಳ್ಳುವ ಸಾಧ್ಯತೆ ಇದೆ.

ಹಾಲಿ ರಾಜ್ಯಪಾಲ ವಜುಭಾಯಿ ವಾಲಾ ಅವರ ಅವಧಿ ಪೂರ್ಣಗೊಂಡಿದೆ. ಅವರ ಸ್ಥಾನಕ್ಕೆ ಗೆಹ್ಲೋಟ್ ಅವರನ್ನು ನೇಮಕ ಮಾಡಲು ನಿರ್ಧರಿಸಿದ್ದು, ಸದ್ಯದಲ್ಲೇ ಆದೇಶ ಹೊರಬೀಳಲಿದೆ. ಕೇಂದ್ರ ಸಂಪುಟ ಪುನರ್‌ರಚನೆ ವೇಳೆ ಗೆಹ್ಲೋಟ್ ಅವರನ್ನು ಕೈಬಿಡಲಿದ್ದು, ಅವರಿಗೆ ರಾಜ್ಯಪಾಲ ಹುದ್ದೆ ನೀಡಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೂರು ಬಾರಿ ಮಧ್ಯಪ್ರದೇಶ ಶಾಸಕರಾಗಿ, ನಾಲ್ಕು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ಗೆಹ್ಲೋಟ್, ಈಗ ರಾಜ್ಯಸಭೆಯ ಸದಸ್ಯರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
4ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001.

ತಿದ್ದುಪಡಿ ಪ್ರಕಟಣೆ

ಹಾಸನ ವಿಮಾನ ನಿಲ್ದಾಣ ನಿರ್ಮಾಣಕಾರ್ಯ (ಪ್ಯಾಕೇಜ್–1) ಭುವನಹಳ್ಳಿ ಗ್ರಾಮ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಕಾಮಗಾರಿಯ ಬಗ್ಗೆ ದಿನಾಂಕ: **01.07.2021 ರಂದು** ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಟೆಂಡರ್ ಪ್ರಕಟಣೆಯ ಸಂಬಂಧದಲ್ಲಿ ಈ ತಿದ್ದುಪಡಿ ಪ್ರಕಟಣೆ ನೀಡಲಾಗಿದೆ. ತಾಂತ್ರಿಕ ಕಾರಣದಿಂದಾಗಿ ದಿನಾಂಕ **05.07.2021** ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಪ್ರಕಟಪಡಿಸಿರುವುದಿಲ್ಲ. ಸದರಿ ಟೆಂಡರ್ ದಸ್ತಾವೇಜನ್ನು **08.07.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವಸಭೆ ದಿನಾಂಕ: **16.07.2021 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕಡೆಯ ದಿನಾಂಕ: **23.07.2021 ರಂದು ಸಂಜೆ 5.30 ಗಂಟೆಯವರೆಗೆ.** ಟೆಂಡರ್‌ನಲ್ಲಿನ ಉಳಿದೆಲ್ಲಾ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಉನಿ.ನ/748/ಎಂಸಿಎ/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001.
ದೂ.080-25586520/25589112 ಫ್ಯಾಕ್ಸ್ : 080-25886321
ಇ-ಮೇಲ್: ho@kspcb.gov.in ವೆಬ್‌ಸೈಟ್: http://kspcb.gov.in

ಸಂಖ್ಯೆ:ಮಾನಿಮಂ/505/17ನೇ ಪ್ರವರ್ಗ/ಇಪಿಹೆಚ್/ಹೆಚ್‌ಪಿಐ–ಕೆ.ಪಿ.ಆರ್.ಶುಗರ್ಸ್/2020–21/1293 ದಿನಾಂಕ:03.07.2021

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ: ಕೆ.ಪಿ.ಆರ್ ಶುಗರ್ಸ್ ಮತ್ತು ಅಪ್ಯಾರಲ್ಸ್ ಲಿಮಿಟೆಡ್ ಇವರು ಕಲಬುರ್ಗಿ ಜಿಲ್ಲೆ, ಅಫ್ಜಲ್‌ಪುರ ತಾಲ್ಲೂಕು, ಚಿನ್ನಮ್ಮಗೇರಿ ಮತ್ತು ಚೌಡಾಪುರ ಗ್ರಾಮದ ಸರ್ವೇ ನಂ. 3/*, 3/*. 4/1, 4/2, 5/1, 5/2, 5/3, 5/5, 5/6, 5/7. 5/8, 5/9, 5/10, 6/1, 6/2, 6/3, 6/4, 6/5, 8/3, 13/1, 13/4, 12, 143/2, 144/1, 144/2, 145/1, 145/2, 145/3, 145/4, 145/5, 145/6, 145/7, 146/*, 147/1, 147/2, 148/1, 148/2, 148/3, 148/4, ಸರ್ವೇ ನಂ. 75/2, 75/3, 75/4/1, 75/4/2, 75/4/3, 75/5/1, 75/5/2, 77, 77/2, 77/3 ಗ್ರಾಮ ಚೌಡಾಪುರ ಇಲ್ಲಿ 10,000 ಟಿಸಿಡಿ ಸಾಮರ್ಥ್ಯದ ಸಕ್ಕರೆ ಅರೆಯುವ ಘಟಕ, 41 ಮೆಗಾವ್ಯಾಟ್ ಸಹ–ಉತ್ಪಾದನಾ ವಿದ್ಯುತ್ ಸ್ಥಾವರ ಮತ್ತು 220 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ/ಎಥನಾಲ್ (ಕಬ್ಬಿನ ರಸ/ಮೊಲಾಸಿಸ್) ಘಟಕದ ಜೊತೆಗೆ 8 ಮೆ.ವ್ಯಾ ಇನ್ಸಿನರೇಷನ್ ಬಾಯ್ಲರ್ ಆಧಾರಿತ ವಿದ್ಯುತ್ ಉತ್ಪಾದನೆಯ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ : 1.12.2009) ಪ್ರಕಾರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ ಇವರ Terms of Reference ಪತ್ರ ಸಂಖ್ಯೆ: IA-J-11011/333/2020-IA II (I) dated: 02.01.2021 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ದಿನಾಂಕ: **18.02.2021,** ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ಕಛೇರಿಯ ವಿಳಾಸ: ಮೆ: ಕೆ.ಪಿ.ಆರ್ ಶುಗರ್ಸ್ ಮತ್ತು ಅಪ್ಯಾರಲ್ಸ್ ಲಿಮಿಟೆಡ್,** ಚಿನ್ನಮ್ಮಗೇರಿ ಮತ್ತು ಚೌಡಾಪುರ ಗ್ರಾಮ, ಅಫ್ಜಲ್‌ಪುರ ತಾಲ್ಲೂಕು, ಕಲಬುರ್ಗಿ ಜಿಲ್ಲೆ.
2. **ಉದ್ದೇಶಿತ ವಿಸ್ತರಣಾ ಯೋಜನೆಯ ಸ್ಥಳ:** ಸರ್ವೇ ನಂ. 3/*, 3/*. 4/1, 4/2, 5/1, 5/2, 5/3, 5/5, 5/6, 5/7. 5/8, 5/9, 5/10, 6/1, 6/2, 6/3, 6/4, 6/5, 8/3, 13/1, 13/4, 12, 143/2, 144/1, 144/2, 145/1, 145/2, 145/3, 145/4, 145/5, 145/6, 145/7, 146/*, 147/1, 147/2, 148/1, 148/2, 148/3, 148/4, ಸರ್ವೇ ನಂ. 75/2, 75/3, 75/4/1, 75/4/2, 75/4/3, 75/5/1, 75/5/2, 77, 77/2, 77/3 ಒಟ್ಟು 300 ಎಕರೆ ಪ್ರದೇಶ
3. **ಉದ್ದೇಶಿತ ಕಾರ್ಖಾನೆಯ ಯೋಜನೆಯ ವಿವರ:** 10,000 ಟಿಸಿಡಿ ಸಾಮರ್ಥ್ಯದ ಸಕ್ಕರೆ ಅರೆಯುವ ಘಟಕ, 41 ಮೆಗಾವ್ಯಾಟ್ ಸಹ–ಉತ್ಪಾದನಾ ವಿದ್ಯುತ್ ಸ್ಥಾವರ ಮತ್ತು 220 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ/ಎಥನಾಲ್ (ಕಬ್ಬಿನ ರಸ/ಮೊಲಾಸಿಸ್) ಘಟಕದ ಜೊತೆಗೆ 8 ಮೆ.ವ್ಯಾ ಇನ್ಸಿನರೇಷನ್ ಬಾಯ್ಲರ್ ಆಧಾರಿತ ವಿದ್ಯುತ್ ಉತ್ಪಾದನೆಯ ಘಟಕ
4. **ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: ದಿನಾಂಕ: 06.08.2021 (ಶುಕ್ರವಾರ) ಸಮಯ: ಬೆಳಗ್ಗೆ 11.00 ಗಂಟೆ ಸ್ಥಳ: Project Site, ಚಿನ್ನಮ್ಮಗೇರಿ ಮತ್ತು ಚೌಡಾಪುರ ಗ್ರಾಮದ ರಸ್ತೆ, ಅಫ್ಜಲ್‌ಪುರ ತಾಲ್ಲೂಕು, ಕಲಬುರ್ಗಿ ಜಿಲ್ಲೆ.**
5. **ವಿಸ್ತರಣಾ ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಕಲಬುರುಗಿ ಜಿಲ್ಲೆ, ಕಲಬುರಗಿ. (ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕಲಬುರಗಿ ಜಿಲ್ಲೆ, ಕಲಬುರಗಿ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕಲಬುರಗಿ. (ಈ) ಗ್ರಾಮ ಪಂಚಾಯತ್ ಕಾರ್ಯಾಲಯ, ಚಿನ್ನಮ್ಮಗೇರಿ ಮತ್ತು ಚೌಡಾಪುರ ಗ್ರಾಮ. (ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ. (ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ,ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. (ಋ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,"ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವೇರಿ: 45 ಟಿಎಂಸಿ ಅಡಿ ಹೆಚ್ಚುವರಿ ನೀರಿನ ಬಳಕೆಯ ಉದ್ದೇಶ

ತಮಿಳುನಾಡು ಯೋಜನೆಗೆ ಆಕ್ಷೇಪ ಎತ್ತದ ರಾಜ್ಯ!

• ಸಿದ್ದಯ್ಯ ಹಿರೇಮಠ

ನವದೆಹಲಿ: ಕಾವೇರಿಯ 45 ಟಿಎಂಸಿ ಅಡಿ ಹೆಚ್ಚುವರಿ ನೀರಿನ ಬಳಕೆಯ ಉದ್ದೇಶದೊಂದಿಗೆ ತಮಿಳುನಾಡು ಸರ್ಕಾರ ಆರಂಭಿಸಿರುವ ನದಿ ಜೋಡಣೆಯ 'ಬೃಹತ್ ಯೋಜನೆ'ಗೆ ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪಣೆ ಸಲ್ಲಿಸುವುದಕ್ಕೂ ರಾಜ್ಯ ಸರ್ಕಾರ ಮೀನ-ಮೇಷ ಎಣಿಸುತ್ತಿದೆ.

ಕಾವೇರಿ ಕಣಿವೆಯಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಬರಪೀಡಿತ ಜಿಲ್ಲೆಗಳ ಜನರಿಗೆ ಕುಡಿಯಲು ಪೂರೈಸುವ ಸದುದ್ದೇಶದೊಂದಿಗೆ ರಾಜ್ಯ ಆರಂಭಿಸುವ ಪ್ರತಿ ಯೋಜನೆಗಳಿಗೆ ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪಣೆ ಸಲ್ಲಿಸುವುದನ್ನು ತಮಿಳುನಾಡು ರೂಢಿ ಮಾಡಿಕೊಂಡಿದೆ.

ಆದರೆ, ಕರ್ನಾಟಕ ಸರ್ಕಾರ ತನ್ನ ಪಾಲಿನ ನ್ಯಾಯಸಮ್ಮತ ನೀರನ್ನು ಪಡೆದುಕೊಳ್ಳಲು ಕಾನೂನು ಹೋರಾಟಕ್ಕೆ ಮುಂದಾಗುತ್ತಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ.

ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಕಾವೇರಿ ನದಿಯನ್ನು ವೆಲ್ಲಾರು, ವೈಗೈ ಮತ್ತು ಗುಂಡಾರು ನದಿಗಳೊಂದಿಗೆ ಜೋಡಿಸುವ ಮೊದಲ ಹಂತದ ಯೋಜನೆಗೆ ಕಳೆದ ಫೆಬ್ರುವರಿ 21ರಂದೇ ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ಅವರು ವಿರಾಲಿಮಲೈ-ಕುಣ್ಣತ್ತೂರ್ ಬಳಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ.

'ಕೋಳಿ ಕೇಳಿ ಮಸಾಲೆ'

'ನಾವು ನಮ್ಮ ನೀರನ್ನು ಬಳಸಿಕೊಳ್ಳುವ ಉದ್ದೇಶದೊಂದಿಗೆ ಮೇಕೆದಾಟು ಬಳಿ ನಮ್ಮ ನೆಲದಲ್ಲಿ ಸಮತೋಲನ ಜಲಾಶಯ ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳಲು ತಮಿಳುನಾಡಿನ ಸಮ್ಮತಿಯನ್ನು ಕೋರುವುದರಲ್ಲಿ ಅರ್ಥವಿಲ್ಲ. ಅವರು ಈ ವಿಷಯದಲ್ಲಿ ನಮ್ಮ ಸಮ್ಮತಿಯನ್ನು ಎಂದೂ ಕೋರಿಲ್ಲ. ಒಂದು ರೀತಿಯಲ್ಲಿ ಇದು, 'ಕೋಳಿ ಕೇಳಿ ಮಸಾಲೆ ಅರೆದಂತೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಕಾನೂನು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆಗ ರಾಜ್ಯದ ಜಲಸಂಪನ್ಮೂಲ ಸಚಿವರಾಗಿದ್ದ ರಮೇಶ ಜಾರಕಿಹೊಳಿ ಈ ಸಂಬಂಧ ದೆಹಲಿಯಲ್ಲಿ ಕಾನೂನು ತಂಡದ ಸಭೆ ನಡೆಸಿ, ತಮಿಳುನಾಡಿನ ಯೋಜನೆಗೆ ಅನುಮತಿ ನೀಡದಿರುವಂತೆ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಮನವಿ ಸಲ್ಲಿಸಿದ್ದರು. ಯೋಜನೆ ವಿರೋಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪ ವ್ಯಕ್ತಪಡಿಸುವುದಾಗಿ ಹೇಳಿದ್ದರು.

ಆ ಹೇಳಿಕೆ ನೀಡಿದ ಕೆಲವೇ ದಿನಗಳ ಬಳಿಕ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ತಮಿಳುನಾಡು ಯೋಜನೆಗೆ ಚಾಲನೆ ನೀಡಿ ನಾಲ್ಕೂವರೆ ತಿಂಗಳು ಕಳೆದಿದ್ದರೂ ರಾಜ್ಯ ಸರ್ಕಾರದಿಂದ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿಲ್ಲ.

ಈ ಬಗ್ಗೆ ಜಲವಿವಾದ ಕಾನೂನು ತಜ್ಞರ ರಾಜ್ಯ ತಂಡವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸುವ ನಿಟ್ಟಿನಲ್ಲಿ ಆಕ್ಷೇಪಣಾ ಅರ್ಜಿ ಸಿದ್ಧಪಡಿಸಿ 15 ದಿನಗಳೇ ಕಳೆದಿದ್ದರೂ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಕೋವಿಡ್–19 ಸಂದಿಗ್ಧ ಸ್ಥಿತಿ ರಾಜ್ಯದಲ್ಲಿ ಗಂಭೀರ ಪರಿಣಾಮ ಉಂಟು ಮಾಡಿದೆ. ಆದರೆ, ಜಲ ಸಂಪನ್ಮೂಲ ಮತ್ತು ಕಾನೂನು ಸಚಿವಾಲಯಗಳು ಜಲವಿವಾದ ಕುರಿತು ಕಾನೂನು ಹೋರಾಟ ನಡೆಸುವ ನಿರ್ಧಾರ ಕೈಗೊಳ್ಳಲು ಯಾವುದೇ ಅಡ್ಡಿ ಇರಲಿಲ್ಲ ಎಂದು ರಾಜ್ಯ ಸರ್ಕಾರದ ಕಾನೂನು ವಿಭಾಗದ ಮೂಲಗಳು 'ಪ್ರಜಾವಾಣಿ'ಗೆ ಹೇಳಿವೆ.

ಪ್ರಜಾವಾಣಿ ವಿಶೇಷ

ಪತ್ರ ಬರೆದಿದ್ದೇ ತಪ್ಪು: 'ಮೇಕೆದಾಟು ಯೋಜನೆಗೆ ಅಡ್ಡಿಪಡಿಸಬಾರದು ಎಂದು ಕೋರಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಪತ್ರ ಬರೆದಿದ್ದೇ ತಪ್ಪು' ಎಂಬ ಅಭಿಪ್ರಾಯ ಕಾನೂನು ತಂಡದಿಂದ ವ್ಯಕ್ತವಾಗಿದೆ.

ಮೇಕೆದಾಟು ಯೋಜನೆಗೆ ಸಂಬಂಧಿಸಿದ ಪ್ರಕರಣ ಸುಪ್ರೀಂ ಕೋರ್ಟ್ ಅಂಗಳದಲ್ಲಿದೆ.

ಮುಖ್ಯಾಂಶಗಳು
- ನಾಲ್ಕು ತಿಂಗಳ ಹಿಂದೆಯೇ ಶಂಕುಸ್ಥಾಪನೆ
- ಆಕ್ಷೇಪಣೆ ಅರ್ಜಿ ಸಿದ್ಧಪಡಿಸಿದ್ದರೂ ನಿರ್ಲಕ್ಷ್ಯ
- ಯೋಜನೆಗೆ ತಮಿಳುನಾಡು ಸಮ್ಮತಿ ಬೇಕಿಲ್ಲ

'ನ್ಯಾಯಾಲಯದ ಹೊರಗೆ ಸಂಧಾನದ ಮೂಲಕ ಪ್ರಕರಣ ಬಗೆಹರಿಸಿಕೊಳ್ಳಿ' ಎಂದು ನ್ಯಾಯಪೀಠ ಸಲಹೆಯನ್ನು ನೀಡಿಲ್ಲ. ಆದರೂ ಯಡಿಯೂರಪ್ಪ ಅವರು ಮನವಿ ಮಾಡಿಕೊಂಡಿರುವುದು ಸರಿಯಲ್ಲ ಎಂಬುದು ಕಾನೂನು ತಜ್ಞರ ಅಭಿಪ್ರಾಯವಾಗಿದೆ.

ಕರ್ನಾಟಕವು ಕಾವೇರಿಯ ಹೆಚ್ಚುವರಿ ನೀರನ್ನು ಬಳಸಲು ಯೋಜನೆ ಕೈಗೆತ್ತಿಕೊಂಡರೆ, ತಮಿಳುನಾಡು ಸರ್ಕಾರ ನೇರವಾಗಿ ಸುಪ್ರೀಂ ಕೋರ್ಟ್‌ನಲ್ಲೇ ಆಕ್ಷೇಪಣೆ ಸಲ್ಲಿಸುತ್ತದೆ. ಅದನ್ನು ಗಂಭೀರವಾಗಿ ಪರಿಗಣಿಸಿ, ಕಾನೂನು ಹೋರಾಟಕ್ಕೆ ಮುಂದಾದ ರಾಜ್ಯ ಸರ್ಕಾರ, ತಮಿಳುನಾಡು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿರುವುದು ಒಂದು ರೀತಿಯಲ್ಲಿ ಶರಣಾಗತಿಯೇ ಆಗಿದೆ. ಅಲ್ಲದೆ, ಯಡಿಯೂರಪ್ಪ ಅವರು ಬರೆದ ಮನವಿ ಪತ್ರದಲ್ಲಿ 'ನದಿ ಜೋಡಣೆ ಯೋಜನೆ'ಯ ಪ್ರಸ್ತಾವವೇ ಇಲ್ಲದಿರುವುದು ಆಶ್ಚರ್ಯಕರ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ಅಂಗನವಾಡಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಗಡುವು

ಬೆಂಗಳೂರು: ರಾಜ್ಯ ಅಂಗನವಾಡಿಗಳಿಗೆ ಡಿ.31ರೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಮತ್ತು ಫ್ಯಾನ್‌ಗಳನ್ನು ಅಳವಡಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಅಂಗನವಾಡಿಗಳಿಗೆ ಮೂಲ ಸೌಕರ್ಯ ಒದಗಿಸುವ ಸಂಬಂಧ ಸ್ವಯಂ ಪ್ರೇರಿತ ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ರಾಜ್ಯದ 14,948 ಅಂಗನವಾಡಿಗಳಿಗೆ ವಿದ್ಯುತ್ ಸಂಪರ್ಕ ಮತ್ತು 18,974 ಕೇಂದ್ರಗಳಿಗೆ ಫ್ಯಾನ್‌ಗಳನ್ನು ಒದಗಿಸಬೇಕಿದೆ. ಇದರಲ್ಲಿ 3,524 ಕೇಂದ್ರಗಳು ಸರ್ಕಾರಿ ಕಟ್ಟಡದಲ್ಲಿ ಇರುವುದರಿಂದ ಯಾವುದೇ ತೊಡಕು ಬರುವುದಿಲ್ಲ. ಅವುಗಳಿಗೆ ಡಿಸೆಂಬರ್ ಒಳಗೆ, ಉಳಿದವುಗಳಿಗೆ 2022ರ ಜೂನ್ 30ರೊಳಗೆ ಈ ಸೌಕರ್ಯ ಕಲ್ಪಿಸಬೇಕು' ಎಂದು ತಿಳಿಸಿತು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್.ವೇಣುಗೋಪಾಲ ಗೌಡ ನೇತೃತ್ವದ ಸಮಿತಿ ನಡೆಸಿದ ಅವಲೋಕನಗಳನ್ನು ಗಮನಿಸಿದರೆ ರಾಜ್ಯದ ಅಂಗನವಾಡಿ ಕೇಂದ್ರಗಳ ಸ್ಥಿತಿ ತೃಪ್ತಿಕರವಾಗಿಲ್ಲ ಎಂದು ತೋರುತ್ತದೆ. ಅಂಗನವಾಡಿ ಕಾರ್ಯಕರ್ತೆಯರ 1,448 ಹುದ್ದೆ, ಸಹಾಯಕರ 2,188 ಹುದ್ದೆಗಳು ಖಾಲಿ ಇವೆ ಎಂದು ಅಸಮಾಧಾನ ವ್ಯಕ್ತಪಡಿಸಿತು.



'33,164 ಅಂಗನವಾಡಿಗಳಿಗೆ ಮಾತ್ರ ವಿದ್ಯುತ್ ಸಂಪರ್ಕ, 26,560 ಅಂಗನವಾಡಿಗಳಿಗೆ ಫ್ಯಾನ್‌ಗಳನ್ನು ಪೂರೈಸಲಾಗಿದೆ. 44,225 ಕೇಂದ್ರಗಳಲ್ಲಿ ಶೌಚಾಲಯ ಇದೆ' ಎಂದು ಹಿಂದಿನ ವಿಚಾರಣೆ ವೇಳೆ ಸರ್ಕಾರ ಮಾಹಿತಿ ನೀಡಿತ್ತು.

ಸಂಪುಟ ವಿಸ್ತರಣೆ: ಶಾ, ಸಂತೋಷ್ ಜೊತೆ ಪ್ರಧಾನಿ ಮೋದಿ ಸಭೆ

ನವದೆಹಲಿ (ಪಿಟಿಐ): ಕೇಂದ್ರದ ಸಚಿವ ಸಂಪುಟ ವಿಸ್ತರಣೆಯ ಸಾಧ್ಯತೆ ಇದ್ದು, ಅದಕ್ಕೆ ಅಂತಿಮ ಸ್ವರೂಪ ನೀಡುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸಂತೋಷ್ ಅವರೊಂದಿಗೆ ಸೋಮವಾರ ಸುದೀರ್ಘ ಸಭೆ ನಡೆಸಿದ್ದಾರೆ.

ಶೀಘ್ರದಲ್ಲಿಯೇ ಸಚಿವ ಸಂಪುಟ ವಿಸ್ತರಣೆಯಾಗಲಿದೆ ಎಂಬ ಬಲವಾದ ಸಾಧ್ಯತೆ ನಡುವೆ ಶಾ ಮತ್ತು ಸಂತೋಷ್ ಅವರು ಪ್ರಧಾನಿ ನಿವಾಸದಲ್ಲಿ ಭಾನುವಾರ ಹಲವು ಗಂಟೆಗಳ ಕಾಲ ಮೋದಿ ಅವರ ಜೊತೆಗೆ ಸಭೆ ನಡೆಸಿದ್ದಾರೆ. ಬುಧವಾರ ನೂತನ ಸಚಿವರ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯುವ ಸಾಧ್ಯತೆ ಇದೆ ಎಂದು ಕೆಲವು ಮೂಲಗಳು ತಿಳಿಸಿವೆ. ಆದರೆ, ಈ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ನೀಡಲಾಗಿಲ್ಲ.

ಬಿಜೆಪಿ ನಾಯಕರಾದ ಸರ್ಬಾನಂದ ಸೋನೊವಾಲ್, ಜ್ಯೋತಿರಾದಿತ್ಯ ಸಿಂಧಿಯಾ, ಸುಶೀಲ್ ಮೋದಿ ಅವರಿಗೆ ಸಚಿವ ಸ್ಥಾನ ಸಿಗಬಹುದು. ಜೊತೆಗೆ ಮಿತ್ರ ಪಕ್ಷಗಳಿಗೂ ಸಂಪುಟದಲ್ಲಿ ಸ್ಥಾನ ದೊರೆಯುವ ಸೂಚನೆಗಳು ಕಾಣುತ್ತಿವೆ.

'ಜೀವವೈವಿಧ್ಯ ದಾಖಲಾತಿ ಚುರುಕುಗೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜೀವವೈವಿಧ್ಯ ದಾಖಲಾತಿ ಕಾರ್ಯ ಇನ್ನಷ್ಟು ಚುರುಕಾಗಿ ನಡೆಸಿ, ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜೀವವೈವಿಧ್ಯ ಸಂರಕ್ಷಣೆ ಕುರಿತು ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಜೀವ ವೈವಿಧ್ಯ ಸಂರಕ್ಷಣೆಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಜುಲೈ 1ರಿಂದ ಆ.15ರವರೆಗೆ ರಾಜ್ಯದಾದ್ಯಂತ ಅಭಿಯಾನ ನಡೆಯುತ್ತಿದೆ. ಅದರ ಅಂಗವಾಗಿ ಬಿಬಿಎಂಪಿಯ ಎಲ್ಲ ವಾರ್ಡ್‌ಗಳಲ್ಲಿಯೂ ನಾಗರಿಕರ ಸಹಭಾಗಿತ್ವದೊಂದಿಗೆ ಸಸಿ

ಸಭೆಯಲ್ಲಿ ಅನಂತ ಹೆಗಡೆ ಅಶೀಸರ ಮಾತನಾಡಿದರು. ಗೌರವ್ ಗುಪ್ತ ಇದ್ದಾರೆ

ನೆಡುವ, ಕೆರೆಗಳ ಸಮೀಕ್ಷೆ ಹಾಗೂ ರಕ್ಷಣಾ ಕಾರ್ಯ ಮತ್ತು ಜೀವವೈವಿಧ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸನ್ಮಾನ ಸೇರಿದಂತೆ ಇನ್ನಿತರೆ ಕಾರ್ಯ ಚಟುವಟಿಕೆ ನಡೆಸಲು ಕ್ರಮ ಕೈಗೊಳ್ಳಬೇಕು' ಎಂದರು.

'ನಗರದಲ್ಲಿರುವ ಅಪರೂಪದ ಜೈವಿಕ ಪ್ರದೇಶಗಳನ್ನು ಗುರುತಿಸಿ ಅದನ್ನು ಪಾರಂಪರಿಕ ತಾಣವನ್ನಾಗಿ ಘೋಷಿಸವ ಕೆಲಸ ಆಗಬೇಕು. ಅರಣ್ಯಗಳಲ್ಲಿ ಯಾವ ಜಾತಿಯ ಗಿಡಗಳಿವೆ, ನರ್ಸರಿಗಳಲ್ಲಿ ಯಾವ್ಯಾವ ತಳಿಯ ಗಿಡಗಳು ಸಿಗಲಿವೆ ಎಂಬುದರ ಬಗೆಗಿನ ನಿಖರವಾದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಹಾಕುವ ಕೆಲಸವಾಗಬೇಕು' ಎಂದರು.

ಮುಖ್ಯ ಆಯುಕ್ತ ಗೌರವ್ ಗುಪ್ತ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಜೀವವೈವಿಧ್ಯ ತಾಣಗಳಿವೆ ಎಂಬುದನ್ನು ಗುರುತಿಸಿ ಅವುಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು. ಈ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುವುದು' ಎಂದರು.

ಸೆರೆಯಲ್ಲೇ ಸ್ಟ್ಯಾನ್ ಸ್ವಾಮಿ ಸಾವು

ಒಂದನೇ ಪುಟದಿಂದ

ಸ್ಟ್ಯಾನ್ ಸ್ವಾಮಿ ಅವರನ್ನು ಎನ್‌ಐಎ ಬಂಧಿಸಿತ್ತು. ನಿಷೇಧಿತ ಸಿಪಿಎಂ (ಮಾವೊವಾದಿ) ಸಂಘಟನೆಯ ಸದಸ್ಯರಿಗೆ ಬೆಂಬಲ ನೀಡಿದ ಆರೋಪ ಅವರ ಮೇಲೆ ಇತ್ತು. 'ಕೇಂದ್ರದ ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ದೇಶದ ದಲಿತರು ಮತ್ತು ಮುಸ್ಲಿಮರನ್ನು ಸಂಘಟಿಸಬೇಕು ಎಂದು ಸ್ಟ್ಯಾನ್ ಸ್ವಾಮಿ ಅವರು ಸಿಪಿಎಂ ನಾಯಕರಿಗೆ ಪತ್ರ ಬರೆದಿದ್ದರು' ಎಂದು ಎನ್‌ಐಎ ಆರೋಪಿಸಿತ್ತು.

ಈ ಪ್ರಕರಣದ ತನಿಖೆ ಇನ್ನೂ ಪ್ರಗತಿಯಲ್ಲಿ ಇದೆ. ಪಾರ್ಕಿನ್‌ಸನ್‌ನಿಂದ ಬಳಲುತ್ತಿದ್ದ ಅವರನ್ನು ಮೊದಲು ಇಲ್ಲಿನ ಜೆ.ಜೆ. ಆಸ್ಪತ್ರೆಗೆ, ನಂತರ ಹೋಲಿ ಫ್ಯಾಮಿಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಕೋವಿಡ್ ತಗುಲಿತ್ತು. ಆಸ್ಪತ್ರೆಯಲ್ಲಿಯೇ ಅವರು ಮೃತಪಟ್ಟಿದ್ದಾರೆ.

ಟ್ರಕ್ ಪ್ರಯಾಣ ನಗರದ ಹಡ್ಸನ್ ವೃತ್ತದ ಬಳಿ ಸೋಮವಾರ ಟ್ರಕ್‌ವೊಂದರಲ್ಲಿ ಕಾರ್ಮಿಕರನ್ನು ಕೆಲಸದ ಸ್ಥಳಕ್ಕೆ ಕರೆದೊಯ್ಯಲಾಯಿತು –ಪ್ರಜಾವಾಣಿ ಚಿತ್ರ

ಮೈಶುಗರ್ ಪುನರಾರಂಭಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದ ಮೈಶುಗರ್ ಕಾರ್ಖಾನೆ ಪುನರಾರಂಭಿಸಬೇಕು, ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಬೇಕು ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ಮುಖ್ಯಮಂತ್ರಿ ಭೇಟಿ ಮಾಡಿದ ಅವರು, ಮೈಶುಗರ್ ಸಕ್ಕರೆ ಕಾರ್ಖಾನೆ ಮತ್ತೆ ಆರಂಭ ಆಗಬೇಕು. ಸರ್ಕಾರವಾದರೂ ವಹಿಸಿಕೊಳ್ಳಲಿ, ಖಾಸಗಿಯವರಾದರೂ ನಡೆಸಲಿ. ಅದು ಪುನರಾರಂಭಗೊಂಡು, ರೈತರಿಗೆ ಅನುಕೂಲ ಆಗಬೇಕು ಎಂದು ಒತ್ತಾಯಿಸಿದರು.

'ಮೈಶುಗರ್ ಪುನರಾರಂಭದ ಬಗ್ಗೆ ಇವತ್ತಿನಿಂದ ಅಲ್ಲ, ಕಳೆದ ಎರಡು ವರ್ಷಗಳಿಂದ ಸಾಕಷ್ಟು ಬಾರಿ ಮಾತನಾಡಿದ್ದೇನೆ. ಸರ್ಕಾರದಿಂದ ಸ್ಪಷ್ಟ ಉತ್ತರ ಬರಬೇಕು, ಇಲ್ಲವಾದರೆ, ರೈತರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ರೈತರು ಕಬ್ಬು ಬೆಳೆದು ಸಾಕಷ್ಟು ಬಾರಿ ಹಣ ಕಳೆದುಕೊಂಡಿದ್ದಾರೆ. ಕಳೆದ ಆರೇಳು ವರ್ಷಗಳಿಂದ ಏನೂ ಮಾಡಿಲ್ಲ. ಕೇವಲ ದ್ವೇಷದ ರಾಜಕಾರಣ ಮಾಡಿಕೊಂಡು ಕೂರಲು ಸಾಧ್ಯವಿಲ್ಲ. ರೈತರಿಗೆ ನ್ಯಾಯ ಕೊಡಿಸುವುದು ನಮ್ಮ ಹೊಣೆಗಾರಿಕೆ' ಎಂದರು ಬಳಿಕ ಅವರು ಸುದ್ದಿಗಾರರಿಗೆ ತಿಳಿಸಿದರು.

ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು

ಮಂಡ್ಯದ ರೈತರು ಕಬ್ಬನ್ನು ಬೇರೆ ಕಡೆಗೆ ಒಯ್ಯಬೇಕಾಗಿದೆ. ಮೈಶುಗರ್ ಆರಂಭವಾಗುವವರೆಗೆ ರೈತರ ಕಬ್ಬು ಸಾಗಣೆ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಅದರಿಂದ ರೈತರ ಹೊರೆ ಕಡಿಮೆ ಆಗುತ್ತದೆ ಎಂದು ಹೇಳಿದರು.

'ಕೆಆರ್‌ಎಸ್ ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮಾಹಿತಿ ನೀಡಿದ್ದೇನೆ. ಅತ್ಯಂತ ಸೂಕ್ಷ್ಮ ಪ್ರದೇಶವೆಂದು ಗಣಿಗಾರಿಕೆ ನಿಷೇಧ ಮಾಡಿದ್ದರೂ, ಕದ್ದುಮುಚ್ಚಿ ಗಣಿಗಾರಿಕೆ ನಡೆಸಲಾಗುತ್ತಿದೆ. ಈ ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು ಎಂದು ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ' ಎಂದರು.

'ಗಣಿಗಾರಿಕೆಯಿಂದಾಗಿ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಬಿರುಕು ಬಿಟ್ಟಿದೆ ಎಂದು ಮಾಧ್ಯಮಗಳಲ್ಲಿ ವರದಿ ಬಂದಿದ್ದವು. ಇದನ್ನು ಸಂಸತ್ತಿನಲ್ಲಿ ಮತ್ತು ಇತರ ಕಡೆಗಳಲ್ಲಿ ಪ್ರಸ್ತಾಪಿಸಿದ್ದೆ. ಸರ್ಕಾರ ಈ ಬಗ್ಗೆ ತನಿಖೆ ನಡೆಸಬೇಕಿತ್ತು. ತನಿಖೆಯೇ ಆಗದೇ ಕೆಲವರು ಅಣೆಕಟ್ಟು ಬಿರುಕು ಬಿಟ್ಟಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಿರುವುದು ಯಾವ ಕಾರಣಕ್ಕೆ, ಇದರಿಂದ ಅನುಮಾನ ಬರುವುದು ಸಹಜವಲ್ಲವೆ' ಎಂದು ಸುಮಲತಾ ಪ್ರಶ್ನಿಸಿದರು.

ಕೋವಿಡ್ ಮೂರನೇ ಅಲೆ ಬರುವ ಸಾಧ್ಯತೆ ಇರುವ ಕಾರಣ ಮಂಡ್ಯ ಜಿಲ್ಲೆಗೆ ವಿಶೇಷ ಮಕ್ಕಳ ಆಸ್ಪತ್ರೆಯನ್ನು ತಕ್ಷಣವೇ ಆರಂಭಿಸಬೇಕು. ಅದಕ್ಕೆ ಸಕಲ ಸೌಲಭ್ಯಗಳನ್ನೂ ಕೊಡಿಸಬೇಕು ಎಂದು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿರುವುದಾಗಿ ಹೇಳಿದರು.

ಬೆಂಗಳೂರು ಸುತ್ತ ₹2 ಸಾವಿರ ಕೋಟಿ ಮೊತ್ತದ ಕಾಮಗಾರಿ ಸ್ಥಗಿತ: ಕಾರಜೋಳ

ಬಾಗಲಕೋಟೆ: 'ಪರಿಸರವಾದಿಗಳ ಹೆಸರಿನಲ್ಲಿ ಕೆಲವರು ಅನಗತ್ಯ ತೊಂದರೆ ನೀಡುತ್ತಿರುವ ಕಾರಣ ಬೆಂಗಳೂರು ನಗರದ ಸುತ್ತಲೂ ₹2 ಕೋಟಿ ಮೊತ್ತದ ರಸ್ತೆ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿವೆ' ಎಂದು ಲೋಕೋಪಯೋಗಿ ಇಲಾಖೆ ಸಚಿವರೂ ಆದ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯ್ತಿ ಕೆಡಿಪಿ ಸಭೆಯಲ್ಲಿ ಸೋಮವಾರ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

'ಕಾಮಗಾರಿ ಅನುಷ್ಠಾನಕ್ಕೆ ಮುನ್ನವೇ ಮರ ಕಡಿಯುತ್ತಾರೆ ಎಂದು ಕೆಲವರು ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಿದ್ದಾರೆ. ಇದರಿಂದ ಲೋಕೋಪಯೋಗಿ ಇಲಾಖೆಯ ರಸ್ತೆ ನಿರ್ಮಾಣ ಯೋಜನೆಗಳು ನನೆಗುದಿಗೆ ಬಿದ್ದಿವೆ. ಹೊಸ ರಸ್ತೆಗಳು ನಿರ್ಮಾಣವಾಗದೇ ಬೆಂಗಳೂರಿನ ಜನರು ವಿಪರೀತ ವಾಹನ ದಟ್ಟಣೆಯಿಂದ ನರಕಸದೃಶ ಜೀವನ ನಡೆಸಬೇಕಾಗಿದೆ' ಎಂದರು.

'ಬೆಂಗಳೂರು ಸುತ್ತಲೂ ಸ್ಥಗಿತಗೊಂಡಿರುವ ರಸ್ತೆ ಯೋಜನೆಗಳಿಗೆ ನಿಗದಿಯಾಗಿರುವ ಅನುದಾನ ಅಲ್ಲಿ ಬಳಕೆಯಾಗದಿದ್ದರೆ ಉತ್ತರ ಕರ್ನಾಟಕ ಭಾಗಕ್ಕೆ ವರ್ಗಾಯಿಸಿ' ಎಂದು ಪಕ್ಕದಲ್ಲಿದ್ದ ಶಾಸಕ ವೀರಣ್ಣ ಚರಂತಿಮಠ ಚಟಾಕಿ ಹಾರಿಸಿದರು. ಆಗ ಸಭೆ ನಗೆಗಡಲಲ್ಲಿ ತೇಲಿತು.

ಕರ್ನಾಟಕ ಸರಕಾರ
ಲೋಕೋಪಯೋಗಿ ಇಲಾಖೆ,
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಲೋಕೋಪಯೋಗಿ, ಇಲಾಖೆ, ರಾಯಚೂರು ವಿಭಾಗ, ರಾಯಚೂರು

ಸಂಖ್ಯೆ. ಇಇರಾ/ತಾಂಶಾ–4/ಮುಂದೂಡಿಕೆ ಪ್ರಕಟಣೆ/2021–22/1005 ದಿನಾಂಕ: 03–07–2021

ಮುಂದೂಡಿಕೆ ಪ್ರಕಟಣೆ

ವಿಷಯ: ಟೆಂಡರ ಕಾಮಗಾರಿಯನ್ನು ಮುಂದೂಡುವ ಕುರಿತು.
ಉಲ್ಲೇಖ: ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಸಂ. ಲೋಇ/ರಾವಿ/ತಾಂಶಾ–4/ಟೆಂಪ್ರ/2021–22/652, ದಿನಾಂಕ 15–06–2021.

ಉಲ್ಲೇಖಿತ ಪ್ರಕಟಣೆಯಲ್ಲಿ ನಮೂದಿಸಿರುವ ಕ್ರ. ಸಂ. 1 ರಿಂದ 5 ರವರೆಗೆ ಕಾಮಗಾರಿಯ ಟೆಂಡರಿನ ದಿನಾಂಕವನ್ನು ಈ ಕೆಳಗಿನಂತೆ ಅನಿವಾರ್ಯ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ.

ಕ್ರಮ ಸಂಖ್ಯೆ	ವಿವರ	ಈ ಹಿಂದೆ ನಿಗದಿ ಪಡಿಸಿದ ದಿನಾಂಕ	ಈಗ ಮುಂದುವರಿಸಿದ ದಿನಾಂಕ
1	Last Date & Time for Tender Queries/Clarifications.	03-07-2021	06-07-2021
2	Last Date & Time for Receipt of tenders.	05-07-2021	07-07-2021
3	Date & Time for Opening of Tenders	06-07-2021	08-07-2021

ಟೆಂಡರ್ ಪ್ರಕಟಣೆಯ ಇತರ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/192/ಎಂ.ಸಿ.&ಎ/2021–22

30 ದಿನಗಳಲ್ಲಿ 20.74 ಲಕ್ಷ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಡಿಬಿಟಿ

2.92 ಲಕ್ಷ ಕಾರ್ಮಿಕರಿಗೆ ಜಮೆ ಆಗದ ಪರಿಹಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ಎರಡನೇ ಅಲೆಯಿಂದ ಸಂಕಷ್ಟದಲ್ಲಿರುವವರಿಗೆ ರಾಜ್ಯ ಸರ್ಕಾರ ಘೋಷಿಸಿದ ಆರ್ಥಿಕ ಪ್ಯಾಕೇಜ್‌ನಡಿ ಕಟ್ಟಡ ಕಾರ್ಮಿಕರು ಮತ್ತು ಅಸಂಘಟಿತ ವರ್ಗದ 20.74 ಲಕ್ಷ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಕೇವಲ 30 ದಿನಗಳಲ್ಲಿ ಕಾರ್ಮಿಕ ಇಲಾಖೆ ನೇರ ನಗದು ವರ್ಗಾವಣೆ (ಡಿಬಿಟಿ) ಮಾಡಿದೆ. ಆ ಪೈಕಿ, ಆಧಾರ್ ಸಂಖ್ಯೆ ಸರಿ ಇಲ್ಲದ ಕಾರಣಕ್ಕೆ 2.92 ಲಕ್ಷ ಕಾರ್ಮಿಕರ ಖಾತೆಗಳಿಗೆ ಹಣ ಜಮೆ ಆಗಿಲ್ಲ.

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಖಾತೆಗಳಿಗೆ ತಲಾ ₹ 3 ಸಾವಿರ ಪರಿಹಾರ ಮೊತ್ತ ಡಿಬಿಟಿ ಮಾಡಲಾಗಿದೆ. ಟೈಲರ್‌ಗಳು, ಗೃಹ ಕಾರ್ಮಿಕರು, ಹಮಾಲರು, ಮೆಕ್ಯಾನಿಕ್‌ಗಳು, ಕುಂಬಾರರು, ಅಗಸರು, ಕಮ್ಮಾರರು, ಮಂಡಕ್ಕಿ ಭಟ್ಟಿ ಕಾರ್ಮಿಕರು, ಕ್ಷೌರಿಕರು, ಅಕ್ಕಸಾಲಿಗರು, ಚಿಂದಿ ಆಯುವವರು ಈ 11 ವರ್ಗಗಳ ಫಲಾನುಭವಿಗಳಿಗೆ ತಲಾ ₹ 2 ಸಾವಿರದಂತೆ ನೆರವು ನೀಡಲಾಗುತ್ತಿದೆ. ಈ ಪ್ರಕ್ರಿಯೆಗೆ ಜೂನ್ 5ರಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿದ್ದರು.

'ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಪರಿಹಾರ ಹಣವನ್ನು ಕಾರ್ಮಿಕರ ಬ್ಯಾಂಕ್ ಖಾತೆ ಆಧರಿಸಿ ಜಮೆ ಮಾಡಲಾಗಿತ್ತು. ಇಲಾಖೆಯಲ್ಲಿ ನೋಂದಾಯಿತ ಮತ್ತು ಜಿಲ್ಲಾ ಮಟ್ಟದಲ್ಲಿ ನೋಂದಾಯಿತ ಖಾತೆಗಳಿಗೆ ಹಣ ಜಮೆ ಮಾಡಿದ್ದರಿಂದ ಗೊಂದಲ ಉಂಟಾಗಿತ್ತು. ಪರಿಹಾರ ಹಣವನ್ನು ಪಾರದರ್ಶಕವಾಗಿ ವಿತರಿಸುವ ಉದ್ದೇಶದಿಂದ ಬ್ಯಾಂಕ್ ಖಾತೆಗೆ ಜೋಡಣೆಯಾದ ಆಧಾರ್ ಸಂಖ್ಯೆ ಬಳಸಲು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರದಿಂದ (ಯುಐಡಿ) ಪರವಾನಗಿ ಪಡೆಯಲಾಗಿದೆ' ಎಂದು ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷಾ ತಿಳಿಸಿದರು.

'ಇನ್ನೂ ₹ 205.78 ಕೋಟಿ ಬೇಕು'

'ಅಸಂಘಟಿತ ವಲಯದ 11 ವರ್ಗಗಳಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ಈವರೆಗೆ (ಜುಲೈ 5) 9.80 ಲಕ್ಷ ಅರ್ಜಿಗಳು ಸಲ್ಲಿಕೆ ಆಗಿವೆ. ಅಲ್ಲದೆ, ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೋಂದಾಯಿತ 3.59 ಲಕ್ಷ ಕಾರ್ಮಿಕರು ಸೇರಿ ಒಟ್ಟು 13.39 ಲಕ್ಷ ಅರ್ಜಿಗಳು ಸ್ವೀಕೃತಗೊಂಡಿವೆ. ಅಷ್ಟೂ ಕಾರ್ಮಿಕರಿಗೆ ₹ 2 ಸಾವಿರದಂತೆ ಪರಿಹಾರ ನೀಡಲು ₹ 267.73 ಕೋಟಿ ಬೇಕಾಗಿದೆ. 3.10 ಲಕ್ಷ ಮಂದಿಗೆ ಪರಿಹಾರ ನೀಡಲು ₹ 61.95 ಕೋಟಿ ಸರ್ಕಾರ ನೀಡಿದ್ದು, ಇನ್ನೂ 10.29 ಲಕ್ಷ ಮಂದಿಗೆ ನೀಡಲು ₹ 205.78 ಕೋಟಿ ಹೆಚ್ಚುವರಿಯಾಗಿ ಬೇಕಾಗಿದೆ. ಅರ್ಜಿ ಸಲ್ಲಿಸಲು ಇದೇ 31 ಕೊನೆಯ ದಿನವಾಗಿದ್ದು, ಇನ್ನೂ 5 ಲಕ್ಷದಿಂದ 6 ಲಕ್ಷ ಅರ್ಜಿ ಸಲ್ಲಿಯಾಗುವ ನಿರೀಕ್ಷೆ ಇದೆ' ಎಂದು ಅಕ್ರಂ ಪಾಷಾ ತಿಳಿಸಿದರು.

ಯಾರಿಗೆ	ಡಿಬಿಟಿ	ಖಾತೆಗೆ ಜಮೆ	ತಿರಸ್ಕೃತ
ಕಟ್ಟಡ ಕಾರ್ಮಿಕರು	18,20,109	15,79,358	2,40,751
ಅಸಂಘಟಿತ 11 ವರ್ಗ	2,53,898	2,02,790	51,108

ಈ ಬಾರಿ ಆಧಾರ್ ನಂಬರ್ ಆಧರಿಸಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಪರಿಹಾರ ಮೊತ್ತ ಡಿಬಿಟಿ ಮಾಡಲಾಗಿದೆ. ಹೀಗಾಗಿ ಗೊಂದಲ ಇಲ್ಲದೆ ಹಣ ವರ್ಗಾವಣೆ ಸಾಧ್ಯವಾಗಿದೆ

ಅಕ್ರಂ ಪಾಷಾ, ಆಯುಕ್ತ, ಕಾರ್ಮಿಕ ಇಲಾಖೆ

ಬಿಡಿಎಫ್‌ಎ: ನಾಳೆಯಿಂದ ಪಂದ್ಯಗಳು

ಬೆಂಗಳೂರು: ಕೊರೊನಾ ಹಿನ್ನೆಲೆಯಲ್ಲಿ ಏಪ್ರಿಲ್‌ನಲ್ಲಿ ಸ್ಥಗಿತಗೊಂಡಿದ್ದ 'ಎ' ಮತ್ತು 'ಬಿ' ಡಿವಿಷನ್ ಪಂದ್ಯಗಳನ್ನು ಬುಧವಾರದಿಂದ ಪುನರಾರಂಭಿಸಲು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ (ಬಿಡಿಎಫ್‌ಎ) ಸಜ್ಜಾಗಿದೆ.

'ಎ' ಡಿವಿಷನ್‌ನ 17 ಮತ್ತು 'ಬಿ' ಡಿವಿಷನ್‌ನ ಸೆಮಿಫೈನಲ್ ಮತ್ತು ಫೈನಲ್ಸ್ ಸೇರಿ ಎಂಟು ಪಂದ್ಯಗಳು ಬಾಕಿ ಇವೆ.

'ಇನ್ನೂ ಕೆಲವೇ ಪಂದ್ಯಗಳನ್ನು ಆಡಿಸಬೇಕಿದ್ದು, ಜುಲೈ 17ಕ್ಕೆ ಟೂರ್ನಿಯನ್ನು ಮುಕ್ತಾಯಗೊಳಿಸಲಿದ್ದೇವೆ' ಎಂದು ಬಿಡಿಎಫ್‌ಎ ಮುಖ್ಯಸ್ಥ ಆ್ಯಂಟನಿ ಎಸ್.ಎಲ್. ತಿಳಿಸಿದ್ದಾರೆ.

ಇಂದಿನಿಂದ ಬ್ಯಾಸ್ಕೆಟ್‌ಬಾಲ್ ಲೀಗ್: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ಮಂಗಳವಾರದಿಂದ 'ಎ' ಡಿವಿಷನ್ ಲೀಗ್ ಆಯೋಜಿಸಲಿದೆ. ಸಂಸ್ಥೆಯು ಸೋಮವಾರ ಈ ವಿಷಯ ತಿಳಿಸಿದೆ.

‘2023ಕ್ಕೆ ಪರಿಶಿಷ್ಟದವರಿಗೆ ರಾಜ್ಯದ ಸಿ.ಎಂ ಹುದ್ದೆ ಸಿಗಬಹುದೇ? ಕುರಿತ ಸಂವಾದ

‘ಪರಿಶಿಷ್ಟ ಸಿ.ಎಂ: ಕಷ್ಟ, ಆದರೆ ಅಸಾಧ್ಯವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟರು ಕಾಂಗ್ರೆಸ್ ಮತ ಬ್ಯಾಂಕ್. ಹೀಗಾಗಿ, ಆ ಪಕ್ಷದ ಮುಂದಿನ ಮುಖ್ಯಮಂತ್ರಿ ಪಟ್ಟ ಈ ವರ್ಗದವರಿಗೆ ಸಿಗಬೇಕು’ ಎಂದು ಕೊಳ್ಳೇಗಾಲ ಪಕ್ಷೇತರ ಶಾಸಕ ಎನ್. ಮಹೇಶ್ ವಾದಿಸಿದರೆ, ‘ಪರಿಶಿಷ್ಟರಿಗೆ ಸಿಗಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ, ಕಾಂಗ್ರೆಸ್ ವ್ಯಕ್ತಿಯನ್ನು ಮುಂದಿಟ್ಟು ಚುನಾವಣೆ ಮಾಡುವುದಿಲ್ಲ. ಸಾಮೂಹಿಕ ನಾಯಕತ್ವದಲ್ಲಿ ಹೋಗಲಿದೆ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ಬಿ.ಎಲ್. ಶಂಕರ್ ಹೇಳಿದರು.

ಪ್ರಜಾವಾಣಿ ಸಂವಾದ

‘ಹೊಸ ರಾಜಕೀಯ ಪ್ರಯೋಗವೊಂದು ಫಲ ನೀಡುವವರೆಗೆ ಪರಿಶಿಷ್ಟ ಮುಖ್ಯಮಂತ್ರಿ ಅಷ್ಟು ಸುಲಭವಲ್ಲ. ಆ ಪ್ರಯೋಗ ಕಷ್ಟಸಾಧ್ಯವೇನೂ ಅಲ್ಲ’ ಎಂದು ‘ಜಾಗೃತ ಕರ್ನಾಟಕ’ ಸಂಘಟನೆಯ ಸಂಚಾಲಕ ಡಾ.ವಾಸು ಎಚ್.ವಿ ಅಭಿಪ್ರಾಯಪಟ್ಟರು. ‘2023ಕ್ಕೆ ಪರಿಶಿಷ್ಟ ಸಮುದಾಯಕ್ಕೆ ರಾಜ್ಯದ ಸಿ.ಎಂ ಹುದ್ದೆ ಸಿಗಬಹುದೇ’ ಎಂಬ ವಿಷಯ ಕುರಿತು ‘ಪ್ರಜಾವಾಣಿ’ ನೇರ ಸಂವಾದದಲ್ಲಿ ಇವರು ತಮ್ಮ ಅಭಿಪ್ರಾಯ ಮಂಡಿಸಿದರು. ಅದರ ಆಯ್ದ ಅಂಶಗಳು ಇಲ್ಲಿವೆ.

ಸಂವಾದವನ್ನು ಯುಟ್ಯೂಬ್‌ನಲ್ಲಿ ವೀಕ್ಷಿಸಲು ಕೊಂಡಿ:

https://youtu.be/k90KpxpPgeQ

‘ಪರಿಶಿಷ್ಟರು ಭವಿಷ್ಯದಲ್ಲಿ ಸಿ.ಎಂ ಆಗಲಿದ್ದಾರೆ‘

ಶೋಷಿತ, ಅವಕಾಶ ವಂಚಿತರಿಗೆ ಅವಕಾಶ ಸಿಗಬೇಕು ಎಂಬ ಕಾರಣಕ್ಕೆ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಆಯ್ಕೆ ಮಾಡಿಕೊಂಡಿದ್ದೇವೆ. ಆದರೆ, 70ರ ದಶಕದ ನಂತರ ಪಕ್ಷದ ಬದಲು, ವ್ಯಕ್ತಿಗೆ ಪ್ರಾಧಾನ್ಯತೆ ಬಂತು. ಸಾಮಾಜಿಕ, ಆರ್ಥಿಕ ಬಲಾಢ್ಯರಿಗೆ ರಾಜಕೀಯ ಅವಕಾಶ ಸಿಕ್ಕಿತು. ಪರಿಶಿಷ್ಟರಿಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕಿಲ್ಲ ಎನ್ನುವುದಕ್ಕೆ ನಿರ್ದಿಷ್ಟವಾದ ಒಂದು ಪಕ್ಷಕ್ಕೆ ಹೊಣೆ ಹೊರಿಸುವುದು ಸರಿಯಲ್ಲ. ಬಹಳ ವರ್ಷಗಳಿಂದ ಸಾಮಾಜಿಕ ಸಮಾನತೆಗೆ ನಡೆದ ಹೋರಾಟ ಹಿನ್ನೆಲೆಯಲ್ಲಿ ಈ ವಿಷಯವನ್ನು ಗಮನಿಸಬೇಕು. ರಾಜಕೀಯದಲ್ಲಿ ಸಾಮಾಜಿಕ ಸ್ಥಿತಿ, ಹಣ ವಹಿಸುವ ಪಾತ್ರವನ್ನು ನೋಡಿಕೊಂಡು ಚರ್ಚೆ ಮಾಡಬೇಕು. ಪರಿಸ್ಥಿತಿಯಿಂದಲೊ, ಪಿತೂರಿಯಿಂದಲೊ, ಜನಾಭಿಪ್ರಾಯದಿಂದಲೊ ಗೊತ್ತಿಲ್ಲ, ಪರಿಶಿಷ್ಟರು ಮುಖ್ಯಮಂತ್ರಿಯಾಗುವ ಸಾಧ್ಯತೆಯಂತೂ ಇದೆ. ಸ್ವಂತ ಬಲದಿಂದ ಮುಖ್ಯಮಂತ್ರಿ ಆಗುತ್ತೇನೆಂದರೆ ಸದ್ಯದ ವ್ಯವಸ್ಥೆಯಲ್ಲಿ ಕಷ್ಟ. ಪಕ್ಷಕ್ಕೂ, ನಾಯಕರಿಗೂ ಮತ ಬರಬೇಕು. ಆಗ ಮಾತ್ರ ಸಾಧ್ಯ. ಆದರೆ, ಧರ್ಮ ರಾಜಕೀಯ, ಭಾವನಾತ್ಮಕ ರಾಜಕೀಯ ಇರುವವರೆಗೆ ಅಷ್ಟು ಸುಲಭವಲ್ಲ. ಈ ಎರಡೂ ವಿಷಯ ರಾಜಕೀಯ ಧ್ರುವೀಕರಣಕ್ಕೆ ಕಾರಣವಾಗುತ್ತಿದೆ. ಆದರೆ, ಚುನಾವಣೆಗಳಲ್ಲಿ ಮುಂದಿನ ನಾಯಕರೊಬ್ಬರನ್ನು ಬೊಟ್ಟು ಮಾಡಿ ನಿಲ್ಲಿಸುವುದಕ್ಕೆ ನನ್ನ ವಿರೋಧವಿದೆ. ಸಿದ್ಧಾಂತ, ಈವರೆಗಿನ ಸಾಧನೆ, ಮುಂದಿನ ಯೋಜನೆಗಳನ್ನು ಆಧರಿಸಿ ಪಕ್ಷಗಳಿಗೆ ಜನರು ಮತ ನೀಡಬೇಕು.

ಬಿ.ಎಲ್. ಶಂಕರ್, ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ

‘ಪರಿಶಿಷ್ಟರು ಮತ ಬ್ಯಾಂಕ್ ಆಗಬಾರದು’

ಭಾವಿ ಮುಖ್ಯಮಂತ್ರಿ ಬಗ್ಗೆ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಪ್ರಸ್ತಾಪಿಸಿದ ಬಳಿಕ ಈ ವಿಷಯ ಮುನ್ನೆಲೆಗೆ ಬಂದಿದೆ. ಆದರೆ, 2008ರ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ, 2013ರಲ್ಲಿ ಜಿ. ಪರಮೇಶ್ವರ ಹೆಸರು ಮುಖ್ಯಮಂತ್ರಿ ಹುದ್ದೆಗೆ ಮುಂಚೂಣಿಯಲ್ಲಿತ್ತು. 70ರ ದಶಕದಿಂದಲೂ ಪರಿಶಿಷ್ಟರು ಕಾಂಗ್ರೆಸ್ಸಿಗೆ ಮತ ಹಾಕಿಕೊಂಡು ಬಂದಿದ್ದಾರೆ. ಹೀಗಾಗಿ, ಅವರಿಗೆ ಆ ಪಕ್ಷ ಅವಕಾಶ ನೀಡಬೇಕು. ಬಿಜೆಪಿಯಲ್ಲಿ ಯಡಿಯೂರಪ್ಪ ಅವರನ್ನು ಬದಲಿಸಿದರೆ ಪರಿಶಿಷ್ಟರಿಗೆ ಅವಕಾಶ ಕೊಡಬೇಕು. ಬಿಜೆಪಿಗೆ ಲಿಂಗಾಯತರು, ಜೆಡಿಎಸ್‌ಗೆ ಒಕ್ಕಲಿಗರು ಮತ ಬ್ಯಾಂಕ್. ಹೀಗಾಗಿ ಆ ಪಕ್ಷಗಳು ಅಧಿಕಾರಕ್ಕೆ ಬಂದಾಗ ಆ ಸಮುದಾಯದವರು ಮುಖ್ಯಮಂತ್ರಿ ಆಗಿಲ್ಲವೇ? ಉಳಿದ ಸಮುದಾಯಗಳ ಮತಗಳು ನಷ್ಟ ಆಗಬಾರದು ಎಂಬ ಭಯದಿಂದ ಚುನಾವಣೆ ಸಂದರ್ಭದಲ್ಲಿ ಪರಿಶಿಷ್ಟರಿಗೆ ಮುಖ್ಯಮಂತ್ರಿ ವಿಷಯಕ್ಕೆ ಆದ್ಯತೆ ಸಿಗುತ್ತಿಲ್ಲ. ಪರಿಶಿಷ್ಟರು ಮತ ಬ್ಯಾಂಕ್ ಆಗಬಾರದು. 200 ಕ್ಷೇತ್ರಗಳಲ್ಲಿ ಪರಿಶಿಷ್ಟರು ನಿರ್ಣಾಯಕರು. ಪಕ್ಷಾತೀತವಾಗಿ ಉತ್ತಮರನ್ನು ಆಯ್ಕೆ ಮಾಡಿದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವಚ್ಛ ಮಾಡಲು ಸಾಧ್ಯ. ಹೋರಾಟ ಅಥವಾ ಹೊಂದಾಣಿಕೆಯ ರಾಜಕೀಯವಾದರೂ ಸರಿ, ಶಕ್ತಿ ಕೇಂದ್ರದಲ್ಲಿ ಪರಿಶಿಷ್ಟರು ಇರಬೇಕು. ಕೇವಲ ಬೀದಿಯಲ್ಲಿ ನಿಂತರೆ ಆಗಲ್ಲ. ಹೋರಾಟ ಕೊನೆಯ ಅಸ್ತ್ರ.

ಎನ್.ಮಹೇಶ್, ಶಾಸಕ, ಕೊಳ್ಳೇಗಾಲ

‘ಪ್ರಾಯೋಗಿಕ ರಾಜಕೀಯದಿಂದ ಮಾತ್ರ ಸಾಧ್ಯ’



2023ಕ್ಕೆ ಪರಿಶಿಷ್ಟ ಮುಖ್ಯಮಂತ್ರಿ ಆಗಬೇಕೇ ಎಂದರೆ ಆಗಲೇಬೇಕು. ಆಗುವ ಸಾಧ್ಯತೆ ಇದೆಯೇ ಅಂದರೆ ಇಲ್ಲ. ಸಿದ್ಧಾಂತಗಳ ವಿಚಾರದಲ್ಲಿ ರಾಜಿ, ಡಮ್ಮಿ ಕಾರಣಕ್ಕೊ ಮುಖ್ಯಮಂತ್ರಿಯಾಗುವುದು ಬೇರೆ. ಅರ್ಹತೆ ಇದ್ದೂ ಪರಿಶಿಷ್ಟರು ಮುಖ್ಯಮಂತ್ರಿ ಯಾಕೆ ಆಗುವುದಿಲ್ಲ ಎನ್ನುವುದು ಮುಖ್ಯ. ಉತ್ತರ ಪ್ರದೇಶದಲ್ಲಿ ಬಹುಜನ ರಾಜಕೀಯದ ಮೂಲಕ ಬಿಎಸ್‌ಪಿಯನ್ನು ಅಧಿಕಾರಕ್ಕೆ ತಂದು ಮಾಯಾವತಿ ಮುಖ್ಯಮಂತ್ರಿ ಆಗಿಲ್ಲವೇ? ಮಲ್ಲಿಕಾರ್ಜುನ ಖರ್ಗೆಯಂಥ ನಾಯಕರಿದ್ದೂ ಅವರು ಮುಖ್ಯಮಂತ್ರಿ ಆಗಬೇಕೆಂದು ಸಿದ್ದರಾಮಯ್ಯ ಆದಿಯಾಗಿ ಯಾವ ನಾಯಕರೂ ಬಹಿರಂಗವಾಗಿ ಹೇಳಿಲ್ಲ. ಸದ್ಯ ಈ ವಿಷಯ ಅಸಂಗತವಾದರೂ ಪರಿಶಿಷ್ಟರು ಮುಖ್ಯಮಂತ್ರಿ ಆಗಬೇಕೆ ಎನ್ನುವುದನ್ನು ಬಿಜೆಪಿಯಲ್ಲಿ ಆರೆಸ್ಸೆಸ್‌ನ ಕೇಂದ್ರ ನಾಗಪುರ, ಕಾಂಗ್ರೆಸ್‌ನಲ್ಲಿ 10 ಜನಪಥ್ ತೀರ್ಮಾನ ಮಾಡಬೇಕು. ಸಾಂವಿಧಾನಿಕ ರಾಜಕೀಯ ಈಗ ನಡೆಯುತ್ತಿಲ್ಲ. ದೊಡ್ಡ ಜಾತಿ, ಬಲಾಢ್ಯರದ್ದೇ ಬಲ. ಪರಿಶಿಷ್ಟರು ಮುಖ್ಯಮಂತ್ರಿ ಹುದ್ದೆಗೇರಬೇಕಿದ್ದರೆ ರಾಜ್ಯದಲ್ಲೂ ಹೊಸ ರೀತಿಯ ಪ್ರಾಯೋಗಿಕ ರಾಜಕೀಯ ರೂಪುಗೊಳ್ಳಬೇಕು. ಬಿಎಸ್‌ಪಿ, ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬಂದಿದ್ದೇ ಅಂಥ ಪ್ರಯೋಗದಿಂದ. ಅದು ಯಶಸ್ಸು ಕಾಣುತ್ತದೆ ಎನ್ನುವುದಕ್ಕೆ ಹಿಂದುತ್ವದ ರಾಜಕೀಯ, ಅಸಾಂವಿಧಾನಿಕ ರಾಜಕೀಯ ಮಾಡಿದ ಮೋದಿಯೇ ಉದಾಹರಣೆ.

ಡಾ.ವಾಸು ಎಚ್.ವಿ, ಸಂಚಾಲಕ, ಜಾಗೃತ ಕರ್ನಾಟಕ

ಪ್ರಜಾವಾಣಿ facebook LIVE FB.com/prajavani.net

ಎಸ್ಸೆಸ್ಸೆಲ್ಸಿ ಪರೀಕ್ಷಾ ಸಿದ್ಧತೆಗೆ ಸಲಹೆಗಳು

ಈ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ವಿಧಾನ ಬದಲಾಗಿದೆ. ತಯಾರಿಯನ್ನೂ ಕಡಿಮೆ ಸಮಯದಲ್ಲಿ ಮಾಡಿಕೊಳ್ಳಬೇಕಿದೆ. ಈ ಬಗ್ಗೆ ಮಾಹಿತಿ, ಸಿದ್ಧತೆಗೆ ಟಿಪ್ಸ್, ಉತ್ತರ ಬರೆಯುವ ಸುಲಭ ವಿಧಾನ ಹಂಚಿಕೊಳ್ಳಲಿದ್ದಾರೆ

ವೆಂಕಟ ಸುಬ್ಬರಾವ್ ವಿ. ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಂ, ಬೆಂಗಳೂರು

ಸಂದರ್ಶಕರು: ಸ್ವಾಮಿ ಎಚ್.ಆರ್., ಸಹಾಯಕ ಶಿಕ್ಷಕರು, ಸರ್ಕಾರಿ ಗರ್ಲ್ಸ್ ಹೈಸ್ಕೂಲ್, ದೇವನಹಳ್ಳಿ

ನೀವೂ ಪ್ರಶ್ನೆಗಳನ್ನು ಕೇಳಬಹುದು

7ನೇ ಜುಲೈ 2021, ಸಂಜೆ 4ಕ್ಕೆ

ಪ್ರಜಾವಾಣಿ LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಕೋವಿಡ್ ಸಂದರ್ಭದಲ್ಲಿ ಹೆಚ್ಚುತ್ತಿರುವ ಬೊಜ್ಜು



ಮಕ್ಕಳು, ಹದಿಹರೆಯದವರು ಸೇರಿದಂತೆ ಎಲ್ಲರಲ್ಲೂ ಬೊಜ್ಜು ಹೆಚ್ಚುತ್ತಿದೆ. ಇದಕ್ಕೆ ಕಾರಣವೇನು, ವ್ಯಾಯಾಮ, ಪಥ್ಯಾಹಾರ ಹಾಗೂ ವೈದ್ಯಕೀಯ ಪರಿಹಾರಗಳೇನು ಎಂಬುದರ ಕುರಿತು ಮಾತನಾಡಲಿದ್ದಾರೆ ಬ್ಯಾರಿಯಾಟ್ರಿಕ್ ಸರ್ಜನ್ ಡಾ. ನಂದಾ ರಜನೀಶ್

ನೀವೂ ಪ್ರಶ್ನೆಗಳನ್ನು ಕೇಳಬಹುದು ಇಂದು ಬೆಳಿಗ್ಗೆ 11ಕ್ಕೆ

ಬನ್ನೇರುಘಟ್ಟದಲ್ಲಿ ಪ್ರವಾಸಿಗರು..

ಪ್ರವಾಸಿ ತಾಣಗಳನ್ನು ತೆರೆಯಲು ಅನುಮತಿ ನೀಡಿದ್ದರಿಂದ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸೋಮವಾರ ಪ್ರವಾಸಿಗರು ಪ್ರಾಣಿಗಳನ್ನು ವೀಕ್ಷಣೆ ಮಾಡಿದರು. ಸೋಮವಾರ ಒಂದೇ ದಿನ 961 ಪ್ರವಾಸಿಗರು ವೀಕ್ಷಣೆ ಮಾಡಿದ್ದಾರೆ

-ಪ್ರಜಾವಾಣಿ ಚಿತ್ರ/ ರಂಜು ಪಿ

ಮೇಕೆದಾಟು ಯೋಜನೆ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ಸ್ಟಾಲಿನ್‌ಗೆ ಬಿಎಸ್‌ವೈ ಪತ್ರ ಬರೆದಿದ್ದು ತಪ್ಪು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣದ ವಿಚಾರದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಪತ್ರ ಬರೆದಿರುವುದು ತಪ್ಪು ನಡೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಶ್ರೀನಗರದಲ್ಲಿ ಯುವ ಕಾಂಗ್ರೆಸ್ ಸಮಿತಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿನಸಿ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ಅವರು, ‘ನ್ಯಾಯಾಲಯದ ಆದೇಶದ ಪ್ರಕಾರ ನಮ್ಮ ಕೆಲಸ ಮಾಡಬೇಕು. ಕರ್ನಾಟಕದವರು ಅಣೆಕಟ್ಟೆ ನಿರ್ಮಿಸಲು ತಮಿಳುನಾಡು ಮುಖ್ಯಮಂತ್ರಿಯ ಅನುಮತಿ ಏಕೆ ಬೇಕು? ಮೇಕೆದಾಟು ಅಣೆಕಟ್ಟೆ ನಿರ್ಮಾಣದಿಂದ ತಮಿಳುನಾಡಿಗೆ ತೊಂದರೆ ಆಗುವುದಿಲ್ಲ. ಪತ್ರ ಬರೆದು ಅನುಮತಿ ಕೇಳಿದರೆ ಯಾವ ರಾಜ್ಯವೂ ಒಪ್ಪುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ಯಾವತ್ತೂ ಪತ್ರ ಬರೆದು ಒಪ್ಪಿಗೆ ಕೇಳಿರಲಿಲ್ಲ’ ಎಂದರು.

‘ಧರಣಿ ಕೂರುತ್ತಿದ್ದೆ’: ‘15ನೇ ಹಣಕಾಸು ಆಯೋಗದ ವರದಿ ಪ್ರಕಾರ, ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಇನ್ನೂ ₹ 5,495 ಕೋಟಿ ಬರಬೇಕಿದೆ. ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುತ್ತಾರೆ ಎಂಬ ಭಯ. ಆದ್ದರಿಂದ ಅವರು ಕೇಂದ್ರ ಸರ್ಕಾರದ ವಿರುದ್ಧ ಮಾತನಾಡುವುದಿಲ್ಲ. ನಾನೇ ಮುಖ್ಯಮಂತ್ರಿ ಆಗಿದ್ದರೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಚೇರಿ ಎದುರು ಧರಣಿ ಕೂರುತ್ತಿದ್ದೆ’ ಎಂದು ಹೇಳಿದರು.

‘ಮುಖ್ಯಮಂತ್ರಿ ಜತೆ ವಿಪಕ್ಷಗಳು ಶಾಮೀಲಾಗಿವೆ’ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಯತ್ನಾಳ ಹಲವು ದಿನಗಳಿಂದ ಹೇಳುತ್ತಿದ್ದಾರೆ. ಅಂತಹ ಭ್ರಷ್ಟ ಸರ್ಕಾರದಲ್ಲಿ ಇವರೇಕೆ ಶಾಸಕನಾಗಿ ಮುಂದುವರಿದಿದ್ದಾರೆ’ ಎಂದು ಪ್ರಶ್ನಿಸಿದರು.

ಶೀಘ್ರವೇ ಮೇಕೆದಾಟು ಯೋಜನೆ ಆರಂಭ:ಬಿಎಸ್‌ವೈ

ಬೆಂಗಳೂರು: ಕಾವೇರಿ ನದಿ ಪಾತ್ರದಲ್ಲಿ ನೀರು ಬಳಸಿಕೊಳ್ಳಲು ಆಡಳಿತಾತ್ಮಕ, ಕಾನೂನಾತ್ಮಕ ಕ್ರಮ ಕೈಗೊಳ್ಳುವ ಜತೆಗೆ ಮೇಕೆದಾಟು ಯೋಜನೆ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ತಮಿಳುನಾಡಿನಲ್ಲಿ ಹೊಸ ಸರ್ಕಾರವು ಅಸ್ತಿತ್ವಕ್ಕೆ ಬಂದ ಕಾರಣ ಎರಡು ರಾಜ್ಯಗಳ ನಡುವಿನ ಸೌಹಾರ್ದತೆಯ ಸಲುವಾಗಿ ಅಲ್ಲಿನ ಮುಖ್ಯಮಂತ್ರಿಗೆ ಪತ್ರ ಬರೆಯಲಾಗಿತ್ತು. ಮೇಕೆದಾಟು ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ ಮತ್ತು ಈ ಯೋಜನೆಯ ನಿರ್ಮಾಣದಿಂದ ಎರಡೂ ರಾಜ್ಯಗಳಿಗೆ ಅನುಕೂಲವಾಗುವ ಅಂಶಗಳನ್ನು ಪತ್ರದಲ್ಲಿ ತಿಳಿಸಲಾಗಿತ್ತು ಎಂದಿದ್ದಾರೆ.

ಆದರೆ, ತಮಿಳುನಾಡು ಸರ್ಕಾರ, ಅದನ್ನು ಅರ್ಥ ಮಾಡಿಕೊಳ್ಳದೇ ಯೋಜನೆಯಿಂದ ತಮ್ಮ ರಾಜ್ಯಕ್ಕೆ ತೊಂದರೆ ಆಗುತ್ತದೆ ಎಂದು ವ್ಯಾಖ್ಯಾನಿಸಿದೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು 4.75 ಟಿಎಂಸಿ ಅಡಿ ನೀರನ್ನು ಸರ್ವೋಚ್ಛ ನ್ಯಾಯಾಲಯವು ಆದೇಶಿಸಿದೆ. ಈ ಉದ್ದೇಶಕ್ಕಾಗಿ 23.75 ಟಿಎಂಸಿ ಅಡಿ ನೀರಿನ ಪ್ರಮಾಣವನ್ನು ಸಂಗ್ರಹಿಸಿ ಪೂರೈಸಬೇಕಾಗುತ್ತದೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

ಈ ಯೋಜನೆಯಿಂದ ತಮಿಳುನಾಡು ರಾಜ್ಯಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ವಾಸ್ತವದಲ್ಲಿ ನೀರಿನ ಹರಿವಿನಲ್ಲಿ ಅನುಕೂಲವಾಗುತ್ತದೆ. ಇದನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ರಾಜಕೀಯ ಕಾರಣಗಳಿಗೆ ವಿರೋಧಿಸುತ್ತಿದೆ ಎಂದಿದ್ದಾರೆ.

ಈ ವಿಚಾರವಾಗಿ 2018 ರಲ್ಲಿ ತಮಿಳುನಾಡು ರಾಜ್ಯವು (ಮಿಸಲೇನಿಯಸ್ ಅಪ್ಲಿಕೇಷನ್) ದಾವೆಯನ್ನು ಸಲ್ಲಿಸಿದೆ. ಆದರೆ, ಯೋಜನೆಯನ್ನು ಅನುಷ್ಠಾನಗೊಳಿಸಲು ಯಾವುದೇ ಅಡೆ ತಡೆ ಇರುವುದಿಲ್ಲ. ಯೋಜನೆಯನ್ನು ಜಾರಿಗೊಳಿಸಲು ಅಗತ್ಯವಿರುವ ತೀರುವಳಿಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದ್ದು, ಶೀಘ್ರವೇ ತೀರುವಳಿಗಳನ್ನು ಪಡೆದು ಯೋಜನೆಯನ್ನು ಜಾರಿ ಮಾಡಲಾಗುವುದು ಎಂದು ಅವರು ಹೇಳಿದರು.

‘ಮೇಕೆದಾಟು ಯೋಜನೆ ಮಾಡಿಯೇ ತೀರುತ್ತೇವೆ’



ಬೆಂಗಳೂರು: ‘ಕುಡಿಯುವ ನೀರು ಪೂರೈಕೆ ಉದ್ದೇಶದ ಮೇಕೆದಾಟು ಯೋಜನೆಯನ್ನು ಯಾವುದೇ ಕಾರಣಕ್ಕೂ ಬಿಡುವ ಪ್ರಶ್ನೆಯೇ ಇಲ್ಲ. ಮಾಡಿಯೇ ತೀರುತ್ತೇವೆ’ ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಮೇಕೆದಾಟು ಯೋಜನೆ ಬಗ್ಗೆ ಮಾತನಾಡಿರುವ ಭಾಷೆ ಮತ್ತು ವೈಖರಿ ಸರಿಯಾಗಿಲ್ಲ’ ಎಂದು ತಿಳಿಸಿದರು.

‘ಕೃಷ್ಣರಾಜಸಾಗರ ಅಣೆಕಟ್ಟು ಸೇರಿದಂತೆ ಎಲ್ಲ ನೀರಾವರಿ ಯೋಜನೆಗಳಿಗೂ ತಮಿಳುನಾಡು ಅಡ್ಡಿ ಮಾಡುತ್ತಲೇ ಬಂದಿತ್ತು. ಎಲ್ಲದರಲ್ಲೂ ಆಕ್ಷೇಪ ವ್ಯಕ್ತಪಡಿಸಿತ್ತು. ನಾವು ಈಗ ಮಾಡುತ್ತಿರುವುದು ಕುಡಿಯುವ ನೀರು ಪೂರೈಕೆ ಮತ್ತು ಜಲವಿದ್ಯುತ್ ಉತ್ಪಾದನೆ ಯೋಜನೆಯಾಗಿದೆ. ಜಲ ಸಂಕಷ್ಟದ ಸಂದರ್ಭದಲ್ಲಿ ನೀರು ನಿರ್ವಹಣೆಗೂ ಈ ಯೋಜನೆ ಸಹಾಯಕವಾಗಲಿದೆ ಎಂದರು. ಈ ಯೋಜನೆಗೆ ಸಂಬಂಧಿಸಿದ ಪ್ರಕರಣವೊಂದು ಸುಪ್ರೀಂ ಕೋರ್ಟ್‌ನಲ್ಲಿದೆ. ಕಾನೂನು ಹೋರಾಟದಲ್ಲಿ ರಾಜ್ಯಕ್ಕೇ ಜಯವಾಗುತ್ತದೆ ಎಂಬ ವಿಶ್ವಾಸವಿದೆ. ಇದಕ್ಕೆ ಕೇಂದ್ರದ ವಿವಿಧ ಇಲಾಖೆಗಳಿಂದ ಸಿಗಬೇಕಾದ ಎಲ್ಲ ಅನುಮತಿಗಳೂ ಸಿಗಲಿದೆ ಎಂದು ಬೊಮ್ಮಾಯಿ ತಿಳಿಸಿದರು.

ಕಂದಾಯ ಸಚಿವ ಆರ್.ಅಶೋಕ ಅವರೂ, ಮೇಕೆದಾಟು ಯೋಜನೆಯನ್ನು ಪೂರ್ಣಗೊಳಿಸುತ್ತೇವೆ. ಯಾರನ್ನೋ ಕೇಳಿ ಮಸಾಲೆ ಅರೆಯಬೇಕಾಗಿಲ್ಲ ಎಂದು ಹೇಳಿದರು.

‘ಕೂಡಲೆ ಕಾಮಗಾರಿ ಆರಂಭಿಸಿ‘

ಮಂಗಳೂರು: ‘ಮೇಕೆದಾಟು ವಿಚಾರದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ, ತಮಿಳುನಾಡು ಮುಖ್ಯಮಂತ್ರಿಗೆ ಮನವಿ ಮಾಡುತ್ತಿದ್ದಾರೆ. ಡಬಲ್ ಎಂಜಿನ್ ಸರ್ಕಾರ ಸಂಧಾನಕ್ಕೆ ಹೋಗುತ್ತಿರುವುದು ರಾಜ್ಯಕ್ಕೆ ಗೌರವ ತರುವಂಥದ್ದಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ‘ಯಡಿಯೂರಪ್ಪ ಅವರಿಗೂ ರಾಜಕೀಯ ಬದ್ಧತೆ ಇರಬೇಕು. ರಾಜ್ಯದ ಹಿತ ಕಾಪಾಡಬೇಕು. ನಾವು ನಿಮ್ಮ ಜೊತೆ ಇರುತ್ತೇವೆ. ಕೂಡಲೇ ಟೆಂಡರ್ ಕರೆದು, ಕಾಮಗಾರಿ ಆರಂಭಿಸಬೇಕು’ ಎಂದು ಒತ್ತಾಯಿಸಿದರು.

‘ಕೆಆರ್‌ಎಸ್ ಅಣೆಕಟ್ಟೆಗೆ ಸಂಸದೆ ಸುಮಲತಾ ಅವರನ್ನು ಅಡ್ಡಲಾಗಿ ಮಲಗಿಸಿ’ ಎಂಬ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ‘ಅದನ್ನು ಸುಮಲತಾ ಅವರೇ ನೋಡಿಕೊಳ್ಳುತ್ತಾರೆ’ ಎಂದರು.

ಕೋವಿಡ್ ಲಸಿಕೆ ಪಡೆಯದೇ ಇರುವವರಿಗೆ ಕೊರೊನಾ ವೈರಾಣು ಸೋಂಕಿನ ಮೂರನೆ ಅಲೆ ಅಪಾಯಕಾರಿಯಾಗಲಿದೆ ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ಆದರೆ, ರಾಜ್ಯ ಸರ್ಕಾರ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ ಎಂದು ಟೀಕಿಸಿದರು.

ದ್ವಿತೀಯ ಪಿಯುಸಿ ಪುನರಾವರ್ತಿತ ಅಭ್ಯರ್ಥಿಗಳ ತೇರ್ಗಡೆ

ಬೆಂಗಳೂರು: ‘ಪ್ರಸಕ್ತ ಸಾಲಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಪುನರಾವರ್ತಿತ ಅಭ್ಯರ್ಥಿಗಳನ್ನು ಕೂಡಾ ಉತ್ತೀರ್ಣಗೊಳಿಸಲು ನಿರ್ಧರಿಸಲಾಗಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ತಿಳಿಸಿದ್ದಾರೆ.

‘ಪುನರಾವರ್ತಿತ ಅಭ್ಯರ್ಥಿಗಳನ್ನೂ ಉತ್ತೀರ್ಣಗೊಳಿಸಬೇಕೆಂದು ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಹೀಗಾಗಿ ಪುನರಾವರ್ತಿತ ಅಭ್ಯರ್ಥಿಗಳನ್ನೂ ಈ ವರ್ಷದ ಮಟ್ಟಿಗೆ ಉತ್ತೀರ್ಣಗೊಳಿಸಲು ನಿರ್ಧರಿಸಿರುವ ಬಗ್ಗೆ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಸರ್ಕಾರದ ಈ ನಿಲುವನ್ನು ಹೈಕೋರ್ಟ್ ಸಮ್ಮತಿಸಿದೆ’ ಎಂದು ಅವರು ವಿವರಿಸಿದ್ದಾರೆ.

ದ್ವಿತೀಯ ಪಿಯುಸಿ ತೇರ್ಗಡೆ: ಅಂಕ ನಿಗದಿ ಹೇಗೆ: ಎಸ್ಸೆಸ್ಸೆಲ್ಸಿ ಮತ್ತು ಪ್ರಥಮ ಪಿಯುಸಿಯ ತಲಾ ಶೇ 45ರಷ್ಟು ಅಂಕ, ದ್ವಿತೀಯ ಪಿಯುಸಿ ಶೈಕ್ಷಣಿಕ ಚಟುವಟಿಕೆಗೆ ಶೇ 10 ಮತ್ತು ಪ್ರಥಮ ಪಿಯುಸಿಯಲ್ಲಿ ಪಡೆದ ಅಂಕಗಳಿಗೆ ಶೇ 5 ಕೃಪಾಂಕ ನೀಡಲಾಗುವುದು.

ಪುನರಾವರ್ತಿತ ವಿದ್ಯಾರ್ಥಿಗಳಿಗೆ ಕನಿಷ್ಠ ಉತ್ತೀರ್ಣ ಅಂಕಗಳನ್ನು ಮತ್ತು ಶೇ 5ರಷ್ಟು ಕೃಪಾಂಕ ನೀಡಿ ಫಲಿತಾಂಶ ಘೋಷಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.ಈ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಳ್ಳುವ ಖಾಸಗಿ ಅಭ್ಯರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆ ನಡೆಸಿ ಫಲಿತಾಂಶ ನೀಡಲು ಕೂಡಾ ಇಲಾಖೆ ತೀರ್ಮಾನಿಸಿದೆ.

ನಿರಾಣಿಗೆ ವರಿಷ್ಠರ ಬುಲಾವ್?

ಪ್ರಜಾವಾಣಿ ವಾರ್ತೆ

ಬೆಂಗಳೂರು:ಗಣಿ ಸಚಿವ ಮುರುಗೇಶ ನಿರಾಣಿ ಅವರಿಗೆ ಪಕ್ಷದ ವರಿಷ್ಠರು ತಕ್ಷಣವೇ ದೆಹಲಿಗೆ ಬರುವಂತೆ ಸೂಚನೆ ನೀಡಿದ್ದು, ಮಂಗಳವಾರವೇ ಅವರು ದೆಹಲಿಗೆ ತೆರಳಲಿದ್ದಾರೆ.

ಗೃಹ ಸಚಿವ ಅಮಿತ್ ಶಾ ಸೂಚನೆ ಬಂದಿದ್ದರಿಂದಾಗಿ, ಪೂರ್ವ ನಿಗದಿಯಾಗಿದ್ದ ಬಳ್ಳಾರಿ ಮತ್ತು ಕಲಬುರ್ಗಿ ಜಿಲ್ಲೆಗಳ ಪ್ರವಾಸವನ್ನು ಹಠಾತ್ ರದ್ದುಪಡಿಸಿದ ನಿರಾಣಿ ಸೋಮವಾರ ರಾತ್ರಿ ಚಿತ್ರದುರ್ಗದಿಂದ ಬೆಂಗಳೂರಿಗೆ ವಾಪಸ್ ಆದರು. ಮಂಗಳವಾರ ಬೆಳಿಗ್ಗೆ 5.30 ಕ್ಕೆ ಅವರು ದೆಹಲಿಗೆ ಪ್ರಯಾಣ ಬೆಳಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಯಾವ ಕಾರಣಕ್ಕಾಗಿ ಬರಲು ಹೇಳಿದ್ದಾರೆ ಎಂಬ ಖಚಿತ ಮಾಹಿತಿ ಲಭ್ಯವಾಗಿಲ್ಲ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಚರ್ಚೆ ನಡೆದಿರುವ ಬೆನ್ನಲ್ಲೇ ಈ ವಿದ್ಯಮಾನ ಕುತೂಹಲ ಕೆರಳಿಸಿದೆ.

ಅಮಿತ್ ಶಾ ಅವರ ಜತೆ ನಿರಾಣಿ ಅವರ ಸಂಬಂಧ ಉತ್ತಮವಾಗಿದ್ದು, ಹಲವು ಬಾರಿ ಶಾ ಅವರನ್ನು ಭೇಟಿ ಮಾಡಿದ್ದರು. ಆದರೆ, ಅದು ರಾಜಕೀಯ ಭೇಟಿ ಅಲ್ಲ ಎಂದು ನಿರಾಣಿ ಹೇಳಿದ್ದಾರೆ. ಈ ಮಧ್ಯೆ ಅವರ ಹೆಸರೂ ಮುಖ್ಯಮಂತ್ರಿ ಹುದ್ದೆಗೂ ಕೇಳಿ ಬಂದಿತ್ತು. ಆದರೆ, ಅವರು ಅದನ್ನು ನಿರಾಕರಿಸಿದ್ದರು.

ಈ ಬಾರಿಯ ಭೇಟಿಯಲ್ಲಿ ರಾಜ್ಯದ ರಾಜಕೀಯವ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ ಇರಬಹುದು ಎಂದು ಮೂಲಗಳು ಹೇಳಿವೆ. ಸದ್ಯವೇ ಕೇಂದ್ರ ಸಚಿವ ಸಂಪುಟ ವಿಸ್ತರಣೆಯೂ ಆಗಲಿದ್ದು, ರಾಜ್ಯದ ಒಬ್ಬರು ಅಥವಾ ಇಬ್ಬರು ಸಂಸದರಿಗೆ ಸಚಿವ ಸ್ಥಾನ ಸಿಗಬಹುದು. ಬಿ.ವೈ.ರಾಘವೇಂದ್ರ, ಪ್ರತಾಪಸಿಂಹ ಅವರ ಹೆಸರೂ ಚಾಲ್ತಿಯಲ್ಲಿವೆ.

ಡಿಕೆಶಿಯಿಂದ ರೇವಂತ್ ರೆಡ್ಡಿಗೆ ರಾಜಕೀಯ ಪಾಠ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷ ರೇವಂತ್ ರೆಡ್ಡಿ, ಆ ರಾಜ್ಯದ ವಿರೋಧ ಪಕ್ಷದ ನಾಯಕ ರಘುವೀರ ರೆಡ್ಡಿ ಸೋಮವಾರ ಭೇಟಿಯಾಗಿದ್ದರು.

ಸದಾಶಿವನಗರದಲ್ಲಿನ ಶಿವಕುಮಾರ್ ನಿವಾಸಕ್ಕೆ ಬೆಳಿಗ್ಗೆ ಬಂದ ರೇವಂತ್, ತಮ್ಮ ಪದಗ್ರಹಣ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನ ನೀಡಿದರು. ಜೊತೆಗೆ ಕೆಪಿಸಿಸಿ ಅಧ್ಯಕ್ಷರಾಗಿ ವರ್ಷ ಪೂರೈಸಿದ ಶಿವಕುಮಾರ್ ಅವರನ್ನು ಅಭಿನಂದಿಸಿದರು.

ಕಾಂಗ್ರೆಸ್ ಸಂಸದರೂ ಆಗಿರುವ ಯುವ ನಾಯಕ ರೇವಂತ್ ರೆಡ್ಡಿ, ಜೂನ್ 3ರಂದು ಅಧ್ಯಕ್ಷರಾಗಿ ನಿಯೋಜನೆಗೊಂಡಿದ್ದಾರೆ. ಹೈದರಾಬಾದ್ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಪಕ್ಷ ಕಳಪೆ ಸಾಧನೆ ಮಾಡಿದ ಕಾರಣ, ಅಧ್ಯಕ್ಷರಾಗಿದ್ದ ಎಂ.ಉತ್ತಮ್ ಕುಮಾರ್ ರೆಡ್ಡಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತೆರವಾಗಿದ್ದ ಆ ಸ್ಥಾನಕ್ಕೆ ರೇವಂತ್ ರೆಡ್ಡಿ ಆಯ್ಕೆ ಆಗಿದ್ದಾರೆ.

‘ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಡಿ.ಕೆ. ಶಿವಕುಮಾರ್ ಅಳವಡಿಸಿಕೊಂಡಿರುವ ಕಾರ್ಯತಂತ್ರಗಳು, ಎದುರಾದ ಉಪಚುನಾವಣೆಗಳಲ್ಲಿ ನಡೆಸಿದ ತಂತ್ರಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನು ವಿಶ್ವಾಸ ಪಡೆದುಕೊಂಡು ಪಕ್ಷವನ್ನು ಸಂಘಟಿಸಿದ ಬಗ್ಗೆ ರೇವಂತ್ ರೆಡ್ಡಿ ಮಾಹಿತಿ ಪಡೆದುಕೊಂಡರು’ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಬ್ರಿಟನ್ ಪೌರತ್ವ: ಜಾಸ್ಮಿನ್ ಜತೆ ವಿವಾಹ

ಬ್ರಿಟನ್ ಸೇನೆಯಲ್ಲಿ ಶಹಾಪುರದ ಯುವಕ

• ಸಿದ್ದನಗೌಡ ಪಾಟೀಲ

ಕೊಪ್ಪಳ: ಗೋವಾದ ಬೀಚ್‌ನಲ್ಲಿ ಕಡಲೆಕಾಯಿ ಮಾರುತ್ತಿದ್ದ ಜಿಲ್ಲೆಯ ‘ಅನಾಥ’ ಯುವಕ ಗೋಪಾಲ ವಾಕೋಡೆ, ಬ್ರಿಟನ್ ದಂಪತಿ ನೆರವಿನೊಂದಿಗೆ ಇಂಗ್ಲೆಂಡ್‌ಗೆ ತೆರಳಿ ಅಲ್ಲಿನ ಸೈನ್ಯದಲ್ಲಿ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ತಾಲ್ಲೂಕಿನ ಶಹಾಪುರ ಗ್ರಾಮದ ಯಲ್ಲಪ್ಪ ವಾಕೋಡೆ ಮತ್ತು ಫಕೀರವ್ವ ದಂಪತಿಯ ಐವರು ಮಕ್ಕಳಲ್ಲಿ ಗೋಪಾಲ ಎರಡನೇ ಮಗ. ಮನೆಯಲ್ಲಿ ಕಿತ್ತು ತಿನ್ನುವ ಬಡತನದಿಂದ ಕೂಲಿ ಅರಸಿ 10ನೇ ವಯಸ್ಸಿನಲ್ಲಿ ಪಾಲಕರ ಸಮೇತ ಗೋವಾಕ್ಕೆ ದುಡಿಯಲು ವಲಸೆ ಹೋದರು.

ತಂದೆ, ತಾಯಿ ಜತೆ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ತಂದೆ ಅಕಾಲಮೃತ್ಯುವಿಗೆ ತುತ್ತಾದರು. ಇದೇ ಕೊರಗಿನಲ್ಲಿಯೇ ತಾಯಿಯೂ ತೀರಿಕೊಂಡರು. ಬಂಧುಗಳ ಆಶ್ರಯದಲ್ಲಿ ಬೆಳೆದ ಅವರು 16ನೇ ವಯಸ್ಸಿಗೆ ಗೋವಾದ ಸಮುದ್ರ ತೀರಗಳಲ್ಲಿ ಕಡಲೆಕಾಯಿ ವ್ಯಾಪಾರ ಮಾಡಿಕೊಂಡು 9ನೇ ತರಗತಿವರೆಗೆ ಶಿಕ್ಷಣ ಪೂರೈಸಿದರು.

ಬ್ರಿಟಿಷ್ ದಂಪತಿ ಕಣ್ಣಿಗೆ ಬಿದ್ದ ಬಾಲಕ: ಗೋಪಾಲ ಉತ್ಸಾಹ ಮತ್ತು ಚುರುಕುತನದಿಂದ ಪ್ರವಾಸಿಗಳ ಮನಗೆದ್ದಿದ್ದರು. ಇಂಗ್ಲೆಂಡ್‌ನಿಂದ ಪ್ರತಿವರ್ಷ ಭಾರತ ಪ್ರವಾಸಕ್ಕೆ ಬರುತ್ತಿದ್ದ ಬ್ರಿಟ್ಸ್ ಕೊರೊಲ್ ಥಾಮಸ್ ಮತ್ತು ಕೊಲಿನ್ ಹ್ಯಾನ್ಸನ್ ಎನ್ನುವ ಬ್ರಿಟಿಷ್ ದಂಪತಿ ತಮ್ಮ ಸಹವರ್ತಿ ಲಿಂಡಾ ಹ್ಯಾನ್ಸನ್ ಅವರೊಂದಿಗೆ ಬಂದಾಗ ಬಾಲಕ ಕಣ್ಣಿಗೆ ಬಿದ್ದ.

ಗೋವಾದ ಬೆತೆಲ್ ಬಾತಿ ಬೀಚ್‌ನಲ್ಲಿ ಉರಿಬಿಸಿಲು ಲೆಕ್ಕಿಸದೇ ಕಡಲೆ ವ್ಯಾಪಾರ ಮಾಡುತ್ತಿದ್ದ ಬಾಲಕನ ಮುಗ್ಧತೆ, ಮಾತು ಬ್ರಿಟಿಷ್ ದಂಪತಿಯ ಗಮನಸೆಳೆಯಿತು. ಆತ ವಾಸಿಸುವ ಗುಡಿಸಲಿಗೆ ಭೇಟಿ ನೀಡಿ ಹೊಸಬಟ್ಟೆ, ಕಡಲೆ ಮಾರುವ ಬುಟ್ಟಿ, ಗಡಿಯಾರ ಕೊಡಿಸಿದರು. ಪ್ರತಿವರ್ಷ ಬಂದಾಗ ಬಾಲಕನನ್ನು ಮತ್ತು ಅವರ ಮನೆಯವರನ್ನು ಭೇಟಿ ಮಾಡಿ ಆತನಿಗೆ ಉತ್ತಮ ಶಿಕ್ಷಣ ಕೊಡಿಸುವುದಾಗಿ ಭರವಸೆ ನೀಡಿದರಲ್ಲದೆ ತಮ್ಮ ಜತೆ ಕಳುಹಿಸಿದರೆ ಪಾಲನೆ ಮಾಡುವುದಾಗಿ ಭರವಸೆ ನೀಡಿದರು.

ಆ ದಂಪತಿ ವಿಶ್ವಾಸ ಕಂಡು ಗೋಪಾಲನ ಸಹೋದರರು ಅವರೊಂದಿಗೆ ತೆರಳಲು ಒಪ್ಪಿಗೆ ನೀಡಿದರು. ಗೋಪಾಲ ತಮ್ಮ 19ನೇ ವಯಸ್ಸಿನಲ್ಲಿ ಬ್ರಿಟನ್ ಸೇರಿದರು. ಅಲ್ಲಿ ಬ್ರಿಟ್ಸ್ ಕೊರೊಲ್ ಥಾಮಸ್ ದಂಪತಿ ಕ್ರೀಡಾ ತರಬೇತಿ ಕೊಡಿಸಿದರು. ಗೋಪಾಲ ಅವರ ಬುದ್ಧಿಮತ್ತೆ, ಕುಶಲತೆ ಕಂಡು ಬ್ರಿಟಿಷ್ ಸೈನ್ಯಕ್ಕೆ ಸೇರಿಸಲು ತರಬೇತಿ ನೀಡಿದರು. ಅದರಂತೆ ಸೈನ್ಯಕ್ಕೆ ಆಯ್ಕೆಯಾಗುವ ಮೂಲಕ ಹೆತ್ತವರಿಗೂ, ಗ್ರಾಮಕ್ಕೂ, ತನ್ನನ್ನು ಪೋಷಿಸಿದ ಪಾಲಕರಿಗೂ ಕೀರ್ತಿ ತಂದಿದ್ದಾರೆ.

ಸೈನ್ಯಕ್ಕೆ ಸೇರಿ ಅಫ್ಗಾನಿಸ್ತಾನ, ಕೆನ್ಯಾ ಮತ್ತು ಜರ್ಮನಿಯಲ್ಲೂ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಹುಟ್ಟೂರಿನೊಂದಿಗೆ ಸಂಪರ್ಕ ಇಟ್ಟುಕೊಂಡು ಪ್ರತಿ ಮೂರು ವರ್ಷಗಳಿಗೊಮ್ಮೆ ಭೇಟಿ ನೀಡಿ ಸಹೋದರ, ಸಹೋದರಿಯರ ಮದುವೆ ಮಾಡಿ, ಮನೆ ಕಟ್ಟಿಸಿ ಕೊಡುವ ಮೂಲಕ ಸಾರ್ಥಕತೆ ಮೆರೆದಿದ್ದಾರೆ.

ತಂದೆ-ತಾಯಿ ನಿಧನರಾದ ಬಳಿಕ ಬೇರೆ ದಾರಿ ಕಾಣದೇ ಕಡಲೆಕಾಯಿ ಮಾರಿಕೊಂಡು ಜೀವನ ಮಾಡುತ್ತಿದ್ದ ಗೋಪಿ ಈಗ ಬ್ರಿಟಿಷ್ ಸೈನ್ಯದಲ್ಲಿ ಸೇವೆ ಮಾಡುತ್ತಿದ್ದಾನೆ. ಆತ ನಮಗೆ ಮಾದರಿ

ಸಾವಿತ್ರಿ ನಾಗೇಶ್ ಸಿಂಧೆ, ಗೋಪಾಲ ಅವರ ಚಿಕ್ಕಮ್ಮ

ಬಡತನ, ದಾರಿದ್ರ್ಯ ಮೆಟ್ಟಿ ನಿಂತು ತನ್ನತನ ನಿರೂಪಿಸಿದ್ದಾನೆ. ಬ್ರಿಟಿಷರು ಆತನ ಗುಣ- ಸ್ವಭಾವ ಕಂಡು ಒಬ್ಬ ಉತ್ತಮ ನಾಗರಿಕನನ್ನಾಗಿ ಬೆಳೆಸಿದ್ದಾರೆ. ಆತ ನಮ್ಮೂರಿನ ಹುಡುಗನೆಂಬ ಹೆಮ್ಮೆ ನಮಗಿದೆ

ರಾಜು ಪಾಟೀಲ, ಗ್ರಾಮದ ಮುಖಂಡ

ಬಾಲ್ಯದಲ್ಲಿ ಅನುಭವಿಸಿದ ಕಷ್ಟ ಜೀವನದಲ್ಲಿ ಸಾಧನೆ ಮಾಡಲು ಪ್ರೇರಣೆಯಾಯಿತು. ಸದಾ ಉನ್ನತ ಕನಸು ಕಾಣುತ್ತಿದ್ದ ನನಗೆ ಬ್ರಿಟಿಷ್ ದಂಪತಿ ತಮ್ಮ ಮಕ್ಕಳಂತೆ ಸಾಕಿ ಜೀವನವನ್ನು ನೀಡಿದ್ದಾರೆ. ಅವರ ಋಣ ಮರೆಯಲು ಸಾಧ್ಯವಿಲ್ಲ

ಗೋಪಾಲ ಯಲ್ಲಪ್ಪ ವಾಕೋಡೆ, ಸೈನ್ಯ ಸೇರಿದ ಅನಿವಾಸಿ ಭಾರತೀಯ

ಸಂಕ್ಷಿಪ್ತ ಸುದ್ದಿ

‘ಪ್ರಯಾಣ ದರ ಹೆಚ್ಚಿಸುವುದಿಲ್ಲ’

ಅಥಣಿ (ಬೆಳಗಾವಿ ಜಿಲ್ಲೆ): ‘ಸರ್ಕಾರಿ ಸಾರಿಗೆ ಸಂಸ್ಥೆಗಳ ಬಸ್‌ಗಳ ಪ್ರಯಾಣ ದರ ಹೆಚ್ಚಳ ಮಾಡುವುದಿಲ್ಲ’ ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಸ್ಪಷ್ಟಪಡಿಸಿದರು.

ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ‘ಕೋವಿಡ್ ಪರಿಸ್ಥಿತಿಯಿಂದಾಗಿ ಸಾರಿಗೆ ಸಂಸ್ಥೆಗಳಿಗೆ ಬಹಳ ನಷ್ಟವಾಗಿದೆ. ಡೀಸೆಲ್ ಬೆಲೆಯೂ ಏರಿಕೆಯಾಗಿದೆ. ಆದಾಗ್ಯೂ ಜನಸಾಮಾನ್ಯರ ಮೇಲೆ ಹೊರೆ ಹಾಕಲು ಬಯಸುವುದಿಲ್ಲ’ ಎಂದರು.

ಹಾಸ್ಟೆಲ್ ಶಾಲಾ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್

ಹೊಳಲ್ಕೆರೆ: ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಸತಿ ನಿಲಯಗಳ ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್ ವಿತರಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಶ್ರೀರಾಮುಲು ಭರವಸೆ ನೀಡಿದರು.

ತಾಲ್ಲೂಕಿನ ಬಸಾಪುರ ಗೇಟ್‌ನಲ್ಲಿ ನಿರ್ಮಿಸಿರುವ ಇಂದಿರಾ ಗಾಂಧಿ ವಸತಿ‍ಶಾಲೆಯನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಕೋವಿಡ್‌ನಿಂದ ಶಾಲೆಗಳು ಮುಚ್ಚಿದ್ದು, ಆನ್‌ಲೈನ್ ಮೂಲಕ ಶಿಕ್ಷಣ ನೀಡಲಾಗುತ್ತಿದೆ. ಬಡ ವಿದ್ಯಾರ್ಥಿಗಳು ಸ್ಮಾರ್ಟ್ ಫೋನ್ ಖರೀದಿಸಲು ಆಗುವುದಿಲ್ಲ. ಅವರ ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂದು ಲ್ಯಾಪ್‌ಟಾಪ್ ವಿತರಿಸುವ ಗುರಿ ಇದೆ. ಮುಂದೆ ತಂತ್ರಜ್ಞಾನ ಬಳಸಿ ಶಿಕ್ಷಣ ನೀಡುವುದರಿಂದ ಲ್ಯಾಪ್‌ಟಾಪ್ ಅಗತ್ಯವಾಗಿ ಬೇಕಾಗುತ್ತದೆ. ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಹಣದಲ್ಲಿ ರಸ್ತೆ, ಸಮುದಾಯಭವನ ನಿರ್ಮಿಸುವ ಬದಲು ಶಿಕ್ಷಣಕ್ಕೆ ಖರ್ಚು ಮಾಡಬೇಕು’ ಎಂದರು.

ಶಿಕ್ಷಕರ ಖಾಲಿ ಹುದ್ದೆ: ಅಪ್‌ಲೋಡ್‌ಗೆ ಸೂಚನೆ

ಬೆಂಗಳೂರು: ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಶೀಘ್ರದಲ್ಲಿ ನಡೆಸಲು, ಖಾಲಿ ಇರುವ ಹುದ್ದೆಗಳ ಮಾಹಿತಿಗಳ ಅಪ್‌ಡೇಟ್ ತಕ್ಷಣ ಪೂರ್ಣಗೊಳಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತ ವಿ. ಅನ್ಬುಕುಮಾರ್ ಸೂಚಿಸಿದ್ದಾರೆ.

ವರ್ಗಾವಣೆ ವಿಷಯವಾಗಿ ಅಧಿಕಾರಿಗಳ ಜೊತೆ ಸೋಮವಾರ ವಿಡಿಯೊ ಸಂವಾದ ನಡೆಸಿದ ಅವರು, ‘ವರ್ಗಾವಣೆ ಅಧಿಸೂಚನೆ ಮತ್ತು ವೇಳಾಪಟ್ಟಿಯನ್ನು ಈಗಾಗಲೇ ಹೊರಡಿಸಲಾಗಿದೆ. ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಜೂನ್ 30 ಕೊನೆಯ ದಿನವೆಂದು ನಿಗದಿಪಡಿಸಲಾಗಿತ್ತು. ಆದರೆ, ಶೇ 50ರಷ್ಟು ಖಾಲಿ ಹುದ್ದೆಗಳ ಅಪ್‌ಡೇಟ್ ಇನ್ನೂ ಆಗಿಲ್ಲ. ಹೀಗಾಗಿ ವರ್ಗಾವಣೆ ವಿಳಂಬವಾಗಲಿದೆ. ಜುಲೈ 10ರೊಳಗೆ ಸಂಪೂರ್ಣ ಮಾಹಿತಿ ಅಪ್‌ಲೋಡ್ ಮಾಡಬೇಕು’ ಎಂದು ಅವರು ನಿರ್ದೇಶನ ನೀಡಿದ್ದಾರೆ.

‘ಶಾಲಾ ಮಕ್ಕಳು ದಾಖಲಾತಿ ಪಡೆದಿರುವ ಬಗ್ಗೆ ಎಸ್‌ಎಟಿಎಸ್ ತಂತ್ರಾಂಶದಲ್ಲಿ ಕಾಲಕಾಲಕ್ಕೆ ಮಾಹಿತಿ ಅಪ್‌ಲೋಡ್ ಮಾಡಬೇಕು. ಏಕೆಂದರೆ, ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಎಲ್ಲವೂ ಮಕ್ಕಳ ದಾಖಲಾತಿಯ ಅಂಕಿ-ಅಂಶಗಳ ಆಧಾರದ ಮೇಲೆ ನಿರ್ಧಾರವಾಗಿರುತ್ತದೆ. ಇದು ವಿಳಂಬ ಮಾಡಿದರೆ, ಬೇರೆ ಎಲ್ಲವೂ ವಿಳಂಬವಾಗಲಿದೆ. ಹೀಗಾಗಿ, ಸಾಧ್ಯವಾದಷ್ಟು ಬೇಗ ಅಪ್‌ಲೋಡ್ ಮಾಡಬೇಕು’ ಎಂದೂ ತಿಳಿಸಿದ್ದಾರೆ.

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ, ಬೆಂಗಳೂರು – 560 059.

ಸಂಖ್ಯೆ: ಡಿಪಿಎಸ್/07/ಸಿಎಸ್‌ಟಿ(ಜಿ) 2021–22 ದಿನಾಂಕ:03.07.2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಸರ್ಕಾರಿ ವಿಭಾಗೀಯ ಮುದ್ರಣಾಲಯ, ಕಲಬುರಗಿ ಇಲ್ಲಿನ ಉತ್ಪಾದನಾ ವಿಭಾಗಗಳಿಗೆ ಅಗತ್ಯವಿರುವ ಸಹಾಯಕ ಬೈಂಡರ್‌ಗಳ ಸೇವೆಗಳನ್ನು ಗುತ್ತಿಗೆ ಆಧಾರದ ಮೇಲೆ ಮಾನವ ಶಕ್ತಿ ಸೇವೆಯನ್ನು ಒದಗಿಸಲು ಅರ್ಹ ಸಂಸ್ಥೆಗಳಿಂದ ಕೆ.ಟಿ.ಪಿ.ಪಿ. ನಿಯಮಗಳಡಿ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 19.27 ಲಕ್ಷಗಳಾಗಿದ್ದು** ಇಎಂಡಿ ಮೊತ್ತ ಪಾವತಿಯಿಂದ ವಿನಾಯ್ತಿ ನೀಡಲಾಗಿದೆ. ಟೆಂಡರು ಸಲ್ಲಿಸಲು ಕೊನೆಯ **ದಿನಾಂಕ: 22.07.2021.** ವಿವರವಾದ ಟೆಂಡರ್ ದಸ್ತಾವೇಜನ್ನು website: https://eproc.karanataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ

ವಾಸಾಸಂಇ/ಬೆಂ.ನ/ಜಿಎ/742/2021–22 ಸಹಿ/– ನಿರ್ದೇಶಕರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಬಿರುಕು: ಎಚ್‌ಡಿಕೆ ವ್ಯಂಗ್ಯ • ಇದು, ಮಹಿಳೆಯರ ಬಗ್ಗೆ ಅವರ ಮನಸ್ಥಿತಿ –ಸುಮಲತಾ

‘ಅಣೆಕಟ್ಟೆಗೆ ಅವರನ್ನೇ ಅಡ್ಡ ಮಲಗಿಸಿದ್ರೆ ಸರಿ ಆಗುತ್ತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷ್ಣರಾಜಸಾಗರ ಅಣೆಕಟ್ಟು ಬಿರುಕು ಬಿಟ್ಟಿದ್ದರೆ ಅವರನ್ನು (ಸಂಸದೆ ಸುಮಲತಾ) ಅಡ್ಡ ಮಲಗಿಸಿ, ಸರಿ ಹೋಗುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ನೀಡಿರುವ ವ್ಯಂಗ್ಯದ ಹೇಳಿಕೆಗೆ ಮಂಡ್ಯದ ಸಂಸದೆ ಸುಮಲತಾ ಅಂಬರೀಷ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ವಿಚಾರವಾಗಿ ಇಬ್ಬರ ಮಧ್ಯೆ ಸೋಮವಾರ ಇಡೀ ದಿನ ವಾಕ್ಸಮರ ನಡೆದಿದೆ. ಕೆಆರ್‌ಎಸ್ ಸುತ್ತಮುತ್ತ ಅಕ್ರಮ ಗಣಿಗಾರಿಕೆ ಬಗ್ಗೆ ಹೇಳಿಕೆ ನೀಡಿದ್ದ ಸುಮಲತಾ ಅವರು ಗಣಿಗಾರಿಕೆಯಿಂದ ಅಣೆಕಟ್ಟೆಗೆ ಹಾನಿಯಾಗುತ್ತದೆ ಎಂದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಎಚ್.ಡಿ.ಕುಮಾರಸ್ವಾಮಿ, ‘ಕೆಆರ್‌ಎಸ್ ಅಣೆಕಟ್ಟೆಯನ್ನು ಏನೋ ಇವ್ರೆ ರಕ್ಷಣೆ ಮಾಡ್ತಾರಂತೆ. ಬಹುಶಃ ಇವರನ್ನೇ ಡ್ಯಾಮ್ ಬಾಗಿಲಿಗೆ ಅಡ್ಡ ಮಲಗಿಸಿ ಬಿಟ್ರೆ ಅಣೆಕಟ್ಟೆ ಬಿಗಿಯಾಗಿ ಬಿಡುತ್ತದೆ. ನೀರು ಹೋಗದ ರೀತಿ ಬಾಗಿಲಿಗೆ ಇವರನ್ನೇ ಮಲಗಿಸಿ ಬಿಟ್ರೆ ಎಲ್ಲ ಸರಿ ಆಗುತ್ತದೆ’ ಎಂದು ಕುಹಕವಾಡಿದ್ದರು.

‘ಮಾಹಿತಿ ಇಟ್ಟುಕೊಳ್ಳದೇ ಕೆಲಸ ಮಾಡ್ತಾರೆ. ಯಾರದ್ದೋ ಮೇಲಿನ ವೈಯಕ್ತಿಕ ದ್ವೇಷಕ್ಕೆ ಹೇಳಿಕೆ ಕೊಡುವುದು ಬಹಳ ದಿನ ನಡೆಯದು.

ಕುಮಾರಸ್ವಾಮಿ

ಸುಮಲತಾ

> **‘ಯಾರ ಬಗ್ಗೆಯಾದರೂ, ಏಕವಚನದಲ್ಲಿ ಆ ರೀತಿ ಮಾತನಾಡೋದು ಶೋಭೆ ತರುವುದಿಲ್ಲ.**
> **ನಾರಾಯಣಗೌಡ,** ಯುವಜನ ಮತ್ತು ಕ್ರೀಡಾ ಸಬಲೀಕರಣ ಸಚಿವ

ಅನುಕಂಪದ ಮೇಲೆ ಚುನಾವಣೆ ಗೆದ್ದು ಬಂದಿದ್ದಾರೆ. ಜನರ ಋಣ ತೀರಿಸುವ ಕೆಲಸ ಮಾಡಲಿ. ಪದೇ ಪದೇ ಇಂಥ ಅವಕಾಶ ಸಿಗುವುದಿಲ್ಲ. ಮುಂದೆ ಜನ ಪಾಠ ಕಲಿಸುತ್ತಾರೆ’ ಎಂದು ಕುಮಾರಸ್ವಾಮಿ ಹೇಳಿದ್ದರು.

‘ತುಚ್ಛ ಹೇಳಿಕೆ’: ಇದರಿಂದ ಆಕ್ರೋಶಗೊಂಡ ಸುಮಲತಾ, ‘ಈ ರೀತಿಯ ತುಚ್ಛ ಹೇಳಿಕೆಯು, ಮಹಿಳೆಯರ ಬಗ್ಗೆ ಅವರಿಗಿರುವ ಮನಸ್ಥಿತಿ ಏನೆಂಬುದನ್ನು ತೋರಿಸುತ್ತದೆ. ಮಹಿಳೆಯರ ಬಗ್ಗೆ ಕೀಳಾಗಿ ಮಾತನಾಡುವುದನ್ನು ಅವರು ಇನ್ನೂ ಬಿಟ್ಟಿಲ್ಲ. ಕಳೆದ ಚುನಾವಣೆಯಲ್ಲಿ ಆದ ಪಾಠದಿಂದ ಏನೂ ಕಲಿತಂತೆ ಕಾಣುತ್ತಿಲ್ಲ’ ಎಂದು ಕಿಡಿಕಾರಿದ್ದರು.

> **ಎಚ್.ಡಿ.ಕುಮಾರಸ್ವಾಮಿ ಅವರು ಸಂಸದೆ ಸುಮಲತಾ ಬಗ್ಗೆ ಲಘುವಾಗಿ ಮಾತನಾಡಿದ್ದು ಸರಿಯಲ್ಲ. ಮಹಿಳೆಯರ ಬಗ್ಗೆ ಗೌರವಯುತವಾಗಿ ಮಾತನಾಡಬೇಕು**
> **ಬಿ.ಸಿ.ಪಾಟೀಲ,** ಕೃಷಿ ಸಚಿವ

‘ನಾನು ಯಾರ ವಿರುದ್ಧವೂ ವೈಯಕ್ತಿಕ ದ್ವೇಷದ ಮಾತುಗಳನ್ನೂ ಆಡಿಲ್ಲ. ಕೆಆರ್‌ಎಸ್ ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಅದನ್ನು ರೈತರು ನನ್ನ ಗಮನಕ್ಕೆ ತಂದಿದ್ದರು. ಇದನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದೆ. ಖುದ್ದಾಗಿ ಗಣಿ ಸಚಿವ ಮುರುಗೇಶ್ ನಿರಾಣಿ ಅವರೇ ಅಕ್ರಮ ಗಣಿಗಾರಿಕೆ ನೋಡಿದ್ದಾರೆ. ಒಂದು ಅಕ್ರಮ ಗಣಿಗಾರಿಕೆಗೆ ₹100 ಕೋಟಿ ದಂಡ ಹಾಕಿದ್ದಾರೆ’ ಎಂದರು.

ಸಮಜಾಯಿಷಿ ನೀಡಿದ ಎಚ್‌ಡಿಕೆ: ಹೇಳಿಕೆ ವಿವಾದದ ರೂಪ ಪಡೆಯುತ್ತಿದ್ದಂತೆ ಸಮಜಾಯಿಷಿ ನೀಡಿದ ಕುಮಾರಸ್ವಾಮಿ, ‘ಅಣೆಕಟ್ಟೆಗೆ ಸುಮಲತಾರನ್ನು ಮಲಗಿಸಿ ಎಂದರೆ ಕಾವಲು ಇರಿಸಿ ಎಂಬ ಅರ್ಥದಲ್ಲಿ ಹೇಳಿದ್ದೆ. ಸಂಸದರು ತಮ್ಮ ಜವಾಬ್ದಾರಿ ಅರಿತುಕೊಳ್ಳಬೇಕು. ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದಾರೆ. ಹೋದಲ್ಲಿ ಬಂದಲ್ಲಿ ಒಂದೇ ವಿಚಾರ ಪ್ರಸ್ತಾಪಿಸುವುದು ಬೇಡ. ಅವರು ಏನು ಮಾಡಿದ್ದಾರೆ ಎಂಬುದನ್ನು ಮುಂದಿನ ಚುನಾವಣೆಯಲ್ಲಿ ದಾಖಲೆ ಸಮೇತ ಪ್ರಸ್ತಾಪಿಸುತ್ತೇನೆ’ ಎಂದಿದ್ದಾರೆ.

ಇದಕ್ಕೆ ಮತ್ತೆ ತಿರುಗೇಟು ನೀಡಿದ ಸುಮಲತಾ, ‘ಕುಮಾರಸ್ವಾಮಿ ಇವತ್ತೇ ಆಡಿಯೋ ಬಾಂಬ್, ವಿಡಿಯೊ ಬಾಂಬ್ ಬಿಡುಗಡೆ ಮಾಡಲಿ. ಜನ ನ್ಯೂಕ್ಲಿಯರ್ ಬಾಂಬ್ ಇಟ್ಟುಕೊಂಡಿದ್ದಾರೆ. ಜನ ನಿಮ್ಮನ್ನು ಬಿಡುವುದಿಲ್ಲ’ ಎಂದಿದ್ದಾರೆ.

‘ಕುಮಾರಸ್ವಾಮಿ ತಾವು ಹೇಳಿದ ಮಾತಿಗೆ ಮೊದಲಿಗೆ ಕ್ಷಮೆ ಯಾಚಿಸಬೇಕು. ಆ ಮೇಲೆ ಯಾವುದೇ ದಾಖಲೆ ಬಿಡುಗಡೆ ಮಾಡಲಿ’ ಎಂದು ಕುಟುಕಿದ್ದಾರೆ.

‘ಮಂಡ್ಯದಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಪ್ರಶ್ನೆ ಮಾಡಿದ್ದಕ್ಕೆ ಇದೆಲ್ಲ ನಡೆಯುತ್ತಿದೆ. ಲೋಕಸಭಾ ಚುನಾವಣೆಯ ಸೋಲಿನ ಹತಾಶೆ ಅವರನ್ನು ಕಾಡುತ್ತಿದೆ. ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸುಳ್ಳುಗಳನ್ನು ಹೆಣೆಯುತ್ತಿದ್ದಾರೆ, ಮೈಶುಗರ್ ಮತ್ತೆ ಆರಂಭವಾಗುವುದು ಅವರಿಗೆ ಬೇಕಿಲ್ಲ’ ಎಂದು ಸುಮಲತಾ ಹೇಳಿದರು.

ಸುದ್ದಿ 2 ನಿಮಿಷ

ನವೆಂಬರ್‌ನಲ್ಲಿ ಬೆಂಗಳೂರು ತಂತ್ರಜ್ಞಾನ ಶೃಂಗ: ಅಶ್ವತ್ಥನಾರಾಯಣ

ಬೆಂಗಳೂರು: ನವೆಂಬರ್ 17 ರಿಂದ 19ರವರೆಗೆ 2021ನೇ ಸಾಲಿನ ‘ಬೆಂಗಳೂರು ತಂತ್ರಜ್ಞಾನ ಶೃಂಗ’ ವರ್ಚುವಲ್ ರೂಪದಲ್ಲಿ ನಡೆಯಲಿದೆ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರಕಟಿಸಿದರು.

ತಂತ್ರಜ್ಞಾನ ಶೃಂಗದ ಸಿದ್ಧತೆ ಕುರಿತು ಸೋಮವಾರ ಪೂರ್ವಭಾವಿ ಸಭೆ ನಡೆಸಿದ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡುತ್ತಾ, ‘ಈ ಬಾರಿ ‘ಡ್ರೈವ್ ಇನ್ ದಿ ನೆಕ್ಸ್ಟ್’ ಎಂಬ ಘೋಷ ವಾಕ್ಯದಡಿ ಸಮ್ಮೇಳನ ನಡೆಯಲಿದೆ. ಕೋವಿಡ್ ಕಾರಣದಿಂದ ವರ್ಚುವಲ್, ಭೌತಿಕ ವೇದಿಕೆ ಒಳಗೊಂಡಂತೆ ಹೈಬ್ರಿಡ್ ಪದ್ಧತಿಯಲ್ಲಿ ಸಮ್ಮೇಳನ ನಡೆಯಲಿದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ವರ್ಚುವಲ್ ಆಗಿ ಸಮ್ಮೇಳನ ಉದ್ಘಾಟನೆಗೆ ಆಹ್ವಾನಿಸುವ ಚಿಂತನೆ ನಡೆದಿದೆ. ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನೂ ಸಮ್ಮೇಳನಕ್ಕೆ ಆಹ್ವಾನಿಸಲು ನಿರ್ಧರಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಮತ್ತು ಆರೋಗ್ಯ ಕ್ಷೇತ್ರದ ಮುಂಚೂಣಿ ಕಂಪನಿಗಳ ಮುಖ್ಯಸ್ಥರಿಗೂ ಆಹ್ವಾನ ನೀಡಲಾಗುವುದು ಎಂದರು.

ಎರಡನೇ ಹಂತದ ನಗರಗಳಿಗೆ ಆದ್ಯತೆ: ‘ಬ್ರ್ಯಾಂಡ್ ಬೆಂಗಳೂರು’ ಮಾದರಿಯಲ್ಲಿ ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ ನಗರಗಳಲ್ಲೂ ತಂತ್ರಜ್ಞಾನ ಶೃಂಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಈ ನಗರಗಳಲ್ಲಿ ಕಾರ್ಯಕ್ರಮಗಳು ನಡೆಯಲಿದ್ದು, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ರವಿಶಂಕರ್ ಪ್ರಸಾದ್, ಡಾ.ಹರ್ಷವರ್ಧನ್, ನಿತಿನ್ ಗಡ್ಕರಿ ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೂ ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಮಾಹಿತಿ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣ, ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಅಧ್ಯಕರೂ ಆದ ಮುಖ್ಯಮಂತ್ರಿಗಳ ಸಲಹೆಗಾರ ಪ್ರಶಾಂತ್ ಪ್ರಕಾಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ ಸಭೆಯಲ್ಲಿದ್ದರು.

ರಕ್ಷಾ ರಾಮಯ್ಯ ಯುವ ಕಾಂಗ್ರೆಸ್ ಅಧ್ಯಕ್ಷ

ನವದೆಹಲಿ: ಮಾಜಿ ಸಚಿವ ಎಂ.ಆರ್. ಸೀತಾರಾಮ್ ಅವರ ಪುತ್ರ ರಕ್ಷಾ ರಾಮಯ್ಯ ಅವರಿಗೆ 2022ರ ಜನವರಿ 31ರವರೆಗೆ ಯುವ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡಿ ಸೋಮವಾರ ಆದೇಶ ಹೊರಡಿಸಿರುವ ಪಕ್ಷದ ರಾಷ್ಟ್ರೀಯ ಯುವ ಘಟಕ, ಈ ಸಂಬಂಧ ಉಂಟಾಗಿದ್ದ ಗೊಂದಲಕ್ಕೆ ತೆರೆ ಎಳೆದಿದೆ.

ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಸೋಮವಾರ ಈ ಆದೇಶ ಹೊರಡಿಸಿದ್ದಾರೆ.

ಇತ್ತೀಚೆಗೆ ನಡೆಸಲಾದ ಸಂಧಾನ ಸಭೆಗಳಲ್ಲಿ ಕೈಗೊಂಡ ನಿರ್ಣಯದ ಪ್ರಕಾರ ರಕ್ಷಾ ಅವರು ಜನವರಿ 31ಕ್ಕೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡಬೇಕಿದೆ.

ಹಲ್ಲೆಯಂತಹ ಗಂಭೀರ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಮೊಹಮ್ಮದ್ ನಲಪಾಡ್‌ಗೆ ಚುನಾವಣೆಯಲ್ಲಿ ಅಧಿಕ ಮತ ಲಭಿಸಿದ್ದರೂ ಅಧ್ಯಕ್ಷ ಸ್ಥಾನ ದೊರೆತಿರಲಿಲ್ಲ. ಮತ ಗಳಿಕೆಯಲ್ಲಿ 2ನೇ ಸ್ಥಾನ ಗಳಿಸಿದ್ದ ರಕ್ಷಾ ರಾಮಯ್ಯ ಅವರಿಗೇ ಅಧ್ಯಕ್ಷ ಸ್ಥಾನವನ್ನು ನೀಡಲಾಗಿತ್ತು.

‘ಸ್ಪರ್ಧೆಗೆ ಅವಕಾಶ ನೀಡಿದ್ದರಿಂದ ಹೆಚ್ಚು ಮತ ಪಡೆದಿದ್ದು, ನನ್ನ ಆಯ್ಕೆಯನ್ನು ಮಾನ್ಯ ಮಾಡಬೇಕು’ ಎಂದು ರಾಷ್ಟ್ರೀಯ ಘಟಕಕ್ಕೆ ನಲಪಾಡ್ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಯುವ ಕಾಂಗ್ರೆಸ್ ಉಸ್ತುವಾರಿ ಕೃಷ್ಣ ಅಲ್ಲವಾರು ನೇತೃತ್ವದಲ್ಲಿ ಜೂನ್ 21ರಿಂದ ಮೂರು ದಿನಗಳ ಕಾಲ ದೆಹಲಿ ಹಾಗೂ ಬೆಂಗಳೂರಿನಲ್ಲಿ ಸಂಧಾನ ಸಭೆ ಏರ್ಪಡಿಸಲಾಗಿತ್ತು.

ರಕ್ಷಾ ಅವರು ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ನಿರಾಕರಿಸಿದ್ದರಿಂದ ಗೊಂದಲ ಮುಂದುವರಿದಿತ್ತು. ಆದರೆ, ರಾಷ್ಟ್ರೀಯ ಘಟಕವು ಮಧ್ಯಸ್ಥಿಕೆ ವಹಿಸುವ ಮೂಲಕ ಸಂಧಾನ ಏರ್ಪಡಿಸಿ ಅಂತಿಮ ನಿರ್ಧಾರ ಪ್ರಕಟಿಸಿದೆ.

ಯತ್ನಾಳ ಹೇಳಿಕೆಗೆ ಸುಲಫಲಶ್ರೀ ಆಕ್ರೋಶ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ‘ದಕ್ಷಿಣೆ ತೆಗೆದುಕೊಂಡು ಕೆಲ ಸ್ವಾಮೀಜಿಗಳು ಯಡಿಯೂರಪ್ಪ ಪರ ಬ್ಯಾಟಿಂಗ್ ಮಾಡುತ್ತಿದ್ದಾರೆ’ ಎಂಬ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆಗೆ ಸುಲಫಲ ಮಠದ ಡಾ. ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಹಣದ ಆಸೆಗಾಗಿ ಯಡಿಯೂರಪ್ಪ ಪರ ಮಾತನಾಡಿಲ್ಲ. ನಾವು ಯಾರ ಮನೆಗೂ ಹೋಗಿ ಹಣಕ್ಕಾಗಿ ಬಾಗಿಲು ತಟ್ಟಿಲ್ಲ, ತಟ್ಟುವುದೂ ಇಲ್ಲ’ ಎಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹೇಳಿದರು.

‘ಸ್ವಾಮೀಜಿಗಳ ಬಗ್ಗೆ ಮಾತನಾಡುವಾಗ ರಾಜಕಾರಣಿಗಳು ಎಚ್ಚರಿಕೆಯಿಂದ ಇರಬೇಕು. ಯತ್ನಾಳ ಅವರು ಧರ್ಮದಲ್ಲಿ ರಾಜಕೀಯ ತರುತ್ತಿದ್ದಾರೆ, ನಾವು ರಾಜಕೀಯದಲ್ಲಿ ಧರ್ಮ ಸೇರಿಸುತ್ತಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಮುಂದೆ ನಾವು ಚುನಾವಣೆಗೆ ಕೂಡಾ ನಿಲ್ಲಬಹುದು. ಸ್ವಾಮಿಗಳನ್ನು ವಿನಾಕಾರಣ ರೊಚ್ಚಿಗೇಳಿಸಬೇಡಿ’ ಎಂದು ಎಚ್ಚರಿಕೆ ನೀಡಿದರು.

‘ಸಾವಿರಾರು ವರ್ಷಗಳಿಂದ ಸರ್ಕಾರ ಮಾಡದ ಕೆಲಸವನ್ನು ಮಠಗಳು ಮಾಡುತ್ತಿವೆ. ಯಡಿಯೂರಪ್ಪ 40 ವರ್ಷ ಶ್ರಮಪಟ್ಟು ಬಿಜೆಪಿ ಕಟ್ಟಿದ್ದಾರೆ. ಅವರಿಗೆ ಇನ್ನೆರಡು ವರ್ಷ ಸಿ.ಎಂ. ಆಗಿ ಇರಬೇಕು ಅಂತ ಹೇಳಿದ್ದೇವೆ. ಒಮ್ಮೆ ಲಿಂಗಾಯತರಿಗೆ ಸಿ.ಎಂ. ಸ್ಥಾನ ತಪ್ಪಿದರೆ ಮತ್ತೆ ಮೂವತ್ತು ವರ್ಷ ಆ ಸ್ಥಾನ ಸಿಗುವುದಿಲ್ಲ’ ಎಂದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಗುಡುಗು–ಸ್ವಾಮೀಜಿಗಳ ವಿರುದ್ಧ ವಾಗ್ದಾಳಿ

‘ಬಿಎಸ್‌ವೈ ಬದಲಾಯಿಸದಿದ್ದರೆ ಬಿಜೆಪಿಗೆ ಉಳಿಗಾಲವಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಿಸದಿದ್ದರೆ ರಾಜ್ಯದಲ್ಲಿ ಪಕ್ಷಕ್ಕೆ ಉಳಿಗಾಲವಿರಲ್ಲ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೋಮವಾರ ಇಲ್ಲಿ ಗುಡುಗಿದರು.

ಬಸನಗೌಡ ಪಾಟೀಲ ಯತ್ನಾಳ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ. ಅವರ ಆಡಳಿತದ ವಿರುದ್ಧ ಗಂಭೀರ ಆಪಾದನೆ ಕೇಳಿಬಂದಿವೆ. ಹೈಕಮಾಂಡ್ ಎಲ್ಲವನ್ನೂ ಪರಿಶೀಲಿಸುತ್ತಿದೆ. ಶೀಘ್ರದಲ್ಲೇ ಬದಲಾವಣೆ ನಿಶ್ಚಿತ’ ಎಂದರು.

‘ಮಹಾಭಾರತದಲ್ಲಿ ಕೌರವರಿಗೆ ಭೀಷ್ಮ ದ್ರೋಣಾಚಾರ್ಯರ ಬೆಂಬಲ ಸಿಕ್ಕಿದಂತೆ ನಮ್ಮಲ್ಲೂ ಈ ಲೂಟಿಕೋರರಿಗೆ ಕೆಲವರ ಬೆಂಬಲವಿದೆ. ಕೊನೆಗೆ ಧರ್ಮವೇ ಗೆಲ್ಲಲಿದೆ. ರಾಜ್ಯವನ್ನು ಲೂಟಿ ಮಾಡುತ್ತಿರುವ ದುಷ್ಟರು, ಭ್ರಷ್ಟರನ್ನು ಸಂಹರಿಸು ತಾಯಿ ಎಂದು ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸಿಕೊಂಡಿರುವೆ’ ಎಂದು ತಿಳಿಸಿದರು.

> **ರಾಜ್ಯದ ಜನರಿಗೆ ಕೋವಿಡ್ ಲಸಿಕೆಯ ಎರಡು ಡೋಸ್ ನೀಡುವ ಕಾರ್ಯ ಪೂರ್ಣಗೊಳ್ಳುವ ವರೆಗೆ ಜಿ.ಪಂ ಹಾಗೂ ತಾ.ಪಂ ಚುನಾವಣೆ ನಡೆಸುವುದು ಬೇಡ**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

‘ಲೂಟಿ ನಡೆಯುತ್ತಿದ್ದರೂ ವಿರೋಧಪಕ್ಷದವರು ತುಟಿ ಬಿಚ್ಚುತ್ತಿಲ್ಲ. ತಮ್ಮ ಪಾವಿತ್ರ್ಯವನ್ನೇ ಕಳೆದುಕೊಂಡಿದ್ದಾರೆ. ಕೆಲವರು ಲೂಟಿಕೋರರ ಬ್ಯುಸಿನೆಸ್ ಪಾರ್ಟನರ್‌ಗಳಾಗಿದ್ದಾರೆ’ ಎಂದು ಆರೋಪಿಸಿದರು.

ಪುತ್ರನಿಗೆ ನಾಯಕತ್ವ– ನಾಶ: ‘ಲಿಂಗಾಯತರಲ್ಲಿ ಪರ್ಯಾಯ ನಾಯಕರು ಅನೇಕರಿದ್ದಾರೆ. ಆದರೆ, ತಮ್ಮ ಪುತ್ರನ ರಾಜಕೀಯಕ್ಕಾಗಿ ಯಡಿಯೂರಪ್ಪ, ಬಿಜೆಪಿಗೆ ಈ ನಾಯಕತ್ವವನ್ನೇ ನಾಶಗೊಳಿಸುತ್ತಿದ್ದಾರೆ’ ಎಂದು ಕಿಡಿಕಾರಿದರು.

ಸ್ವಾಮೀಜಿಗಳ ವಿರುದ್ಧ ವಾಗ್ದಾಳಿ: ‘ಕೆಲ ಮಠಾಧೀಶರು ದಕ್ಷಿಣೆ ಕಾಸಿನ ಆಸೆಗೆ ಬಿದ್ದು ಯಡಿಯೂರಪ್ಪ ಪರ ಮಾತನಾಡುತ್ತಿದ್ದಾರೆ. ಮಠಾಧೀಶರ ಕೆಲಸ ಏನು? ಮತಾಂತರ ತಡೆಯಲಿ, ಲವ್ ಜಿಹಾದ್ ತಡೆಗಟ್ಟಲಿ, ಗೋಶಾಲೆ ತೆರೆಯಲಿ. ಅದನ್ನು ಬಿಟ್ಟು ಭ್ರಷ್ಟರನ್ನು ಬೆಂಬಲಿಸಿ ಬೀದಿಗಿಳಿಯುತ್ತೇವೆ ಎನ್ನುವುದು ಸರಿಯೇ’ ಎಂದು ಪ್ರಶ್ನಿಸಿದ ಅವರು, ಮುಖ್ಯಮಂತ್ರಿ ಬೆಂಬಲಿಸುತ್ತಿರುವ ಸ್ವಾಮೀಜಿಗಳ ವಿರುದ್ಧವೂ ವಾಗ್ದಾಳಿ ನಡೆಸಿದರು.

‘ಯಡಿಯೂರಪ್ಪ ಲಿಂಗಾಯತರ ನಾಯಕತ್ವವನ್ನಷ್ಟೇ ನಾಶ ಮಾಡಿಲ್ಲ; ವಾಲ್ಮೀಕಿ, ಕುರುಬರ ನಾಯಕತ್ವವನ್ನೂ ಹಾಳು ಮಾಡಿದ್ದಾರೆ. ಶ್ರೀರಾಮುಲು ಆಪ್ತ ಸಹಾಯಕನನ್ನು ಬಂಧಿಸಿದ್ದರ ಹಿಂದೆ ವಿಜಯೇಂದ್ರನ ಯಾವ ಮರ್ಮವಿದೆ? ಸಿಸಿಬಿ ಪೊಲೀಸರು ಮುಖ್ಯಮಂತ್ರಿಯ ಅಧಿಕೃತ ನಿವಾಸ ‘ಕಾವೇರಿ’ ಹಿಂದಿರುವ ಗೆಸ್ಟ್‌ಹೌಸ್ ಮೇಲೆ ರೇಡ್ ಮಾಡಲಿ. ಅಲ್ಲಿಯೇ ಕೋಟಿ ಕೋಟಿ ಡೀಲ್ ನಡೆಯೋದು’ ಎಂದು ಆಪಾದಿಸಿದರು.

ಸುತ್ತೂರು ಮಠಕ್ಕೆ ಹೋಗಲ್ಲ: ‘ನಾನು ಸುತ್ತೂರು ಮಠಕ್ಕೆ ಹೋಗಲ್ಲ. ಮಠ ಈಚೆಗೆ ರಾಜಕೀಯ ಶಕ್ತಿ ಕೇಂದ್ರ ಎನ್ನಿಸಿಕೊಳ್ಳುತ್ತಿದೆ. ಎಲ್ಲಾ ರಾಜಕೀಯ ನಾಯಕರು ಮಠಕ್ಕೆ ಹೋಗುವುದರಿಂದ ಜನರಲ್ಲಿ ಈ ಭಾವನೆ ಬಂದಿದೆ. ನಾನು ಎಂದೂ ಮಠವನ್ನು ರಾಜಕೀಯಕ್ಕೆ ಬಳಸಿಕೊಂಡಿಲ್ಲ’ ಎಂದು ಹೇಳಿದರು.

‘ವಯಸ್ಸಾಗಿದೆ; ಅಸಮಾಧಾನವಿದೆ’

‘ಮುಖ್ಯಮಂತ್ರಿ ಯಡಿಯೂರಪ್ಪ ನಮ್ಮೆಲ್ಲರ ಪ್ರಶ್ನಾತೀತ ನಾಯಕ. ಅವರಿಗೆ ವಯಸ್ಸಾಗಿದೆ. ಕೋವಿಡ್ ನಿರ್ವಹಣೆಯಲ್ಲಿ ಎಡವಿದ್ದಾರೆ. ಈ ಬಗ್ಗೆ ಜನರಿಗೆ ಅಸಮಾಧಾನವೂ ಇದೆ’ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

‘ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಅವರನ್ನು ಬಿಜೆಪಿಯ ವರಿಷ್ಠರು ಬದಲಿಸುವುದೇ ಆದರೆ; ಉತ್ತರ ಕರ್ನಾಟಕದ ಲಿಂಗಾಯತರಿಗೆ ಅವಕಾಶ ಕೊಡಬೇಕು’ ಎಂದು ಆಗ್ರಹಿಸಿದರು. ‘ಲಿಂಗಾಯತರಲ್ಲಿ ಪರ್ಯಾಯ ನಾಯಕರಿಲ್ಲ ಎಂಬುದು ಸರಿಯಲ್ಲ. ಮೋದಿ ಅವರ ಮನಸ್ಸು ಗೆದ್ದವರೊಬ್ಬರು ಮುಖ್ಯಮಂತ್ರಿಯಾಗಲಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಸವಜಯ ಮೃತ್ಯುಂಜಯ ಸ್ವಾಮೀಜಿ

ವಿಶ್ವನಾಥ್–ಯತ್ನಾಳ ಗೋಪ್ಯ ಮಾತುಕತೆ

ಒಂದನೇ ಪುಟದಿಂದ

‘ಯಡಿಯೂರಪ್ಪ ಅವರನ್ನು ಟೀಕಿಸುವವರು, ಅವರ ಕಾಲಿನ ದೂಳಿಗೂ ಸಮರಲ್ಲ’ ಎಂದು ಸಚಿವ ಎಸ್.ಟಿ.ಸೋಮಶೇಖರ್ ಹೇಳಿರುವುದಕ್ಕೆ ತಿರುಗೇಟು ನೀಡಿದ ವಿಶ್ವನಾಥ್, ‘ನೀನು ಬೇಕಾದರೆ ಯಡಿಯೂರಪ್ಪ ಅವರ ಪಾದ ನೆಕ್ಕು. ಅವರ ಮಗನ ಭ್ರಷ್ಟಾಚಾರ, ಅವ್ಯವಹಾರ ಕಣ್ಣಿಗೆ ಕಾಣುತ್ತಿಲ್ಲವೇ?’ ಎಂದು ಕಿಡಿಕಾರಿದರು.

‘ರಾಜ್ಯದಲ್ಲಿ ಬಿಜೆಪಿಗೆ 104 ಸ್ಥಾನ ಬಂದಿದ್ದು, 25 ಸಂಸದರು ಗೆದ್ದಿದ್ದು ಯಡಿಯೂರಪ್ಪ ಅವರಿಂದ ಅಲ್ಲ. ಇದು ಪ್ರಧಾನಿ ನರೇಂದ್ರ ಮೋದಿ ಅವರಿಂದ ಆಗಿದ್ದು’ ಎಂದರು.

ರೆಬೆಲ್ ಸಂಸದೆ: ಸಂಸದೆ ಸುಮಲತಾ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ನಡುವಿನ ವಾಕ್ಸಮರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ವಿಶ್ವನಾಥ್, ‘ನಿಮ್ಮ ಮಗನ ಸೋಲಿನ ಸೇಡನ್ನು ಈ ರೀತಿ ತೀರಿಸಿಕೊಳ್ಳುತ್ತಿದ್ದೀರಾ? ಸುಮಲತಾ ರೆಬೆಲ್ ಆ್ಯಕ್ಟರ್, ರೆಬೆಲ್ ಸಂಸದೆ. ಮಂಡ್ಯದ ಸೊಸೆ, ರೆಬೆಲ್ ಸ್ಟಾರ್ ಅಂಬರೀಶ್ ಧರ್ಮಪತ್ನಿ. ಇಂಥವರಿಗೆ ಅವಮಾನ ಮಾಡುತ್ತೀರಾ?’ ಎಂದು ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

‘ಎರಡು ಬಾರಿ ಮುಖ್ಯಮಂತ್ರಿ ಆದವರ ಬಾಯಲ್ಲಿ ಇಂತಹ ಮಾತು ಬರಬಾರದು. ಅಣೆಕಟ್ಟಿನ ಸಮಸ್ಯೆ ಇದ್ದರೆ ಪರಿಶೀಲಿಸೋಣ ಎಂಬುದಾಗಿ ಹೇಳಿ. ಅದನ್ನು ಬಿಟ್ಟು ಹೆಣ್ಣು ಮಗಳನ್ನು ಮಲಗಿಸಿ ಅಂದರೆ ಏನು ಭಾಷೆಯದು? ಮಿಸ್ಟರ್ ಕುಮಾರಸ್ವಾಮಿ, ಮೈಂಡ್ ಯುವರ್ ಲಾಂಗ್ವೇಜ್’ ಎಂದು ಗುಡುಗಿದರು.

ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿ ಹಿರೇಮಠದಲ್ಲಿ ಜರುಗಿದ ಪಂಚಮಸಾಲಿ ಸ್ವಾಮೀಜಿಗಳ ಸಭೆಯಲ್ಲಿ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು

‘ಪಂಚಮಸಾಲಿಗಳ ಏಳಿಗೆಗಾಗಿ ತೃತೀಯ ಶಕ್ತಿ’

ಪ್ರಜಾವಾಣಿ ವಾರ್ತೆ

ಬಸವನಬಾಗೇವಾಡಿ: ಪಂಚಮಸಾಲಿ ಸಮಾಜದ ಏಳಿಗೆಗಾಗಿ ತೃತೀಯ ಶಕ್ತಿಯಾಗಿ ಒಕ್ಕೂಟ ನಿರ್ಮಾಣವಾಗಬೇಕು. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಈ ಒಕ್ಕೂಟ ಕಾರ್ಯನಿರ್ವಹಿಸಬೇಕು ಎಂದು ಬಬಲೇಶ್ವರದ ಬೃಹನ್ ಮಠದ ಡಾ.ಮಹಾದೇವ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಹೇಳಿದರು.

ತಾಲ್ಲೂಕಿನ ಮನಗೂಳಿ ಹಿರೇಮಠದಲ್ಲಿ 40ಕ್ಕೂ ಹೆಚ್ಚು ಪಂಚಮಸಾಲಿ ಸ್ವಾಮೀಜಿಗಳ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಸಭೆ, ನಡೆಸಿ ಸಮಾಜದ ಈಗಿರುವ ಎರಡು ಮಠಗಳಿಗೆ ಪರ್ಯಾಯವಾಗಿ ಮೂರನೇ ಶಕ್ತಿ ಒಕ್ಕೂಟ ಸ್ಥಾಪಿಸುವುದು ನಮ್ಮೆಲ್ಲರ ಆಶಯವಾಗಿದೆ ಎಂದು ಹೇಳಿದರು.

ಮನಗೂಳಿಯ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪಂಚಮಸಾಲಿ ಸಮಾಜದ ಏಳಿಗೆಗಾಗಿ ಸಮಾನ ಮನಸ್ಕ ಸ್ವಾಮೀಜಿಗಳು ಸೇರಿ ಒಕ್ಕೂಟದ ಸಭೆ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಬೆಳಗಾವಿ ಜಿಲ್ಲೆಯ ಕಕ್ಕಮರಿ, ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಒಕ್ಕೂಟದ ಸಭೆ ಈಗಾಗಲೇ ನಡೆದಿದೆ. ಇನ್ನೂ ಎರಡರಿಂದ ಮೂರು ಸಭೆ ಮಾಡಿ, ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ನೆಲೋಗಿಯ ಶಿವಾನಂದೇಶ್ವರ ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಧಾರ್ಮಿಕ ಪ್ರಚಾರ ಹಾಗೂ ಸಮಾಜದ ಬಡ ಮಕ್ಕಳ ಉಚಿತ ವಸತಿ ನಿಲಯ, ಪ್ರಸಾದ ನಿಲಯ ಸ್ಥಾಪನೆಗಾಗಿ ಒಕ್ಕೂಟವನ್ನು ನಿರ್ಮಿಸಲಾಗುತ್ತದೆ’ ಎಂದರು.

ಪಂಚಮಸಾಲಿ ಮೂರನೇ ಪೀಠದ ಕಾರ್ಯತಂತ್ರ ಎಂದು ಸುಮ್ಮನೆ ಅಪಪ್ರಚಾರ ಮಾಡುತ್ತಿದ್ದಾರೆ ಎಂಬ ಬಗ್ಗೆಯು ಚರ್ಚೆ ನಡೆಯಿತು.

ಬಸವಕಲ್ಯಾಣ ಶಿವಬಸವ ಸ್ವಾಮೀಜಿ, ಸೊಲ್ಲಾಪುರದ ಬಸವಲಿಂಗ ಸ್ವಾಮೀಜಿ, ನಾಗನೂರಿನ ಗುರುಬಸವ ಸ್ವಾಮೀಜಿ, ಕಿತ್ತೂರಿನ ಪೀರೇಶ್ವರ ಸ್ವಾಮೀಜಿ, ಅಮರಗೋಳದ ಬಸವಲಿಂಗ ಸ್ವಾಮೀಜಿ, ಕುಚನೂರಿನ ಸಿದ್ದಲಿಂಗ ದೇವರು, ಕೊಪ್ಪಳದ ಸುಮಿತ್ರಾತಾಯಿ, ಬುರಣಾಪುರದ ಯೋಗೇಶ್ವರ ಮಾತಾಜಿ, ಅಥರ್ಗಾದ ಮಾತಾ ವಚನಶ್ರೀ ಅಕ್ಕನವರು, ಮುಳಸಾವಳಗಿಯ ದಯಾನಂದ ಸ್ವಾಮೀಜಿ, ರಾಮುಹಳ್ಳಿಯ ಭಾರತಿ ಸ್ವಾಮೀಜಿ ಭಾಗವಹಿಸಿದ್ದರು.

‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವುದು ಪ್ರತಿಷ್ಠೆಯಲ್ಲ, ಕರ್ತವ್ಯ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವುದು ಸರ್ಕಾರ ಹಾಗೂ ಶಿಕ್ಷಣ ಇಲಾಖೆಗೆ ಪ್ರತಿಷ್ಠೆ ವಿಚಾರವಲ್ಲ. ಇದು ನಮ್ಮ ಕರ್ತವ್ಯ’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಸೋಮವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪರೀಕ್ಷೆ ಎಂಬುದು ಶಿಕ್ಷೆಯಲ್ಲ. ಕಲಿಕೆ ಯಾವ ಹಂತದಲ್ಲಿದೆ ಎಂಬುದು ಮಕ್ಕಳಿಗೆ ತಿಳಿಯಬೇಕು. ಪಿಯುಸಿನಲ್ಲಿ ಯಾವ ವಿಷಯ ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ತಿಳಿವಳಿಕೆ ಮೂಡಬೇಕು. ಆ ಉದ್ದೇಶದಿಂದ ಪರೀಕ್ಷೆ ಮಾಡುತ್ತಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

ಇಂದು ಸಭೆ: ‘ರಾಜ್ಯದ ಎಲ್ಲ ಡಿಡಿಪಿಐ ಮತ್ತು ಬಿಇಒಗಳ ಜತೆ ಮಂಗಳವಾರ ಸಭೆ ನಡೆಸಲಿದ್ದೇನೆ. ಇನ್ನೊಂದು ದಿನ ರಾಜ್ಯದ ಮಕ್ಕಳ ಜತೆ ಸಂವಾದ ನಡೆಯಲಿದೆ. ಎರಡು ಸೆಟ್ ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಶೀಟ್ ಮಾಹಿತಿಯನ್ನು ಈಗಾಗಲೇ ಶಾಲೆಗಳಿಗೆ ಕೊಡಲಾಗಿದೆ. ಶಾಲಾ ಹಂತದಲ್ಲಿ ತರಬೇತಿ ಕೂಡಾ ಕೊಟ್ಟಿದ್ದೇವೆ’ ಎಂದರು.

ಎಸ್.ಸುರೇಶ್ ಕುಮಾರ್

‘ಶಿಕ್ಷಣ ಸಚಿವರು ಹಟಕ್ಕೆ ಬಿದ್ದು ಪರೀಕ್ಷೆ ಮಾಡುತ್ತಿದ್ದಾರೆ’ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿರುವ ಬಗ್ಗೆ ಪ್ರತಿಕ್ರಿಯೆಗೆ ಗರಂ ಆದ ಸಚಿವರು, ‘ಅವರು ದೊಡ್ಡವರು. ಏನೆಂದು ಪ್ರತಿಕ್ರಿಯಿಸಲಿ’ ಎನ್ನುತ್ತಾ ನಿರ್ಗಮಿಸಿದರು.

‘ಮೀಸಲಾತಿ ನಿಗದಿಯಲ್ಲಿ ಹಸ್ತಕ್ಷೇಪವಿಲ್ಲ’

ಶಿವಮೊಗ್ಗ: ‘ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮೀಸಲಾತಿ ನಿಗದಿಯಲ್ಲಿ ಸರ್ಕಾರದ ಪಾತ್ರವಿಲ್ಲ. ಪಟ್ಟಿ ಕುರಿತು ಅಸಮಾಧಾನವಿದ್ದರೆ ಚುನಾವಣಾ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸಬೇಕು’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಬಿ.ಆರ್. ಪ್ರಾಜೆಕ್ಟ್ ಬಳಿ ಸೋಮವಾರ ಭದ್ರಾ ಜಲಾಶಯ ವೀಕ್ಷಿಸಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಮೀಸಲಾತಿ ಕರಡು ಪಟ್ಟಿಗೆ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಪಕ್ಷಭೇದವಿಲ್ಲದೆ ಆಕ್ಷೇಪಗಳು ಕೇಳಿಬಂದಿವೆ. ಕೆಲವರು ಸರ್ಕಾರದ ವಿರುದ್ಧ ಟೀಕೆ ಮಾಡಿದ್ದಾರೆ. ಚುನಾವಣಾ ಆಯೋಗ ರಾಜ್ಯ ಸರ್ಕಾರದ ಅಭಿಪ್ರಾಯ ಕೇಳಿ ಮೀಸಲಾತಿ ಪ್ರಕಟಿಸುವುದಿಲ್ಲ. ರಾಜಕೀಯ ಹಸ್ತಕ್ಷೇಪ ನಡೆದಿಲ್ಲ ಎಂದು ಪ್ರತಿಪಾದಿಸಿದರು.

‘ಟೀಕಿಸುವವರು ಬಿಎಸ್‌ವೈ ಕಾಲಿನ ದೂಳಿಗೂ ಸಮನಲ್ಲ’

ಮೈಸೂರು: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಟೀಕಿಸುವವರು ಅವರ ಕಾಲಿನ ದೂಳಿಗೂ ಸಮನಲ್ಲ’ ಎಂದು ಸಚಿವ ಎಸ್.ಟಿ.ಸೋಮಶೇಖರ್ ಅವರು ಸ್ವಪಕ್ಷೀಯ ಶಾಸಕರ ವಿರುದ್ಧವೇ ಕಿಡಿಕಾರಿದರು.

ಸುತ್ತೂರು ಮಠದಲ್ಲಿ ಸೋಮವಾರ ಮಾಧ್ಯಮದವರ ಜತೆ ಮಾತನಾಡಿ, ‘ಯಡಿಯೂರಪ್ಪ ಹುಟ್ಟು ಹೋರಾಟಗಾರ. ಅವರ ವಿರುದ್ಧ ಒಂದೆರಡು ಬಾರಿ ಏನಾದರೂ ಟೀಕೆ ಮಾಡಬಹುದು. ಪ್ರತಿದಿನವೂ ಮಾಧ್ಯಮಗಳ ಮುಂದೆ ಬಂದು ಮಾತನಾಡುವುದೆಂದರೆ ಏನರ್ಥ? ಸ್ವಲ್ಪವಾದರೂ ಕಾಮನ್‌ಸೆನ್ಸ್ ಇರಬೇಕು’ ಎಂದರು.

ಸೋಮಶೇಖರ್

‘ಕೆಲ ಸ್ವಯಂ ಘೋಷಿತ ನಾಯಕರು ‘ನಾವೇ ಸರ್ಕಾರ ತಂದೆವು, ನಮ್ಮಿಂದಾಗಿಯೇ ಸರ್ಕಾರ ರಚನೆಯಾಗಿದೆ’ ಎನ್ನುತ್ತಿದ್ದಾರೆ. ಯಡಿಯೂರಪ್ಪ ಅವರು 104 ಸ್ಥಾನಗಳನ್ನು ಗೆದ್ದು ತರದೇ ಇದ್ದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುತ್ತಿತ್ತೇ? ನಾವು ಇವರನ್ನು ನಂಬಿಕೊಂಡು ಬಂದಿಲ್ಲ. ಯಡಿಯೂರಪ್ಪ ನಾಯಕತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದೇವೆ’ ಎಂದರು.

ಒಂದನೇ ತರಗತಿಗೆ ಪ್ರವೇಶ ಶೇ 18.16 ರಷ್ಟು ದಾಖಲಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ 10.21 ಲಕ್ಷ ವಿದ್ಯಾರ್ಥಿಗಳನ್ನು ದಾಖಲಿಸುವ ಗುರಿಯನ್ನು ಶಿಕ್ಷಣ ಇಲಾಖೆ ಹೊಂದಿದ್ದು, ಜುಲೈ 5 ರವರೆಗೆ 1.79 ಲಕ್ಷ (ಶೇ 18.16) ವಿದ್ಯಾರ್ಥಿಗಳು ಮಾತ್ರ ದಾಖಲಾಗಿದ್ದಾರೆ. ಜೂನ್ 15 ರಿಂದ ಮಕ್ಕಳ ದಾಖಲಾತಿ ಆರಂಭಗೊಂಡಿತ್ತು.

ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ (ಎಸ್‌ಎಟಿಎಸ್) ಮಾಹಿತಿ ಆಧಾರದಲ್ಲಿ ರಾಜ್ಯದಾದ್ಯಂತ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ ದಾಖಲಾತಿಗೆ ಸಂಬಂಧಿಸಿದಂತೆ ಅಂಕಿ–ಅಂಶವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಬಿಡುಗಡೆ ಮಾಡಿದೆ.

ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಗೆ 4.72 ಲಕ್ಷ ವಿದ್ಯಾರ್ಥಿಗಳ ಪ್ರವೇಶದ ಗುರಿ ಹೊಂದಲಾಗಿದ್ದು, 1.40 ಲಕ್ಷ (ಶೇ 30.20) ದಾಖಲಾಗಿದ್ದಾರೆ. ಖಾಸಗಿ ಶಾಲೆಗೆ 4.76 ಲಕ್ಷ ವಿದ್ಯಾರ್ಥಿಗಳ ಪ್ರವೇಶ ಗುರಿ ನಿಗದಿಯಾಗಿದ್ದು, 25,310 (ಶೇ 6.30) ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅನುದಾನಿತ ಶಾಲೆಗೆ 63,838 ವಿದ್ಯಾರ್ಥಿಗಳ ಪ್ರವೇಶ ಗುರಿ ನೀಡಲಾಗಿದ್ದು, 13, 735 (ಶೇ 24.96) ದಾಖಲಾಗಿದ್ದಾರೆ.

ಜೂನ್ 24 ರಿಂದ ಜುಲೈ 5ರ ನಡುವೆ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳಲ್ಲಿ 1ರಿಂದ 10ನೇ ತರಗತಿಗೆ ಶೇ 50.4ರಷ್ಟು ವಿದ್ಯಾರ್ಥಿಗಳು ದಾಖಲಾತಿ ಪಡೆದಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶೇ 66.9, ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಶೇ 64.9 ಹಾಗೂ ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಶೇ 30.9ರಷ್ಟು ಪ್ರವೇಶ ದಾಖಲಾಗಿದೆ.

ಕಲಬುರ್ಗಿ ವಿಭಾಗದಲ್ಲಿ ಹೆಚ್ಚು: ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗವಾರು ದಾಖಲಾತಿ ಲೆಕ್ಕಚಾರದಲ್ಲಿ ಕಲಬುರ್ಗಿ ವಿಭಾಗದಲ್ಲಿ ಅತಿ ಹೆಚ್ಚು (ಶೇ 71.7) ಮತ್ತು ಬೆಂಗಳೂರು ವಿಭಾಗದಲ್ಲಿ ಅತಿ ಕಡಿಮೆ (ಶೇ 63.8) ದಾಖಲಾತಿಯಾಗಿದೆ. ಉಳಿದಂತೆ, ಮೈಸೂರು ವಿಭಾಗದಲ್ಲಿ (ಶೇ 66.2) ಬೆಳಗಾವಿ ವಿಭಾಗದಲ್ಲಿ (ಶೇ 65) ದಾಖಲಾತಿಯಾಗಿದೆ.

ಜಿಲ್ಲಾವಾರು ದಾಖಲಾತಿಯಲ್ಲಿ ಚಾಮರಾಜನಗರ (ಶೇ 76), ಹಾವೇರಿ (ಶೇ 75) ಹಾಗೂ ಧಾರವಾಡ (ಶೇ 69) ಮೊದಲ ಸ್ಥಾನದಲ್ಲಿದೆ. ಮೈಸೂರು (ಶೇ 37), ಬೆಂಗಳೂರು ಉತ್ತರ (ಶೇ 22) ಹಾಗೂ ಬೆಂಗಳೂರು ದಕ್ಷಿಣ (ಶೇ 13) ಕೊನೆಯ ಮೂರು ಸ್ಥಾನದಲ್ಲಿದೆ.

24 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ಕರಾವಳಿ ಹಾಗೂ ಒಳನಾಡಿನಲ್ಲಿ ಜುಲೈ 6ರಿಂದ 8ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಜು.10ರವರೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ತುಮಕೂರು, ಶಿವಮೊಗ್ಗ, ರಾಮನಗರ, ಮೈಸೂರು, ಮಂಡ್ಯ, ಕೋಲಾರ, ಕೊಡಗು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಾಮರಾಜನಗರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಯಾದಗಿರಿ, ವಿಜಯಪುರ, ಕಲಬುರ್ಗಿ, ಧಾರವಾಡ, ಬೀದರ್, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಜು.7ರವರೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಿರುವುದಾಗಿ ಇಲಾಖೆ ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಮಂಡ್ಯ ಜಿಲ್ಲೆಯ ಹೊನಕೆರೆ ಭಾಗದಲ್ಲಿ 10 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಕೊಳ್ಳೇಗಾಲ 8, ಪಾವಗಡ, ಆನೇಕಲ್ 7, ತೊಂಡೇಬಾವಿ 6, ಚಿಕ್ಕಬಳ್ಳಾಪುರ, ನೆಲಮಂಗಲ 5, ಶ್ರೀರಂಗಪಟ್ಟಣ, ಕುಣಿಗಲ್‌ನಲ್ಲಿ 4 ಸೆಂ.ಮೀ ಮಳೆಯಾಗಿದೆ.

ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ವಿವಿಧೆಡೆ ಉತ್ತಮ ಮಳೆ

ಸಿಡಿಲಿಗೆ ಮಹಿಳೆ, ಗೋಡೆ ಕುಸಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಹುಬ್ಬಳ್ಳಿ: ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಸೋಮವಾರ ಉತ್ತಮ ಮಳೆಯಾಗಿದೆ. ರಾಯಚೂರಿನಲ್ಲಿ ಸಿಡಿಲು ಬಡಿದು ಮಹಿಳೆಯೊಬ್ಬರು, ಮಂಡ್ಯ ಜಿಲ್ಲೆಯಲ್ಲಿ ಗೋಡೆ ಕುಸಿದು ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದು, ಇತರ ಮೂವರು ಗಾಯಗೊಂಡಿದ್ದಾರೆ.

ಕಲಬುರ್ಗಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಸೋಮವಾರ ಉತ್ತಮ ಮಳೆ ಸುರಿದಿದ್ದು, ರಾಯಚೂರು ಜಿಲ್ಲೆ ಶಕ್ತಿನಗರದ ಜೇಗರಕಲ್ ಬಳಿ ಜಿಂದಮ್ಮ ಜಮಷಿರಲಿ (40) ಎಂಬ ಮಹಿಳೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಕಲಬುರ್ಗಿ ನಗರ ಸೇರಿದಂತೆ ಜಿಲ್ಲೆಯ ಸೇಡಂ, ಜೇವರ್ಗಿ, ಚಿಂಚೋಳಿ ಹಾಗೂ ಶಹಾಬಾದ್ ತಾಲ್ಲೂಕಿನ ಹಲವೆಡೆ ಮಳೆ ಸುರಿಯಿತು. ಬೀದರ್ ತಾಲ್ಲೂಕು, ಹುಮನಾಬಾದ್, ಚಿಟಗುಪ್ಪ, ಹುಲಸೂರು ತಾಲ್ಲೂಕಿನಲ್ಲಿ ಮಳೆ ಸುರಿದಿದೆ.

ಹುಬ್ಬಳ್ಳಿ, ಗದಗ ಸೇರಿದಂತೆ ಹಲವೆಡೆ ಸೋಮವಾರ ಸಂಜೆ ಮಳೆಯಾಗಿದೆ. ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಒಂದು ಗಂಟೆಗೂ ಹೆಚ್ಚು ಸಮಯ ಗುಡುಗು ಸಹಿತ ಭಾರಿ ಮಳೆ ಸುರಿಯಿತು.

ಕೆಲದಿನಗಳಿಂದ ಮರೆಯಾಗಿದ್ದ ಮುಂಗಾರು ಮಳೆ ಸೋಮವಾರ ಸಂಜೆ ಮತ್ತೆ ಆರಂಭವಾಗಿದ್ದು, ಹುಬ್ಬಳ್ಳಿಯ ವಿದ್ಯಾನಗರದಲ್ಲಿ ಯುವತಿಯರು, ಯುವಕರು ಮಳೆಯಲ್ಲಿಯೇ ಸಾಗಿದರು ಪ್ರಜಾವಾಣಿ ಚಿತ್ರ

ಲಕ್ಷ್ಮೇಶ್ವರ, ಗೋವನಾಳ, ಶಿಗ್ಲಿ, ಸೂರಣಗಿ, ಬಾಲೆಹೊಸೂರು, ದೊಡ್ಡೂರು, ಹುಲ್ಲೂರು, ಅಡರಕಟ್ಟಿ, ಪುಟಗಾಂವ್‌ಬಡ್ನಿ ಗ್ರಾಮ ಪಂಚಾಯ್ತಿ ಹಳ್ಳಿಗಳಲ್ಲಿ ಉತ್ತಮ ಮಳೆ ಆಗಿದೆ.

ಗೋಡೆ ಕುಸಿದು ವ್ಯಕ್ತಿ ಸಾವು (ಮಳವಳ್ಳಿ ವರದಿ): ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬಿಜಿಪುರ ಗ್ರಾಮದಲ್ಲಿ ಸುರಿದ ಭಾರಿ ಮಳೆಗೆ ಇಟ್ಟಿಗೆ ಫ್ಯಾಕ್ಟರಿಯ ಗೋಡೆ ಕುಸಿದು ಭಾನುವಾರ ರಾತ್ರಿ ವ್ಯಕ್ತಿಯೊಬ್ಬರು ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ. ಬಿಜಿಪುರ ಗ್ರಾಮದ ಲಕ್ಷ್ಮಣ (40) ಮೃತ ವ್ಯಕ್ತಿ. ರಾಜೇಂದ್ರ ಪ್ರಸಾದ್, ಸಿದ್ದರಾಜು, ರವಿ ಗಾಯಗೊಂಡವರು.

ಕೂಲಿ ಕೆಲಸದಿಂದ ಮರಳುವಾಗ ಮಳೆ ಬರುತ್ತಿದ್ದುದರಿಂದ, ರಸ್ತೆ ಪಕ್ಕದಲ್ಲಿದ್ದ ಇಟ್ಟಿಗೆ ಫ್ಯಾಕ್ಟರಿ ಬಳಿ ಆಶ್ರಯ ಪಡೆದಿದ್ದಾರೆ. ಶಿಥಿಲವಾಗಿದ್ದ ಗೋಡೆ ಕುಸಿದಿದೆ.

ಗಾಯಾಳುಗಳಿಗೆ ತಾಲ್ಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಬಳಿಕ ಮಂಡ್ಯದ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಿದ್ದರಾಜು ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	90.74	1,447	4,596
ಹಾರಂಗಿ	2,859	2,842.22	387	80
ಕಬಿನಿ	2,284.00	2,276.05	1,240	700
ಹೇಮಾವತಿ	2,922	2,896.06	1,046	1,000
ಲಿಂಗನಮಕ್ಕಿ	1,819	1,784.60	2,559	-
ಸೂಪಾ (ಮೀ)	564	538.30	1,194	8,131
ಮಾಣಿ	594.36	573.68	240	-
ತುಂಗಭದ್ರಾ	1,633	1,609.42	2,470	261
ಮಲಪ್ರಭಾ	2,079.5	2,062.95	692	194
ಘಟಪ್ರಭಾ	2,175	2,135.56	1,941	130
ಭದ್ರಾ	186	155.3	914	80
ಆಲಮಟ್ಟಿ (ಮೀ)	519.6	517.40	3,095	10,791
ನಾರಾಯಣಪುರ (ಮೀ)	492.25	490.60	12,000	-

* ನೆಲಮಟ್ಟದಿಂದ

ಕೋವಿಡ್ ಭೀತಿ ನಿರ್ವಹಣೆ ಹೇಗೆ...

ಡಾ. ಕಿರಣ್ ವಿ. ಎಸ್.

ಕೋವಿಡ್-19 ಬಗ್ಗೆ ಆತಂಕ ಪಡದವರು ಪ್ರಾಯಶಃ ಯಾರೂ ಇಲ್ಲ! ಪ್ರತಿಯೊಬ್ಬರೂ ಕುಟುಂಬದ, ಗೆಳೆಯರ, ಸಂಬಂಧಿಗಳ, ಸಹೋದ್ಯೋಗಿಗಳ ಬಗ್ಗೆ ಚಿಂತಿತರಾಗಿಯೇ ಇರುತ್ತಾರೆ. ಜೀವನದಲ್ಲಿ ಯಾವುದೇ ವಿಪತ್ತಿನ ಬಗ್ಗೆಯೂ ಆತಂಕ ತಪ್ಪಿದ್ದಲ್ಲ. ಕೋವಿಡ್-19 ನಿರ್ಮೂಲನೆ ಕೇವಲ ವೈದ್ಯರ ಅಥವಾ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ; ಅದು ಸಮಾಜದ ಪ್ರತಿಯೊಬ್ಬರ ಹೊಣೆಗಾರಿಕೆ. ಆತಂಕವನ್ನು ತಹಬದಿಗೆ ತಾರದೇ ಇಂತಹ ಗುರುತರ ಜವಾಬ್ದಾರಿಯ ನಿರ್ವಹಣೆ ಸಾಧ್ಯವಿಲ್ಲ. ಕೋವಿಡ್-19 ಭೀತಿಯ ನಿರ್ವಹಣೆ ಹೇಗೆ?



> ಕಠಿಣ ವಾಸ್ತವಗಳನ್ನು ಎದುರಿಸುವಾಗ ಆತಂಕಕ್ಕೆ ಒಳಗಾದರೆ ತರ್ಕ ಸಡಿಲವಾಗುತ್ತದೆ; ನಿರ್ವಹಣೆಯ ಸಾಮರ್ಥ್ಯ ಕುಂಠಿತವಾಗುತ್ತದೆ. ಕೋಪ, ಭೀತಿ, ಒತ್ತಡ, ಗೊಂದಲ, ದುಃಖಗಳು ಯಾವುದೇ ಅಹಿತಕರ ಪರಿಸ್ಥಿತಿಯಲ್ಲೂ ಸಾಮಾನ್ಯ. ಅದನ್ನು ಮೀರಿ ಪರಿಹಾರಗಳನ್ನು ಆಲೋಚಿಸುವುದೇ ಚಿಂತನೆಯ ಪಕ್ವತೆಗೆ ನಿದರ್ಶನ.

ಮನೋವಿಜ್ಞಾನಿಗಳು 'ಕರೊನಾಫೋಬಿಯಾ' ಎಂಬ ಹೊಸ ಪದವನ್ನು ಟಂಕಿಸಿದ್ದಾರೆ. ವೈರಸ್ ಸೋಂಕಿನ ಭೀತಿ; ಯಾವುದೇ ಅಸೌಖ್ಯವನ್ನೂ ಕೋವಿಡ್-19 ಎಂದುಕೊಳ್ಳುವ ಭ್ರಮೆ; ಸಮೀಪದ ಬಂಧುಗಳ ಮರಣದ ಅಥವಾ ಕೆಲಸ ಕಳೆದುಕೊಳ್ಳುವ ಆತಂಕ; ಮನೆಯಲ್ಲಿ ಯಾರಿಗಾದರೂ ಸೋಂಕು ಉಂಟಾದರೆ 'ಅದು ತನ್ನಿಂದಲೇ ಆಯಿತು' ಎಂಬ ಪಾಪಪ್ರಜ್ಞೆ; ಖಿನ್ನತೆ; ಅಗತ್ಯಕ್ಕಿಂತ ವಿಪರೀತ ಅಧಿಕ ಸುರಕ್ಷೆಯ ಕ್ರಮಗಳ ಪಾಲನೆ; ಯಾವುದೇ ಸಮಸ್ಯೆ ಇಲ್ಲದಿದ್ದರೂ ಆಗಾಗ ಕೋವಿಡ್-19 ಪರೀಕ್ಷೆ ಮಾಡಿಸಿಕೊಳ್ಳುವುದು - ಇವೆಲ್ಲವೂ ಕರೊನಾಫೋಬಿಯಾ ಲಕ್ಷಣಗಳು.

ಕಾಯಿಲೆಯ ನಿರಂತರ ಅನಿಶ್ಚಿತತೆ, ವಾಸ್ತವದ ಅನಿರೀಕ್ಷಿತ ತಿರುವುಗಳು, ಹಠಾತ್ತನೆ ಬದಲಾದ ಜೀವನಶೈಲಿ, ಹೊಂದಿಕೊಳ್ಳಲು ಸುಲಭವಲ್ಲದ ಹೊಸ ನಿಯಮಗಳು ಯಾರನ್ನಾದರೂ ಕಂಗೆಡಿಸಬಲ್ಲವು. ಇವು ಸಮಷ್ಟಿ ಸ್ವರೂಪ ಪಡೆದುಕೊಂಡರೆ ಆತಂಕಗಳ ಹರಡುವಿಕೆ ತೀವ್ರ ವೇಗವನ್ನು ಪಡೆಯುತ್ತದೆ. ಕೋವಿಡ್-19 ಇಡೀ ಪ್ರಪಂಚಕ್ಕೇ ಹೊಸದು. ಹೀಗಾಗಿ, ನಿಯಮಗಳನ್ನು ರೂಪಿಸುವವರಿಗೂ ಸ್ಪಷ್ಟತೆ ಇರುವುದಿಲ್ಲ. ಹೊಸ ಹೊಸ ಸಂಶೋಧನೆಗಳಿಗೆ ತಕ್ಕಂತೆ ಬದಲಾಗುತ್ತಿರುವ ನಿಯಮಗಳು ಸಾಮಾನ್ಯರಲ್ಲಿ ಸಾಕಷ್ಟು ಗೊಂದಲ ಮೂಡಿಸುತ್ತವೆ. 'ನಮ್ಮಿಂದ ಏನನ್ನೋ ಮುಚ್ಚಿಡಲಾಗುತ್ತಿದೆ' ಎನ್ನುವ ಅನುಮಾನ ಮತ್ತಷ್ಟು ಭೀತಿಯನ್ನು ತರುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯದಲ್ಲಿ ಆಗಿರುವ ಪ್ರಚಂಡ ಪ್ರಗತಿ, 'ವಿಜ್ಞಾನಿಗಳು ಏನನ್ನು ಬೇಕಾದರೂ ಸಾಧಿಸಬಲ್ಲರು' ಎನ್ನುವ ಮನೋಭಾವವನ್ನು ಜನರ ಮನಸ್ಸಿನಲ್ಲಿ ಹುಟ್ಟುಹಾಕಿದೆ. ಕೋವಿಡ್-19 ಕಾಯಿಲೆ ಆರಂಭವಾದಾಗಿನಿಂದ 'ವಿಜ್ಞಾನಿಗಳು ಏನೋ ಒಂದು ದಾರಿ ಹುಡುಕುತ್ತಾರೆ' ಎನ್ನುವ ಆಶಾಭಾವ ಜನರಲ್ಲಿತ್ತು. ಇದರ ಅಪೇಕ್ಷೆಯಲ್ಲಿ ಬಹಳ ಮಂದಿ ತಮ್ಮ ಬೇಜವಾಬ್ದಾರಿತನವನ್ನು ಮುಂದುವರೆಸಿದ್ದರು. ಆದರೆ, ಸಾಮಾನ್ಯ ಎಂದು ಭಾವಿಸಿದ್ದ ಕಾಯಿಲೆ ಯಾರ ನಿಗ್ರಹಕ್ಕೂ ಬಾರದೇ ಅಲೆಗಳಂತೆ ಅಪ್ಪಳಿಸಲು ಆರಂಭವಾಯಿತೋ, ಆಗ ಜನರಿಗೆ ಆಧಾರರಾಹಿತ್ಯ ಕಾಡಿತು. ದೊಡ್ಡ ಸ್ಥಾನಗಳಲ್ಲಿರುವ ರಾಜಕಾರಣಿಗಳು, ಹಣ ಚೆಲ್ಲಿ ಏನನ್ನಾದರೂ ಖರೀದಿಸಬಲ್ಲ ಸಿರಿವಂತರು, ಪ್ರಭಾವಿಗಳು ಕೂಡ ಕಾಯಿಲೆಗೆ ತುತ್ತಾದಾಗ ಸಾಮಾನ್ಯ ಜನರ ಭೀತಿ ಹೆಚ್ಚಾಯಿತು.

ಅನಿಯಂತ್ರಿತ ಮಾಹಿತಿ ಪ್ರವಾಹ ನಮ್ಮ ಕಾಲದ ಅಪಾಯಗಳಲ್ಲಿ ಒಂದು. ಬೇಜವಾಬ್ದಾರಿ ದೃಶ್ಯಮಾಧ್ಯಮ, ಬೇಕಾಬಿಟ್ಟಿ ಅನಧಿಕೃತ ಮಾಹಿತಿ ಹರಡಬಲ್ಲ ಸಾಮಾಜಿಕ ಮಾಧ್ಯಮಗಳು, ಅಂತರ್ಜಾಲದ ಸುಲಭ ಲಭ್ಯತೆಗಳು ಕೋವಿಡ್-19 ಬಗೆಗಿನ ಭೀತಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಇದು ವರ್ತಮಾನದ ಸಾಮಾಜಿಕ ಮಾಧ್ಯಮಗಳು ಹರಡಿರುವ ಮೊದಲ infodemic ಎಂದು ತಜ್ಞರ ಅಭಿಪ್ರಾಯ.

ಕಠಿಣ ವಾಸ್ತವಗಳನ್ನು ಎದುರಿಸುವಾಗ ಆತಂಕಕ್ಕೆ ಒಳಗಾದರೆ ತರ್ಕ ಸಡಿಲವಾಗುತ್ತದೆ; ನಿರ್ವಹಣೆಯ ಸಾಮರ್ಥ್ಯ ಕುಂಠಿತವಾಗುತ್ತದೆ. ಕೋಪ, ಭೀತಿ, ಒತ್ತಡ, ಗೊಂದಲ, ದುಃಖಗಳು ಯಾವುದೇ ಅಹಿತಕರ ಪರಿಸ್ಥಿತಿಯಲ್ಲೂ ಸಾಮಾನ್ಯ. ಅದನ್ನು ಮೀರಿ ಪರಿಹಾರಗಳನ್ನು ಆಲೋಚಿಸುವುದೇ ಚಿಂತನೆಯ ಪಕ್ವತೆಗೆ ನಿದರ್ಶನ. ಅಧಿಕೃತ ಮಾಹಿತಿ ನೀಡಬಲ್ಲ, ವೈಜ್ಞಾನಿಕ ಮಾಹಿತಿಯ ಬಗ್ಗೆ ಚೆನ್ನಾಗಿ ಅರಿವುಳ್ಳ, ಧನಾತ್ಮಕ ಚಿಂತನೆಯ ಜನರೊಡನೆ ಸ್ಪಂದಿಸುವುದು ಉತ್ತಮ. ಅಂತಹ ಜನರನ್ನು ಗುರುತಿಸಿ, ಅವರೊಡನೆ ಮಾಹಿತಿಯನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಲಾಕ್‌ಡೌನ್ ಕಾಲದಲ್ಲೂ ಆರೋಗ್ಯಕರ ಹವ್ಯಾಸಗಳಲ್ಲಿ ತೊಡಗಬೇಕು. ಸಮತೋಲಿತ ಆಹಾರ, ಸಾಕಷ್ಟು ನಿದ್ರೆ, ವ್ಯಾಯಾಮ, ಪ್ರಾಣಾಯಾಮ, ಧ್ಯಾನ, ಧನಾತ್ಮಕ ಚಿಂತನೆ, ಕುಟುಂಬದ ಜೊತೆ ಅನ್ಯೋನ್ಯ ಮಾತುಕತೆಗಳು ಭೀತಿಯನ್ನು ಕಡಿಮೆ ಮಾಡುತ್ತವೆ. ಧೂಮಪಾನ, ಮದ್ಯಪಾನ, ಮಾದಕವಸ್ತುಗಳು ಮನಸ್ಸನ್ನು ಇನ್ನಿಲ್ಲದಂತೆ ದುರ್ಬಲವಾಗಿಸುತ್ತವೆ. ಆತಂಕ ತೀವ್ರವಾದಾಗ ಹೆಚ್ಚು ಸಮಯ ವ್ಯರ್ಥ ಮಾಡದೆ, ಯಾವುದೇ ಮುಜುಗರವಿಲ್ಲದೆ ಮನೋವೈದ್ಯರನ್ನು ಸಂಪರ್ಕಿಸಬೇಕು.

ಮಾಹಿತಿಯ ಅಗತ್ಯಬಿದ್ದಾಗ, 'ಯಾವ ಅಧಿಕೃತ ಮೂಲದಿಂದ ಪಡೆಯಬೇಕು' ಎಂದು ಮೊದಲೇ ಗುರುತಿಸಿಕೊಳ್ಳಬೇಕು. ಪ್ರಚಾರಕ್ಕಾಗಿ ಬೇಕಾಬಿಟ್ಟಿ ಮಾತನಾಡುವ, ಸಾಮಾನ್ಯ ಸಂಗತಿಗಳನ್ನೂ ದಿಗಿಲು ಹುಟ್ಟಿಸುವಂತೆ ನಿರೂಪಿಸುವ ಮಾಧ್ಯಮಗಳನ್ನು ದೂರವಿಡಬೇಕು. ಭೀತಿಯ ನಿರ್ವಹಣೆಯಲ್ಲಿ ಎಲ್ಲರಿಗೂ ಕೆಲವು ವೈಯಕ್ತಿಕ ಮಾರ್ಗಗಳು ಇರುತ್ತವೆ. 'ಜೀವನದಲ್ಲಿ ಹಿಂದೆ ಜರುಗಿದ್ದ ಆತಂಕದ ಪ್ರಸಂಗಗಳನ್ನು ಯಾವ ಮಾರ್ಗಗಳ ಮೂಲಕ ಹತೋಟಿಗೆ ತಂದಿದ್ದೆವು' ಎಂಬುದನ್ನು ಪರಿಶೀಲಿಸಿ, ಅದರಂತೆ ನಮ್ಮ ದಾರಿಗಳನ್ನು ರೂಪಿಸಿಕೊಳ್ಳಬೇಕು.

ನಮ್ಮ ಆತಂಕ ಮಕ್ಕಳನ್ನು ಬಾಧಿಸಬಾರದು. ಆದರೆ, ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಪರಿಸ್ಥಿತಿಯನ್ನು ವಿವರಿಸಬೇಕು. ಮಕ್ಕಳ ಮಾನಸಿಕ ಅಗತ್ಯಗಳಿಗೆ ಅನುಗುಣವಾಗಿ ಅವರಿಗೆ ಸಮಯ, ಬೆಂಬಲ, ಸಾಮೀಪ್ಯ ನೀಡಬೇಕು. ಇದು ಒಗ್ಗಟ್ಟಿನ ಶಿಸ್ತಿನಿಂದ ಗೆಲ್ಲಬಹುದಾದ ಕಾಳಗ. ಇದನ್ನು ಮಣಿಸಬಲ್ಲೆವೆಂಬ ಮನೋಭಾವ ಇರಬೇಕು. ಅನಗತ್ಯ ಆತಂಕಕ್ಕೆ ಒಳಗಾಗದೇ ಸನ್ನದ್ಧರಾಗಿರುವುದು ಮುಖ್ಯ.

(ಲೇಖಕರು ವೈದ್ಯ)

ಧ್ಯಾನದ ಜೀವನಸೂತ್ರ

ಪೂರ್ವಿ ಜಯರಾಜ್

> ಧ್ಯಾನದ ನಿಯಮಿತ ಅಭ್ಯಾಸದ ಮೂಲಕ ನಾವು ನಮ್ಮ ಮನಸ್ಸನ್ನು ಉದ್ದೇಶಪೂರ್ವಕವಾಗಿ ಒಂದು ವಸ್ತುವಿನ ಮೇಲೆ ಗಮನ ಹರಿಸುವಂತೆ ತರಬೇತಿ ನೀಡಬಹುದು. ಇದು ನಮ್ಮ ಮೆದುಳು ಪುನರ್ ನಿರ್ಮಾಣಗೊಳ್ಳಲು ಸಹಕರಿಸುತ್ತದೆ.

ಧ್ಯಾನ ಎಂದರೆ ಓರ್ವ ವ್ಯಕ್ತಿ ಏಕಾಗ್ರತೆಯೊಂದಿಗೆ ಅರಿವನ್ನು ಸಂಪಾದಿಸುವುದು; ಮಾನಸಿಕ ಸ್ಪಷ್ಟತೆ, ಭಾವನಾತ್ಮಕ ಪ್ರಶಾಂತತೆ ಮತ್ತು ಸ್ಥಿರವಾದ ಮನಃಸ್ಥಿತಿಯನ್ನು ಸಾವಧಾನದಿಂದ ಸಾಧಿಸುವುದು; ಒಂದು ವಸ್ತುವನ್ನು ಕುರಿತ ಆಲೋಚನೆ ಅಥವಾ ಚಟುವಟಿಕೆಯ ಮೇಲೆ ಗಮನವನ್ನು ಕೇಂದ್ರೀಕರಿಸುವ ತಂತ್ರವನ್ನು ಅಭ್ಯಾಸ ಮಾಡುವುದು.

ನಾವು ಏಕೆ ಧ್ಯಾನ ಮಾಡಬೇಕು?

ಸಾಮಾನ್ಯವಾಗಿ ವ್ಯಕ್ತಿಗಳು ತನ್ನ ಸುತ್ತಲಿನ ವಾತಾವರಣ ಅಥವಾ ತನ್ನ ಕೈಲಿರುವ ಕಾರ್ಯದ ಮೇಲೆ ಗಮನ ವಹಿಸುವುದಿಲ್ಲ. ಈ ಸ್ಥಿತಿಯಲ್ಲಿರುವಾಗ ಮೆದುಳಿನ ಕೆಲವು ಭಾಗಗಳು ಪರಸ್ಪರ ಸಂವಹನಗೊಂಡು ಒಂದು ಜಾಲವನ್ನು ಹೆಣೆದುಕೊಳ್ಳುತ್ತವೆ. ಇದೇ ನರವಿಜ್ಞಾನಶಾಸ್ತ್ರದಲ್ಲಿ ಈ ಸ್ಥಿತಿಯನ್ನು 'ಡಿಫಾಲ್ಟ್ ನೆಟ್‌ವರ್ಕ್ ಮೋಡ್' ಎನ್ನುವರು. ಇದನ್ನೇ ನಾವು 'ಆಲೋಚನೆಯಲ್ಲಿ ಕಳೆದುಹೋಗುವುದು' ಅಥವಾ 'ಮಾನಸಿಕ ಗೈರು' ಎಂದು ಕರೆಯಬಹುದು. ಈ ಸ್ಥಿತಿಯಲ್ಲಿರುವವರು ಕಳೆದುಹೋದ ನೆನಪಿನಲ್ಲೇ ಪುನರ್ಜೀವಿಸುತ್ತಿರುತ್ತಾರೆ ಅಥವಾ ಭವಿಷ್ಯದ ಸಂಗತಿಗಳ ಬಗೆಗೆ ಚಿಂತಿಸುತ್ತಿರುತ್ತಾರೆ. ಆದ್ದರಿಂದ ಡಿಫಾಲ್ಟ್ ನೆಟ್‌ವರ್ಕ್ ಮೋಡ್ ಎಂಬುದು ಅಸಂತೋಷದೊಡನೆ ಬೆಸೆದುಕೊಂಡಿದೆ. ಓರ್ವ ವ್ಯಕ್ತಿ ಬಹಳ ದೀರ್ಘಾವಧಿಯವರೆಗೆ ಈ ಅಸಹಜಸ್ಥಿತಿಯನ್ನು ಅನುಭವಿಸುತ್ತಿದ್ದಲ್ಲಿ ಅಂಥವರು ಖಿನ್ನತೆ, ಗಾಬರಿ, ಅತಿ ಚಟುವಟಿಕೆ/ಗಮನದ ಕೊರತೆಯಂತಹ ಸಮಸ್ಯೆಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚು.

ನಮಗೆಲ್ಲಾ 'ಜಾಗೃತ' ಎಂಬ ಪದವು ಚಿರಪರಿಚಿತ. ಜಾಗೃತವೆಂದರೆ ಯಾವುದಾದರೊಂದು ಅಸ್ತಿತ್ವದ ಬಗೆಗಿನ ಎಚ್ಚರಿಕೆ, ಜ್ಞಾನ; ವಾಸ್ತವದಲ್ಲಿ ಬದುಕುವುದು ಎಂದೂ ಅರ್ಥಮಾಡಬಹುದು. ಆದರೆ ನಮ್ಮ ಮೆದುಳು ಡಿಫಾಲ್ಟ್ ನೆಟ್ವರ್ಕ್ ಮೋಡ್‌ನಲ್ಲಿ ಸಿಲುಕಿರುವಾಗ ಕೈಲಿರುವ ವಿಚಾರದ ಕಡೆಗೆ ಗಮನ ವಹಿಸುವುದು ಹಾಗೂ ಸುತ್ತಲಿನ ವಾತಾವರಣದ ಬಗೆಗೆ ಜಾಗೃತವಾಗಿರುವುದು ವ್ಯಕ್ತಿಗೆ ಬಹಳ ಸವಾಲಿನ ಕೆಲಸವಾಗಿರುತ್ತದೆ. ಅವನು ಕಲ್ಪನಾಲೋಕದಲ್ಲಿ ಬದುಕಲು ಪ್ರಾರಂಭಿಸುತ್ತಾನೆ. ಇದರಿಂದ ಇನ್ನೂ ಭೀಕರವಾದ ಮಾನಸಿಕ ಸಮಸ್ಯೆಗಳಿಗೆ ಗುರಿಯಾಗಬಹುದು.



ಧ್ಯಾನದ ಅಭ್ಯಾಸದಿಂದ ಹಲವು ನರವೈಜ್ಞಾನಿಕ ಸಮಸ್ಯೆಗಳಿಂದ ಪಾರಾಗಬಹುದು. ಧ್ಯಾನದ ನಿಯಮಿತ ಅಭ್ಯಾಸದ ಮೂಲಕ ನಾವು ನಮ್ಮ ಮನಸ್ಸನ್ನು ಉದ್ದೇಶಪೂರ್ವಕವಾಗಿ ಒಂದು ವಸ್ತುವಿನ ಮೇಲೆ ಗಮನ ಹರಿಸುವಂತೆ ತರಬೇತಿ ನೀಡಬಹುದು. ಇದು ನಮ್ಮ ಮೆದುಳು ಪುನರ್ ನಿರ್ಮಾಣಗೊಳ್ಳಲು ಸಹಕರಿಸುತ್ತದೆ. ಆಗ ನಾವು ಮಾಡುವ ಎಲ್ಲ ಕೆಲಸಗಳ ಮೇಲೂ ಉತ್ತಮವಾದ ಏಕಾಗ್ರತೆಯನ್ನು ಸಾಧಿಸಲು ಸಾಧ್ಯ.

ಧ್ಯಾನವು ಹೆಚ್ಚಿನ ಅರಿವನ್ನು ಪಡೆಯಲು ಹೇಗೆ ಸಹಾಯಮಾಡುತ್ತದೆ ಎಂಬುದು ಕೆಲವು ಸಂಶೋಧನಗಳಿಂದ ಸಿದ್ಧವಾಗಿದೆ:

- ಯೇಲ್ ವಿಶ್ವವಿದ್ಯಾಲಯವು ನಡೆಸಿದ ಒಂದು ಅಧ್ಯಯನದ ಪ್ರಕಾರ ಮೆದುಳಿನ ಡಿಫಾಲ್ಟ್ ಮೋಡ್‌ನ ಚಟುವಟಿಕೆಯನ್ನು ಕಡಿಮೆಗೊಳಿಸುವಲ್ಲಿ ಧ್ಯಾನವು ಅತ್ಯಂತ ಪರಿಣಾಮಕಾರಿ ಎಂಬುದು ಸಾಬೀತಾಗಿದೆ.
- 2011ರಲ್ಲಿ ಹಾರ್ವರ್ಡ್‌ನಲ್ಲಿ ನಡೆಸಿದ ಅಧ್ಯಯನದಲ್ಲಿ ಕಂಡುಬಂದ ಅಂಶವೇನೆಂದರೆ, ಮನಃಪೂರ್ವಕ ಧ್ಯಾನದಿಂದ ಮೆದುಳಿನ ರಚನೆಯನ್ನು ನಿಜವಾಗಿ ಬದಲಿಸಬಹುದು. ಎಂಟು ವಾರಗಳ ಮನಃಪೂರ್ವಕ ಧ್ಯಾನದಿಂದ ಕಲಿಕೆ ಹಾಗೂ ನೆನಪನ್ನು ನಿಯಂತ್ರಿಸುವ ಮೆದುಳಿನ ಭಾಗವಾದ ಹಿಪ್ಪೊಕ್ಯಾಂಪಸ್‌ನಲ್ಲಿ ಬದಲಾವಣೆ ಕಂಡುಬಂದಿದೆ.
- ವಿಸ್ಕೊಸಿನ್ ವಿಶ್ವವಿದ್ಯಾಲಯವು ಒಂದು ಅಧ್ಯಯನ ನಡೆಸಿತು. ಇದರಲ್ಲಿ 10 ದೀರ್ಘಕಾಲಿಕ ಬುದ್ಧನ ಅನುಯಾಯಿಗಳು ಹಾಗೂ ಈಗ ತಾನೇ ಧ್ಯಾನದಲ್ಲಿ ಅಲ್ಪ ತರಬೇತಿ ಪಡೆದ 8 ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಧ್ಯಾನದ ಸಮಯದಲ್ಲಿ ಈ ಎರಡೂ ಗುಂಪಿನ ಇಇಜಿ (Electroencephalogram) ವರದಿಯನ್ನು ವಿಶ್ಲೇಷಿಸಲಾಯಿತು. ಬೌದ್ಧ ಸನ್ಯಾಸಿಗಳು ಅತಿಹೆಚ್ಚು ಗಾಮ ತರಂಗಗಳನ್ನು ಉತ್ಪತ್ತಿ ಮಾಡಿದ್ದರು. ಆದರೆ ಆ ವಿದ್ಯಾರ್ಥಿಗಳ ತರಂಗಗಳು ಸನ್ಯಾಸಿಗಳ ತರಂಗಗಳ ಸಾಮರ್ಥ್ಯಕ್ಕಿಂತ ಎಷ್ಟೋ ಪಟ್ಟು ಕಡಿಮೆ ಇದ್ದವು. ಗಾಮ ತರಂಗಗಳು ಮೆದುಳಿನ ವಿವಿಧ ಭಾಗಗಳಿಂದ ವಿಷಯ (ಮಾಹಿತಿ)ಗಳನ್ನು ಏಕಕಾಲದಲ್ಲಿ ವೇಗವಾಗಿ ಸಾಗಣೆಕೆ ಮಾಡುವ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತವೆ.

ಒಟ್ಟಿನಲ್ಲಿ ಸಂಶೋಧನಾಧಾರಿತ ಸಂಗತಿಗಳ ಮೂಲಕ ಕಂಡುಕೊಳ್ಳಬಹುದಾದ ಸಂಗತಿ ಎಂದರೆ ನಾವು ಸಂತೃಪ್ತರಾಗಿರಲು ಧ್ಯಾನ ಸಹಕಾರಿ.

ಜಾಗೃತಿ = ಸಂತೋಷ
ಧ್ಯಾನ = ಜಾಗೃತಿ
ಆದ್ದರಿಂದ, ಧ್ಯಾನ = ಸಂತೋಷ

ಈ ಧ್ಯಾನಸೂತ್ರ ನಮ್ಮ ಜೀವನಸೂತ್ರವಾಗಲಿ.

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ವಿಷಯ: ಗಣಿತ

11. ವೃತ್ತದ ಮೇಲೆ ಒಂದೇ ಒಂದು ಬಿಂದುವನ್ನು ಸ್ಪರ್ಶಿಸುವ ರೇಖೆ
A) ಸ್ಪರ್ಶಕ B)ಛೇದಕ C) ತ್ರಿಜ್ಯ D) ವೃತ್ತಕಂಸ

12. ಒಂದು ವೃತ್ತಕ್ಕೆ ಅದರ ಹೊರಗಿನ ಬಿಂದುವಿನಿಂದ ಎಳೆಯಬಹುದಾದ ಗರಿಷ್ಠ ಸ್ಪರ್ಶಕಗಳ ಸಂಖ್ಯೆ
A)1 B)2 C) 3 D) 4

13. ವೃತ್ತದ ಮೇಲಿನ ಒಂದು ಬಿಂದುವಿನಲ್ಲಿ ಎಳೆಯಬಹುದಾದ ಸ್ಪರ್ಶಕಗಳ ಸಂಖ್ಯೆ
A) 1 B)2
C) 3 D) ಅಪರಿಮಿತ

14. 3cm & 5cm ತ್ರಿಜ್ಯಗಳಿರುವ ಎರಡು ಏಕಕೇಂದ್ರೀಯ ವೃತ್ತಗಳ ಕೇಂದ್ರ 'O' ಆಗಿದೆ ಮತ್ತು ABಯು ದೊಡ್ಡ ವೃತ್ತದ ಜ್ಯಾ ಆಗಿದ್ದು ಚಿಕ್ಕ ವೃತ್ತವನ್ನು P ಬಿಂದುವಿನಲ್ಲಿ ಸ್ಪರ್ಶಿಸಿದರೆ ABಯ ಉದ್ದ



A) 3cm B) 4cm
C) 5cm D) 8cm

15. 10cm ಉದ್ದವಿರುವ ಒಂದು ರೇಖಾಖಂಡವನ್ನು2:3 ರ ಅನುಪಾತದಲ್ಲಿ ವಿಭಾಗಿಸಿದರೆ ಅದರ ಭಾಗಗಳ ಉದ್ದಗಳು ಕ್ರಮವಾಗಿ
A) 3cm ಮತ್ತು 7cm
B) 4cm ಮತ್ತು 6cm
C) 4.6cm ಮತ್ತು 5.4cm
D) 4.2cm ಮತ್ತು 5.8cm

16. (3 ,4) ಮತ್ತು ಮೂಲಬಿಂದುವಿನ ನಡುವೆ ಇರುವ ದೂರ
A) 6 ಮಾನಗಳು B) 5 ಮಾನಗಳು
C) 10 ಮಾನಗಳು D) 8 ಮಾನಗಳು

17. (11, -4) & (5, 6) ಬಿಂದುಗಳನ್ನು ಸೇರಿಸುವ ರೇಖೆಯ ಮಧ್ಯಬಿಂದುವು
A) (5, 3) B) (-3, 7) C) (8,1) D) (16,2)

18. P ನ ಈ ಬೆಲೆಗೆ (–5, 1) (1, P) ಮತ್ತು (4, -2) ಬಿಂದುಗಳು ಸರಳರೇಖಾಗತವಾಗಿರುತ್ತವೆ
A) 4 B) 5
C) -1 D) $3\sqrt{3}$

19. ಕೆಳಗಿನವುಗಳಲ್ಲಿ ಈ ಬಿಂದುವು y- ಅಕ್ಷದ ಮೇಲಿದೆ
A) (3, 0) B) (0, -4)
C) (-2, 0) D) (4, 6)

20. ಈ ಕೆಳಗಿನವುಗಳಲ್ಲಿ ಇದು ವರ್ಗಸಮೀಕರಣವಲ್ಲ.
A) $x^2 + 3x-5 = 0$
B) $x^2 + x^3 + 2 = 0$
C) $3 + x + x^2 = 0$
D) $x^2 - 9 = 0$

ವಿಷಯ: ವಿಜ್ಞಾನ

11. ಈ ಕೆಳಗಿನ ಯಾವ ನಿಯಮ ಹಗುರ ಧಾತುಗಳಿಗೆ ಮಾತ್ರ ಸರಿಹೊಂದುತ್ತದೆ?
ಎ) ತ್ರಿವಳಿಗಳ ನಿಯಮ ಬಿ) ಅಷ್ಟಕಗಳ ನಿಯಮ
ಸಿ) ಮೆಂಡಲೀವ್ ನಿಯಮ ಡಿ) ಮೋಸ್ಲೆ ನಿಯಮ

12. ಜರ್ಮೇನಿಯಂ, ಆರ್ಸೆನಿಕ್ ಮತ್ತು ಅಂಟಿಮನಿ ಈ ಧಾತುಗಳು
ಎ) ಲೋಹಗಳು ಬಿ) ಅಲೋಹಗಳು
ಸಿ) ಲೋಹಾಭಗಳು ಡಿ) ಕ್ಷಾರೀಯ ಲೋಹಗಳು

13. ಆಧುನಿಕ ಆವರ್ತಕ ಕೋಷ್ಟಕದಲ್ಲಿ ಗುಂಪಿನಿಂದ ಕೆಳಗೆ ಹೋದಂತೆ ಲೋಹೀಯ ಗುಣ
ಎ) ಹೆಚ್ಚಾಗುತ್ತದೆ ಬಿ) ಕಡಿಮೆಯಾಗುತ್ತದೆ
ಸಿ) ಯಾವುದೇ ಬದಲಾವಣೆಯಾಗುವುದಿಲ್ಲ
ಡಿ) ಬದಲಾಗಬಹುದು

14. ಆಹಾರ ಮತ್ತು ಇತರ ವಸ್ತುಗಳ ಸ್ಥಾನಾಂತರಣವು ಫ್ಲೋಯಂನ ಜರಡಿನಾಳದಲ್ಲಿ
ಎ) ಮೇಲ್ಮುಖ ದಿಕ್ಕಿನಲ್ಲಿ ನಡೆಯುತ್ತದೆ
ಬಿ) ಕೆಳಮುಖವಾಗಿ ನಡೆಯುತ್ತದೆ
ಸಿ) ಮೇಲ್ಮುಖ ಹಾಗೂ ಕೆಳಮುಖವಾಗಿ ನಡೆಯುತ್ತದೆ
ಡಿ) ಸಂಗಾತಿ ಜೀವಕೋಶದ ಕಡೆಗೆ ನಡೆಯುತ್ತದೆ

15. ಮಾನವನ ವಿಸರ್ಜನಾಂಗವ್ಯೂಹದ ರಚನಾತ್ಮಕ ಮತ್ತು ಕಾರ್ಯಾತ್ಮಕ ಘಟಕ
ಎ) ಮೂತ್ರಪಿಂಡ ಬಿ) ಮೂತ್ರಕೋಶ
ಸಿ) ನೆಫ್ರಾನ್ ಡಿ) ಮೂತ್ರನಾಳ

16. ಆಕ್ಸಿಜನ್ ಸಮೃದ್ಧ ರಕ್ತವನ್ನು ಹೃದಯದಿಂದ ದೇಹದ ಎಲ್ಲಾ ಭಾಗಗಳಿಗೆ ಪಂಪ್ ಮಾಡುವ ರಕ್ತನಾಳ
ಎ) ಪುಪ್ಪುಸಕ ಅಪಧಮನಿ ಬಿ) ಪುಪ್ಪುಸಕ ಅಭಿಧಮನಿ
ಸಿ) ಮಹಾಪಧಮನಿ ಡಿ) ಉಚ್ಚ ಅಭಿಧಮನಿ

17. ಮಾನವನ ದೇಹದಲ್ಲಿ ಐಚ್ಛಿಕ ಕ್ರಿಯೆಗಳ ನಿಖರತೆ ಮತ್ತು ದೇಹದ ಭಂಗಿ ಹಾಗೂ ಸಮತೋಲನವನ್ನುಕಾಪಾಡುವ ಮಿದುಳಿನ ಭಾಗ
ಎ) ಮಹಾಮಸ್ತಿಷ್ಕ ಬಿ) ಅನುಮಸ್ತಿಷ್ಕ
ಸಿ) ಮೆಡುಲ್ಲಾ ಡಿ) ಪಾನ್ಸ್

18. ಹಣ್ಣು ಮತ್ತು ಬೀಜಗಳಲ್ಲಿ ತೀವ್ರವಾಗಿ ಕೋಶವಿಭಜನೆ ನಡೆಯುತ್ತದೆ. ಆದುದರಿಂದ ಇಲ್ಲಿ ಕಂಡುಬರುವ ಸಸ್ಯ ಹಾರ್ಮೋನ್
ಎ) ಆಕ್ಸಿನ್ ಬಿ) ಜಿಬ್ಬರ್ ಲಿನ್
ಸಿ) ಸೈಟೋಕೈನಿನ್ ಡಿ) ಅಬ್ಸಿಸಿಕ್ ಆಮ್ಲ

19. ಮಾನವರಲ್ಲಿ ಹಾರ್ಮೋನ್‌ಗಳು ಬಿಡುಗಡೆಯಾಗುವ ಸಮಯ ಮತ್ತು ಪ್ರಮಾಣವನ್ನು ಯಾವ ವಿಧಾನದಿಂದ ನಿಯಂತ್ರಿಸಲಾಗುತ್ತದೆ?
ಎ) ನರಾವೇಗಗಳ ಕಾರ್ಯ ವಿಧಾನದಿಂದ
ಬಿ) ಪರಾವರ್ತಿತ ಕ್ರಿಯೆ ವಿಧಾನದಿಂದ
ಸಿ) ಹಿಮ್ಮಾಹಿತಿ ಕಾರ್ಯ ವಿಧಾನದಿಂದ
ಡಿ) ಮಾಹಾಮಸ್ತಿಷ್ಕ ನಿಯಂತ್ರಣದಿಂದ

20. ಭೂಮಿಯ ಸೆಳೆತಕ್ಕೆ ಪ್ರತಿಕ್ರಿಯೆಯಾಗಿ ಚಿಗುರುಗಳ ಮೇಲ್ಮುಖ ಬೆಳವಣಿಗೆ ಮತ್ತು ಬೇರುಗಳ ಕೆಳಮುಖ ಬೆಳವಣಿಗೆಯನ್ನು ಏನೆನ್ನುತ್ತಾರೆ?
ಎ) ಸ್ವಾಭಾವಿಕ ಬೆಳವಣಿಗೆ ಬಿ) ಜಲಾನುವರ್ತನೆ
ಸಿ) ಗುರುತ್ವಾನುವರ್ತನೆ ಡಿ) ರಾಸಾಯನಿಕಾನುವರ್ತನೆ

Subject : Second Language English

11. Mangoes are sweet, ____________? The question tag to be used here is
A. are they B. isn't it
C. is it D. aren't they

12. Ganesh is _______ arrogant person. He is not liked by anyone in ______town. The articles to be used here are
A. a, the B.an, the C. the, an D. an , an

13. Gandhiji fought ____________ the British and got us freedom. The preposition to be used here is
A. for B. from C. against D. over

14. Sheetal is intelligent _________ she is lazy. The conjunction to be used here is
A. and B. because
C. still D. but

15. Students ____________watched the experiment. The correct form of the word to be used is
A. curious B. curiously
C. curiosity D. curiousness

16. If you are writing a letter of complaint, the best way to end it would be
A. Wishing you good luck
B. hoping you will solve the issue
C. Looking forward to meeting you
D. Stay home, stay safe

17. "I'll make you the laughing stock of your school." This remark was made by
A. Swami's father B. Swami's Granny
C. the Head master D. Swami's mother

18. Later on in his life, Swami wanted to become
A. a policeman B. a watchman
C. an engine driver D. a burglar

19. Swami's father drew his attention to a newspaper report. The report was about
A. a boy sleeping alone in a forest.
B. a village lad fighting with the villagers.
C. villagers catching a burglar.
D. a village lad fighting with a tiger.

20. Baleshwar felt bad for not thanking
A. the policeman B. Dinesh Talreja
C. the truck driver D. the railway employee

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್‌ಆರ್./ ಎ. ಶ್ರೀನಿವಾಸ್/ ಎಂ.ಎಸ್. ವರ್ಧಿನಿ)

'ಸಿಇಟಿ ದಿಕ್ಸೂಚಿ' ಜುಲೈ 20ರಿಂದ ಪುನಃ ಪ್ರಕಟವಾಗಲಿದೆ

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -18

241. ಚೀನಾ ದೇಶದ ಪ್ರವಾಸಿಗನಾದ ಫಾಹಿಯಾನ್ ಯಾರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದನು?
ಎ) ಸಮುದ್ರಗುಪ್ತ ಬಿ) ಚಂದ್ರಗುಪ್ತ-2
ಸಿ) ಶ್ರೀಗುಪ್ತ ಡಿ) ಚಂದ್ರಗುಪ್ತ-1

242. ಅಶ್ವಗಳನ್ನು ವರ್ಗೀಕರಿಸುವ (ದಾಗ್) ಪದ್ಧತಿಯನ್ನು ಜಾರಿಗೆ ತಂದವರು ಯಾರು?
ಎ) ಮಹಮ್ಮದ್-ಬಿನ್-ತುಘಲಕ್
ಬಿ) ಮಲಿಕ್ ಕಾಫರ್
ಸಿ) ಜಲಾಲ್-ಉದ್-ದಿನ್-ಖಿಲ್ಜಿ
ಡಿ) ಅಲ್ಲಾ-ಉದ್-ದಿನ್-ಖಿಲ್ಜಿ

243. ರಾಜಾ ತೋಡರಮಲ್ಲ
ಎ) ಅಕ್ಬರನ ಹಣಕಾಸಿನ ಮಂತ್ರಿ
ಬಿ) ಅಕ್ಬರನ ಕಂದಾಯ ಮಂತ್ರಿ
ಸಿ) ಅಕ್ಬರನ ಕಾನೂನು ಮಂತ್ರಿ
ಡಿ) ಅಕ್ಬರನ ಅರಣ್ಯ ಮಂತ್ರಿ

244. ಇಂಡಿಯಾ ಎಂಬ ಪದವು ಈ ಕೆಳಗಿನ ಯಾವುದರಿಂದ ರೂಪಿಸಲ್ಪಟ್ಟಿದೆ?
ಎ) 'ಇಂಡಸ್' ಎಂಬ ಲ್ಯಾಟಿನ್ ಪದ
ಬಿ) 'ಇಂಡಸ್' ಎಂಬ ಗ್ರೀಕ್ ಪದ
ಸಿ) 'ಇಂಡಿಗೋ' ಎಂಬ ಸ್ಪಾನಿಷ್ ಪದ
ಡಿ) 'ಇಂಡಸ್' ಎಂಬ ರಷ್ಯನ್ ಪದ

245. 'ಬುದ್ಧಚರಿತ' ಕೃತಿಯನ್ನು ಬರೆದವರು
ಎ) ಬಾಣಭಟ್ಟ ಬಿ) ಚಾಂದ್ಬರ್ದಾಯಿ
ಸಿ) ಬಿಲ್ಹಣ ಡಿ) ಅಶ್ವಘೋಷ

246. ನಾಲ್ಕು ವೇದಗಳಲ್ಲಿ ಯಾವ ವೇದವು ಮೊದಲು ಬರೆಯಲ್ಪಟ್ಟಿತು?
ಎ) ಅಥರ್ವಣವೇದ ಬಿ) ಸಾಮವೇದ
ಸಿ) ಋಗ್ವೇದ ಡಿ) ಯಜುರ್ವೇದ

247. ಜೈನ ಧರ್ಮದ 23ನೇ ತೀರ್ಥಂಕರರು ಯಾರು?
ಎ) ವರ್ಧಮಾನ ಮಹಾವೀರ
ಬಿ) ವೃಷಭನಾಥ
ಸಿ) ಆದಿನಾಥ
ಡಿ) ಪಾರ್ಶ್ವನಾಥ

248. 330 ಸೆಂಟಿಮೀಟರ್ ಉದ್ದವಿರುವ ಹಗ್ಗದಿಂದ, 13.2 ಸೆಂಟಿಮೀಟರ್ ಉದ್ದದ ಎಷ್ಟು ತುಂಡುಗಳನ್ನು ಕತ್ತರಿಸಬಹುದು?
ಎ) 25 ಬಿ) 28 ಸಿ) 21 ಡಿ) 35

249. ಒಂದು ಬಸ್ಸಿನ ವೇಗವು ಗಂಟೆಗೆ 72 ಕಿ.ಮೀ ಆದರೆ, ಆ ಬಸ್ಸು 5 ಸೆಕೆಂಡಿನಲ್ಲಿ ಎಷ್ಟು ದೂರ ಕ್ರಮಿಸುತ್ತದೆ?
ಎ) 50 ಮೀಟರ್
ಬಿ) 74.5 ಮೀಟರ್
ಸಿ) 100 ಮೀಟರ್
ಡಿ) 60 ಮೀಟರ್

250. ಈ ಸಂಖ್ಯೆಗಳನ್ನು ಗಮನಿಸಿ 7, 10, 8, 11, 9, 12. ಇದರ ಮುಂದಿನ ಸಂಖ್ಯೆ ಯಾವುದು?
ಎ) 7 ಬಿ) 10 ಸಿ) 12 ಡಿ) 13

251. ಈ ಸರಣಿಯಲ್ಲಿ ಮುಂದಿನ ಸಂಖ್ಯೆ ಯಾವುದು? 2, 6, 18, 54
ಎ) 108 ಬಿ) 148
ಸಿ) 162 ಡಿ) 216

252. ಸೀರೆಗಳಿಗೆ ಪ್ರಸಿದ್ಧಿಯಾಗಿರುವ ಇಳಕಲ್ ಪಟ್ಟಣವು ಕರ್ನಾಟಕದ ಯಾವ ಜಿಲ್ಲೆಯಲ್ಲಿ ಇದೆ?
ಎ) ವಿಜಾಪುರ ಬಿ) ಬಾಗಲಕೋಟೆ
ಸಿ) ಕಲಬುರ್ಗಿ ಡಿ) ದಾವಣಗೆರೆ

253. ಕರ್ನಾಟಕ ಎಂಬ ಹೆಸರು ಯಾವಾಗಿನಿಂದ ಅಧಿಕೃತವಾಯಿತು?
ಎ) ಜನವರಿ 1, 1951
ಬಿ) ಜೂನ್ 15, 1971
ಸಿ) ಆಗಸ್ಟ್ 21, 1991
ಡಿ) ನವೆಂಬರ್ 1, 1973

254. 'ವಂದೇ ಮಾತರಂ' ಗೀತೆಯನ್ನು ಬರೆದವರು ಯಾರು?
ಎ) ರವೀಂದ್ರನಾಥ ಟ್ಯಾಗೋರ್
ಬಿ) ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ
ಸಿ) ಮಹ್ಮದ್ ಇಕ್ಬಾಲ್
ಡಿ) ಅರಬಿಂದೋ ದಾಸ್

255. ಕೈಗಾ ಅಣುಶಕ್ತಿ ಸ್ಥಾವರ ಯಾವ ಜಿಲ್ಲೆಯಲ್ಲಿ ಇದೆ?
ಎ) ಉತ್ತರ ಕನ್ನಡ ಜಿಲ್ಲೆ
ಬಿ) ದಕ್ಷಿಣ ಕನ್ನಡ ಜಿಲ್ಲೆ
ಸಿ) ಶಿವಮೊಗ್ಗ ಜಿಲ್ಲೆ
ಡಿ) ಉಡುಪಿ ಜಿಲ್ಲೆ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ– 17ರ ಉತ್ತರಗಳು
225. ಸಿ, 226. ಡಿ, 227. ಸಿ, 228. ಬಿ, 229. ಎ, 230. ಎ, 231. ಎ, 232. ಎ, 233. ಎ, 234. ಬಿ, 235. ಸಿ, 236. ಡಿ, 237. ಬಿ, 238. ಎ, 239. ಸಿ, 240. ಎ

ಸುಭಾಷಿತ

ನಗುನಗುತ್ತಾ ಇರುತ್ತಾರೆ ಅಂದಮಾತ್ರಕ್ಕೆ ಅವರಿಗೆ ಯಾವುದೇ ದುಃಖ ಇಲ್ಲ ಎಂದರ್ಥವಲ್ಲ. ಅವರು ದುಃಖ ಎದುರಿಸುವ ಸಾಮರ್ಥ್ಯ ರೂಢಿಸಿಕೊಂಡಿದ್ದಾರೆ ಎಂದರ್ಥ.

-ವಿಲಿಯಂ ಷೇಕ್ಸ್‌ಪಿಯರ್

ಆಡಳಿತ ಸುಧಾರಣಾ ಆಯೋಗದ ಶಿಫಾರಸು ಶೀಘ್ರ ಜಾರಿಗೆ ಬರಲಿ

ರಾಜ್ಯ ಸರ್ಕಾರದ ನಿಕಟಪೂರ್ವ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ನೇತೃತ್ವದ ಕರ್ನಾಟಕ ಆಡಳಿತ ಸುಧಾರಣಾ ಆಯೋಗ ತನ್ನ ಮೊದಲ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ವರ್ಷದ ಜನವರಿಯಲ್ಲಿ ತನ್ನ ಕೆಲಸವನ್ನು ಅಧಿಕೃತವಾಗಿ ಆರಂಭಿಸಿದ ಆಯೋಗವು ಆರು ತಿಂಗಳೊಳಗೇ ಮೊದಲ ವರದಿಯನ್ನು ಕ್ಷಿಪ್ರವಾಗಿ ಸಲ್ಲಿಸಿದೆ. ಈ ವರದಿಯಲ್ಲಿ ಮುಖ್ಯವಾಗಿ ಕಂದಾಯ, ಆಹಾರ ಮತ್ತು ಸಾರಿಗೆ ಇಲಾಖೆಗಳಲ್ಲಿ ಕೈಗೊಳ್ಳಬೇಕಾದ ಹಲವಾರು ಸುಧಾರಣೆಯ ಕ್ರಮಗಳನ್ನು ಸೂಚಿಸಿದೆ. ಆಯೋಗದ ಮುಖ್ಯಸ್ಥರು ಸಂಬಂಧಿಸಿದ ಖಾತೆಗಳ ಸಚಿವರು, ಲೋಕಾಯುಕ್ತ ಸೇರಿದಂತೆ ಸರ್ಕಾರದ ಕೆಲವು ಶಾಸನಬದ್ಧ ಸಂಸ್ಥೆಗಳ ಮುಖ್ಯಸ್ಥರು, ಹಿರಿಯ ಐಎಎಸ್ ಅಧಿಕಾರಿಗಳು, ಐಐಎಸ್‌ಸಿ ಸಹಿತ ಹಲವು ಸಂಸ್ಥೆಗಳ ಮುಖ್ಯಸ್ಥರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಕ್ಷೇತ್ರ ಅಧ್ಯಯನ, ಗುಂಪು ಚರ್ಚೆ, ಮೌಲ್ಯಮಾಪನ ಮುಂತಾಗಿ ಹಲವು ಉಪಕ್ರಮಗಳ ಮೂಲಕ ಈ ಮೊದಲ ವರದಿಯನ್ನು ತಯಾರಿಸಲಾಗಿದೆ. 21 ವರ್ಷಗಳ ಹಿಂದೆ, 2000ನೇ ಇಸವಿಯ ಏಪ್ರಿಲ್‌ನಲ್ಲಿ ರಾಜ್ಯ ಸರ್ಕಾರವು ಹಾರನಹಳ್ಳಿ ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ರಾಜ್ಯದ ಮೊದಲ ಆಡಳಿತ ಸುಧಾರಣಾ ಆಯೋಗವನ್ನು ರಚಿಸಿತ್ತು. ಆ ಆಯೋಗವು 2001ರ ಡಿಸೆಂಬರ್‌ನಲ್ಲಿ 256 ಶಿಫಾರಸುಗಳನ್ನು ಒಳಗೊಂಡ ತನ್ನ ಅಂತಿಮ ವರದಿಯನ್ನು ಸಲ್ಲಿಸಿತ್ತು. ಈಗ ನೇಮಕವಾಗಿರುವುದು ಎರಡನೇ ಆಯೋಗ. 20 ವರ್ಷಗಳಲ್ಲಿ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆಗಳೇ ನಡೆದಿವೆ. ಸಂಪರ್ಕ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿಯ ಕಾರಣದಿಂದ ಆಡಳಿತ ವ್ಯವಸ್ಥೆಯು ಬಹಳಷ್ಟು ಬದಲಾವಣೆಗಳನ್ನು ಕಂಡಿದೆ. ಹಾರನಹಳ್ಳಿ ರಾಮಸ್ವಾಮಿ ಆಯೋಗವು ಸಲ್ಲಿಸಿದ್ದ ಒಟ್ಟು 256 ಶಿಫಾರಸುಗಳಲ್ಲಿ 234 ಶಿಫಾರಸುಗಳನ್ನು ಜಾರಿಗೆ ತರಲಾಗಿದೆ ಎಂದು ವಿಜಯಭಾಸ್ಕರ್ ಆಯೋಗವು ತನ್ನ ವರದಿಯಲ್ಲಿ ನಮೂದಿಸಿದೆ. ಆದರೆ ಆಗ ಇದ್ದ ಆಡಳಿತ ವ್ಯವಸ್ಥೆಗೂ ಈಗ ಇರುವ ಆಡಳಿತ ವ್ಯವಸ್ಥೆಗೂ ಅಜಗಜಾಂತರ ಇರುವ ಕಾರಣ ಮೊದಲ ಆಯೋಗದ ವರದಿ ಜಾರಿಯ ಕುರಿತ ಮೌಲ್ಯಮಾಪನ ಆಗಬೇಕಾದ ಅವಶ್ಯಕತೆಯಿದೆ. ಹಾರನಹಳ್ಳಿ ರಾಮಸ್ವಾಮಿ ನೇತೃತ್ವದ ಆಯೋಗದ ಶಿಫಾರಸುಗಳ ಅನುಷ್ಠಾನದ ಪರಿಶೀಲನೆಯು ಅಧಿಕೃತವಾಗಿಯೇ ಎರಡನೇ ಆಯೋಗದ ಕಾರ್ಯಸೂಚಿಯಲ್ಲಿದ್ದು, ಈ ಮೌಲ್ಯಮಾಪನ ಹೆಚ್ಚು ಆಳವಾಗಿ ಆಗಬೇಕಿದೆ.

ವಿಜಯಭಾಸ್ಕರ್ ನೇತೃತ್ವದ ಆಯೋಗದ ಶಿಫಾರಸುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅವುಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಬೇಕು

ವಿಜಯಭಾಸ್ಕರ್ ನೇತೃತ್ವದ ಆಯೋಗವು ಸಲ್ಲಿಸಿರುವ ಮೊದಲ ವರದಿಯಲ್ಲಿ ಆಹಾರ ಇಲಾಖೆ ಮತ್ತು ಕಂದಾಯ ಇಲಾಖೆಗೆ ಸಂಬಂಧಿಸಿದ ತಲಾ ಎರಡು ಶಿಫಾರಸುಗಳು ಗಮನಾರ್ಹವಾಗಿವೆ. ಪಡಿತರ ಚೀಟಿದಾರರು ಮತ್ತು ನ್ಯಾಯಬೆಲೆ ಅಂಗಡಿಯವರು ಒಪ್ಪಿದ ಶುಲ್ಕ ಪಾವತಿಸಿ, ಮನೆ ಬಾಗಿಲಿಗೆ ಪಡಿತರ ತಲುಪಿಸುವ ವ್ಯವಸ್ಥೆಯನ್ನು ಮಾಡಬಹುದು ಎಂದು ಈ ವರದಿ ಹೇಳಿದೆ. ಹಾಗೆಯೇ ಜನನ- ಮರಣ ನೋಂದಣಿ ಪ್ರಕ್ರಿಯೆಯನ್ನು ಪಡಿತರ ಚೀಟಿಯ ಡೇಟಾ ಬೇಸ್‌ನೊಂದಿಗೆ ಸಂಯೋಜಿಸಿ, ಪಡಿತರ ಚೀಟಿಯಲ್ಲಿರುವ ಕುಟುಂಬದ ಸದಸ್ಯರ ಪಟ್ಟಿ ಸ್ವಯಂಚಾಲಿತವಾಗಿ ನವೀಕರಣಗೊಳ್ಳುವಂತೆ ಆಗಬೇಕು ಎಂದೂ ಸೂಚಿಸಿದೆ. ರಾಜ್ಯದಲ್ಲಿ ಪದೇ ಪದೇ ಅಕ್ರಮ ಪಡಿತರ ಚೀಟಿಗಳ ಪತ್ತೆಯ ಹಿನ್ನೆಲೆಯಲ್ಲಿ ಮತ್ತು ಈಗಲೂ ಲಕ್ಷಾಂತರ ಜನರು ಹೊಸ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿ ಕಾಯುತ್ತಿರುವ ಕಾರಣ ಇದು ತುರ್ತಾಗಿ ಆಗಬೇಕಾದ ಕೆಲಸ. ಕಂದಾಯ ಇಲಾಖೆಗೆ ಸಂಬಂಧಿಸಿ ಆಯೋಗವು ಸೂಚಿಸಿರುವ ಶಿಫಾರಸುಗಳ ಪೈಕಿ, ಎಲ್ಲ ಇಲಾಖೆಗಳ ಸಕಾಲ ಮತ್ತು ಸಕಾಲವಲ್ಲದ 800 ಇ- ಸೇವೆಗಳಿಗೆ ಸೇವಾ ಸಿಂಧು ಏಕಮಾತ್ರ ವೇದಿಕೆ ಆಗಬೇಕು ಎಂದಿರುವುದು ಉಪಯುಕ್ತ ಸಲಹೆ. ಸಕಾಲ ಅರ್ಜಿಗಳಲ್ಲಿ ಶೇಕಡ 81ರಷ್ಟು ಮಾತ್ರ ಆನ್‌ಲೈನ್ ಮೂಲಕ ಸಲ್ಲಿಕೆಯಾಗುತ್ತಿವೆ ಎಂದು ಆಯೋಗ ಗುರುತಿಸಿದೆ. ಈ ದಿಸೆಯಲ್ಲಿ ಗ್ರಾಮೀಣ ಜನರಲ್ಲಿ ಹೆಚ್ಚು ಅರಿವು ಮೂಡಿಸಬೇಕಾದ ಅಗತ್ಯವಿದೆ ಎನ್ನುವುದು ನಿಸ್ಸಂಶಯ. ಭೂಸ್ವಾಧೀನ ನಿರ್ವಹಣಾ ಸಾಫ್ಟ್‌ವೇರ್ ಅನ್ನು ತ್ವರಿತವಾಗಿ ಅಭಿವೃದ್ಧಿಪಡಿಸಿ ಕೆಐಎಡಿಬಿ, ಬಿಡಿಎ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು ಎನ್ನುವುದೂ ಮಹತ್ವದ ಶಿಫಾರಸು ಎನ್ನಬಹುದು. ಈ ಸಂಸ್ಥೆಗಳ ಭೂಸ್ವಾಧೀನದ ಕುರಿತು ಜಿಲ್ಲಾಧಿಕಾರಿ ಕೋರ್ಟ್ ಸಹಿತ ವಿವಿಧ ಸಕ್ಷಮ ಪ್ರಾಧಿಕಾರಗಳಲ್ಲಿ ಮೊಕದ್ದಮೆಗಳು ಹಲವು ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವುದು ಈ ಕ್ಷೇತ್ರಗಳ ಸುಧಾರಣೆಯ ಅಗತ್ಯವನ್ನು ಒತ್ತಿ ಹೇಳುತ್ತಿದೆ. ಈ ಹಿಂದಿನ ಸುಧಾರಣಾ ಆಯೋಗದ ವರದಿಯೂ ಸಮಗ್ರವಾಗಿತ್ತು. ಆದರೆ ಆ ವರದಿ ಜಾರಿಯ ಬಳಿಕವೂ ಕೆಂಪುಪಟ್ಟಿ ಮತ್ತು ಭ್ರಷ್ಟಾಚಾರದ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರಗಳಿಗೆ ಸಾಧ್ಯವಾಗಿಲ್ಲ ಎನ್ನುವುದು ಒಂದಲ್ಲ ಒಂದು ಸಮಯದಲ್ಲಿ ಪ್ರತಿಯೊಬ್ಬರಿಗೂ ಅನುಭವಕ್ಕೆ ಬಂದಿರಬಹುದಾದ ಸತ್ಯ. ಮಧ್ಯವರ್ತಿಗಳ ಮೋಸ ಮತ್ತು ಅಧಿಕಾರಶಾಹಿಯ ಭ್ರಷ್ಟತೆ ಇವತ್ತಿಗೂ ನಮ್ಮ ಆಡಳಿತ ವ್ಯವಸ್ಥೆಯನ್ನು ಒಳಗಿಂದ ಶಿಥಿಲಗೊಳಿಸುತ್ತಿರುವ ಎರಡು ಮುಖ್ಯ ಅಂಶಗಳು. ಹಾಗೆಂದೇ ಲೋಕಾಯುಕ್ತ ಮತ್ತು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಇವತ್ತಿಗೂ ಕೈತುಂಬ ಕೆಲಸಗಳಿವೆ. ಪದೇ ಪದೇ ಭ್ರಷ್ಟ ಅಧಿಕಾರಿಗಳು ಮತ್ತು ಸಿಬ್ಬಂದಿ ಸಿಕ್ಕಿಬೀಳುವುದು ನೋಡಿದರೆ ಸರ್ಕಾರದ ಸುಧಾರಣಾ ಕ್ರಮಗಳ ಪ್ರಯೋಜನವು ಜನಸಾಮಾನ್ಯರನ್ನು ಪೂರ್ಣವಾಗಿ ತಲುಪುತ್ತಿಲ್ಲ ಎಂದೇ ಹೇಳಬೇಕಾಗುತ್ತದೆ. ಆದಕಾರಣ ಈಗ ಹೊಸ ಆಯೋಗವು ಸೂಚಿಸಿದ ಶಿಫಾರಸುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಯತ್ನಿಸಬೇಕು. ಅದಕ್ಕಾಗಿ ಸಂಪರ್ಕ ಕ್ರಾಂತಿಯ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.

ದಿನದ ಟ್ವೀಟ್

ಒಳ್ಳೆಯ ಅವಕಾಶ

ಇವತ್ತಿಗೂ ಕರ್ನಾಟಕದಲ್ಲಿ ಹೆಚ್ಚು ಮಕ್ಕಳು ಕನ್ನಡ ಮಾಧ್ಯಮದಲ್ಲೇ ಓದುತ್ತಿದ್ದಾರೆ. ಇಂಗ್ಲಿಷ್ ಮಾಧ್ಯಮಕ್ಕೆ ಹೋಗುತ್ತಿದ್ದ ಮಕ್ಕಳು, ಕೋವಿಡ್ ಆರ್ಥಿಕ ಹಿಂಜರಿತದಿಂದ ಈ ವರ್ಷ ಸರ್ಕಾರಿ ಶಾಲೆಗಳಿಗೆ ಸೇರುವ ನಿರೀಕ್ಷೆ ಇದೆ. ಕನ್ನಡ ಮಾಧ್ಯಮ ಶಾಲೆಗಳನ್ನು ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳೋಕೆ ಸರ್ಕಾರದ ಮುಂದೆ ಒಂದು ಒಳ್ಳೆಯ ಅವಕಾಶ ಇದೆ.

ಚೇತನ್ ಜೀರಾಳ್, ನಾಗರಿಕ

25 ವರ್ಷಗಳ ಹಿಂದೆ

ಶನಿವಾರ, 6-7-1996

● 'ಸರ್ಕಾರಿ ನೌಕರರಿಗೆ ಬೋನಸ್ ಇಲ್ಲ'

ಬೆಂಗಳೂರು, ಜುಲೈ 5– ಸರ್ಕಾರಿ ನೌಕರರಿಗೆ ಬೋನಸ್ ನೀಡಬೇಕು ಎನ್ನುವುದೇ ಅವಾಸ್ತವ ಎಂದು ವಿಧಾನ ಪರಿಷತ್ತಿನಲ್ಲಿ ಇಂದು ಹೇಳಿದ ಅರ್ಥ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೌಕರರ ಈ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಿದೆ ಎಂದು ಸ್ಪಷ್ಟಪಡಿಸಿದರು.

ಉದ್ಯಮಗಳಲ್ಲಿ ಬರುವ ಲಾಭಾಂಶದಲ್ಲಿ ಒಂದು ಪಾಲನ್ನು ಕಾರ್ಮಿಕರೊಂದಿಗೆ ಹಂಚಿಕೊಳ್ಳಬೇಕೆಂಬ ಕಲ್ಪನೆಯ ರೂಪದಲ್ಲಿ ಬಂದ ಪದ್ಧತಿ ಬೋನಸ್. ಅದನ್ನು ಸರ್ಕಾರಿ ನೌಕರರಿಗೂ ಅನ್ವಯಿಸಬೇಕು ಎಂಬ ಕಲ್ಪನೆಯೇ ಸರಿಯಲ್ಲ ಎಂದು ಉಪ ಮುಖ್ಯಮಂತ್ರಿ ವಾದಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 6-7-1971

● ಅರ್ಹ ಕೆಳದರ್ಜೆ ನೌಕರರು ಉನ್ನತ ದರ್ಜೆಗೆ ಏರಲು ತಕ್ಕ ಕಾರ್ಮಿಕ ನೀತಿಗೆ ಕೆಂಗಲ್ ಕರೆ

ಬೆಂಗಳೂರು, ಜುಲೈ 5– ಯೋಗ್ಯತೆ, ನಿಸ್ಪೃಹತೆ ಮತ್ತು ಕೌಶಲ ಇರುವ ಕೆಳದರ್ಜೆಯ ನೌಕರ, ಸಂಸ್ಥೆಯ ಉನ್ನತ ದರ್ಜೆಗೆ ಏರುವುದಕ್ಕೆ ಅವಕಾಶವಿರುವ ಕಾರ್ಮಿಕ ನೀತಿ ಅನುಸರಣೆ ಅಗತ್ಯವೆಂದು ಕೇಂದ್ರ ರೈಲ್ವೆ ಸಚಿವ ಶ್ರೀ ಕೆ.ಹನುಮಂತಯ್ಯ ಅವರು ಇಂದು ಇಲ್ಲಿ ನುಡಿದರು.

ರೈಲ್ವೆ ಇನ್‌ಸ್ಟಿಟ್ಯೂಟ್‌ನಲ್ಲಿ ಮೈಸೂರು ವಿಭಾಗದ ರೈಲ್ವೆ ನೌಕರರ ಸಮ್ಮೇಳನವನ್ನು ಉದ್ಘಾಟಿಸಿದ ಅವರು, ಇಂತಹ ಕ್ರಾಂತಿಕಾರಿ ನೀತಿಯ ಬಗ್ಗೆ ಪ್ರಧಾನ ಮಂತ್ರಿಯವರು ಯೋಚಿಸಿರುವರೆಂದು ಹೇಳಿ, ಆಡಳಿತ ವರ್ಗ ಮತ್ತು ಕಾರ್ಮಿಕರ ದರ್ಜೆಗಳ ವರ್ಗೀಕರಣ ಸಲ್ಲದೆಂದೂ ಅದು ಕೇವಲ ಬ್ರಿಟಿಷರ ಪದ್ಧತಿಯಾಗಿತ್ತೆಂದೂ ವಿವರಿಸಿದರು.

● ಆತುರದ ನಿರ್ಧಾರ ಅನುಚಿತ ಎಂದು ಪ್ರಧಾನಿ ಇಂದಿರಾ

ನವದೆಹಲಿ, ಜುಲೈ 5– ಬಾಂಗ್ಲಾ ದೇಶಕ್ಕೆ ಮಾನ್ಯತೆ ನೀಡುವ ಬಗ್ಗೆ ಪೂರ್ಣವಾಗಿ ನಂಬಿಕೆ ಮೂಡುವವರೆಗೆ, ಸರ್ಕಾರವು ಒತ್ತಾಯಕ್ಕೆ ಮಣಿದು ಆತುರದ ನಿರ್ಧಾರ ಕೈಗೊಳ್ಳುವುದು ಅನುಚಿತವಾಗುತ್ತದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಆಡಳಿತ ಕಾಂಗ್ರೆಸ್ ಸಂಸದೀಯ ಪಕ್ಷದ ಕಾರ್ಯನಿರ್ವಾಹಕ ಸಮಿತಿಗೆ ತಿಳಿಸಿದರು.

ಸಂವಿಧಾನದ ಆಶಯಗಳ ಸಾಕಾರಕ್ಕೆ ಕೈಜೋಡಿಸುವುದು ಇಂದಿನ ಅಗತ್ಯ

ಧಾರ್ಮಿಕ ಕಟ್ಟುಪಾಡುಗಳ ಬಿಗಿಹಿಡಿತ

ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ಮಾನವ ತನ್ನ ಅನುಕೂಲಕ್ಕೆಂದು ಜಾತಿ, ದೇವರು ಮತ್ತು ಧರ್ಮವನ್ನು ಸೃಷ್ಟಿಸಿದ. ಜಾತಿಯ ಮೂಲಕ ಮಾನವ ಜನಾಂಗವನ್ನು ಶ್ರೇಣೀಕೃತಗೊಳಿಸುತ್ತ ಒಡೆದು ಆಳುವ ನೀತಿಯನ್ನು ಅನುಸರಿಸಿದ. ಕುಲಕಸುಬುಗಳ ಆಧಾರದ ಮೇಲೆ ಜಾತಿ ನಿರ್ಮಾಣವಾಯಿತೇ ವಿನಾ ಜಾತಿಯ ಮೇಲೆ ಕುಲಕಸುಬುಗಳಲ್ಲ.

ದೈವೀ ಆರಾಧನೆಯಲ್ಲಿ ಪೂಜೆಯು ಪ್ರಮುಖ ಪಾತ್ರ ವಹಿಸುತ್ತದೆ. ಅದರಂತೆಯೇ ಪ್ರಾರ್ಥನೆ. ಪೂಜೆ-ಪ್ರಾರ್ಥನೆಯು ಎಲ್ಲ ಕಸುಬುಗಳಿಗಿಂತ ಶ್ರೇಷ್ಠವೆಂದು ಪರಿಗಣಿಸಿ, ಉಳಿದ ಕಸುಬುಗಳು ಅದರ ಕೆಳಗಡೆ ಬರುವಂತೆ ನೋಡಿಕೊಳ್ಳಲಾಯಿತು. ಈ ಶ್ರೇಣಿ ಮತ್ತು ಏಣಿಯನ್ನು ತೆಗೆಯಲು ಪ್ರಯತ್ನಿಸಿತು 12ನೇ ಶತಮಾನದ ಶರಣ ಸಮಾಜ-

ದೇವಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ!
ಕೂಡಲಸಂಗಮದೇವಾ,
ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ

ಎಂಬುದು ವಚನಕಾರರ ನಿರ್ಣಯ. ಸ್ವತಃ ದೇವರು ತನ್ನ ಭಕ್ತನೊಂದಿಗೆ ಬಂದರೆ ಇಬ್ಬರ ಕಾಯಕವನ್ನು ವಿಭಜಿಸಲಾರೆ; ಯಾವ ಕಾಯಕವೆಂದು ಪ್ರಶ್ನಿಸಲಾರೆ, ಭಕ್ತನನ್ನು ದೈವೀ ಸ್ಥಾನಕ್ಕೇರಿಸಿ, ಅವನು ನಿರ್ವಹಿಸುವ ಕಾಯಕವು ಕೈಲಾಸಕ್ಕೆ ಸಮಾನ ಎಂಬುದನ್ನು ಪ್ರಮಾಣೀಕರಿಸಿತು. ಕಾರಣ ಶರಣಧರ್ಮ ಅಥವಾ ಬಸವತತ್ವದಲ್ಲಿ ಕಾಯಕದಲ್ಲಿ ಮೇಲು- ಕೀಳು ಎಂಬುದು ಇರುವುದಿಲ್ಲ.

ಮೇಲರಿಮೆ ಮತ್ತು ಕೀಳರಿಮೆ ಎಂಬುದನ್ನು ಕಿತ್ತುಹಾಕಲು ವಚನಕಾರರು ಕಾಯಕ ಪರಿಕಲ್ಪನೆಯನ್ನು ಪರಿಚಯಿಸಿದರು. ಎಲ್ಲ ಕಾಯಕಗಳು ಶ್ರೇಷ್ಠವೆಂದು ಸಾರಿದರು. ಪೂಜೆ ಕಾಯಕವಲ್ಲ, ಕಾಯಕವೇ ಪೂಜೆ ಎಂಬ ವಿನೂತನ ಸಿದ್ಧಾಂತವನ್ನು ಬಸವಾದಿ ಶರಣರು ಜಗತ್ತಿಗೆ ನೀಡುವುದರ ಮುಖಾಂತರ ಸಮಸಮಾಜದ ಸ್ಥಾಪನೆ.

ಇಷ್ಟಾದರೂ ಜಾತಿಯ ಜ್ಯೇಷ್ಠತೆ ತಗ್ಗಲಿಲ್ಲ. ಅದನ್ನು ಮುತುವರ್ಜಿಯಿಂದ ಮುಂದುವರಿಸಿಕೊಂಡು ಬರಲಾಯಿತು. ವರ್ಣಾಶ್ರಮ ವ್ಯವಸ್ಥೆ ಮುಖಾಂತರ ಜಾತಿಯ ಮೇಲು- ಕೀಳು ಜೀವಂತ. ಜಾತಿ ವ್ಯವಸ್ಥೆಯ ಹೃದಯವೇ ಅಸಮಾನತೆ ಮತ್ತು ಅಸ್ಪೃಶ್ಯತೆ. ಇಂದಿಗೂ ಇದು ಜೀವಂತವಾಗಿದೆ. ಜಾತಿ ವ್ಯವಸ್ಥೆ ಸೃಷ್ಟಿಸಿದ ಅಸಮಾನತೆಯನ್ನು ತೊಡೆದುಹಾಕಲು ಇನ್ನೂವರೆಗೆ ಸಾಧ್ಯವಾಗಿಲ್ಲ. ಅದಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂವಿಧಾನಬದ್ಧವಾದ ಮೀಸಲಾತಿ. ಸಾಲದೆಂಬಂತೆ ಮುಂದುವರಿದವರು ಸಹ ಮೀಸಲಾತಿ ಸೌಲಭ್ಯ ಪಡೆಯಲು ಹೋರಾಟ ನಡೆಸಿದ್ದಾರೆ.

ಸದ್ಯಕ್ಕೆ ಜಾತೀಯತೆಯಾಗಲೀ ಮೀಸಲಾತಿಗೆ ಸಂಬಂಧಿಸಿದ ಬೇಡಿಕೆಯಾಗಲೀ ಕಡಿಮೆ ಆಗುವ ಲಕ್ಷಣ ಕಂಡುಬರುತ್ತಿಲ್ಲ. ಜಾತಿ ವ್ಯವಸ್ಥೆ ಇರುವವರೆಗೂ ಮೀಸಲಾತಿ ವ್ಯವಸ್ಥೆ ಮಾತ್ರವಲ್ಲ, ಅಸ್ಪೃಶ್ಯತೆ ಮತ್ತು ಅಸಮಾನತೆ ಮುಂದುವರಿಯುವ ಮುನ್ಸೂಚನೆಗಳು ಕಂಡುಬರುತ್ತವೆ.

ದೇವರು ಎಂಬುದು ಭಾವನಾತ್ಮಕವಾದುದು. ಅದರ ಹೆಸರಿನಲ್ಲಿ ಸೃಷ್ಟಿಯಾಗಿರುವ ಸಂಕುಚಿತ ಭಾವನೆಗಳು ಸವರ್ಣೀಯರು ಮತ್ತು ಅವರ್ಣೀಯರೆಂಬ ಭಿನ್ನ ಭಾವನೆಗೆ ಅವಕಾಶ ಮಾಡಿಕೊಟ್ಟವೆ. ಸವರ್ಣೀಯರು ಶ್ರೇಷ್ಠರು, ಅವರ್ಣೀಯರು ಕನಿಷ್ಠರು ಎಂಬ ತರತಮ ಭಾವ. ದೈವತ್ವ ಮತ್ತು ದೇವರು ದೊಡ್ಡದಿರಬಹುದು; ವಿಶಾಲವೂ ಆಗಿರಬಹುದು. ದೇವೀ ಆರಾಧನೆ ಮಾಡುವ ಮಾನವ ದೊಡ್ಡವನಲ್ಲವಲ್ಲ? ದೇವರನ್ನು ಆರಾಧಿಸಿ ಅವನು ದೇವರಾಗುವುದಿಲ್ಲ. ಆರಾಧನೆ ಅಥವಾ ಅರ್ಚನೆ ವೇಳೆಯಲ್ಲಿ ದೈವೀಭಾವನೆ ಜಾಗೃತ. ಅದರಿಂದ ಹೊರಬಂದಾಗ ಎಂದಿನಂತೆ ಅವನಲ್ಲಿ ಮಾನವಗುಣಗಳು.

ಪೂಜೆ- ಪ್ರಾರ್ಥನೆಗಳು ಒಂದು ಅವಧಿಗೆ ಸೀಮಿತ. ಕಾಯಕವು ಪೂರ್ಣಾವಧಿ. ಪೂಜೆ-ಪ್ರಾರ್ಥನೆ ಅಲ್ಪಾವಧಿ. ಮಾನವ ತಾನು ಮಾಡುವ ಕರ್ತವ್ಯ, ಕಾರ್ಯ, ಕ್ರಿಯೆ, ಕಾಯಕ ಪ್ರತೀ ಹಂತದಲ್ಲೂ ದೈವೀಭಾವನೆ (ದೇವರು, ಸಂತ, ಶರಣ, ಸತ್ಪುರುಷರ ಸ್ಮರಣೆ) ನಿರಂತರವಾದರೆ ತಾ ಮಾಡುವ ಕಾಯಕವು ಪೂಜೆ ಅನಿಸಿಕೊಳ್ಳುತ್ತದೆ. ವಾಸ್ತವದಲ್ಲಿ ಹಾಗೆ ಆಗುವುದಿಲ್ಲ. ದೇವರ ಸುತ್ತ ಕೆಲವೊಂದು ಕಟ್ಟುಪಾಡುಗಳನ್ನು ವಿಧಿಸಿಕೊಂಡಿರುವುದರಿಂದ ಅಲ್ಲಿಯೂ ಸ್ಪೃಶ್ಯ- ಅಸ್ಪೃಶ್ಯ ಭಾವನೆ.

ರಾಷ್ಟ್ರದ ಪ್ರಥಮ ಪ್ರಜೆಯಾದ ರಾಮನಾಥ ಕೋವಿಂದ ಅವರು ಪುರಿ ಜಗನ್ನಾಥ ದೇವಾಲಯಕ್ಕೆ ಭೇಟಿ ಕೊಡುತ್ತಾರೆ. ಅವರು ಹೊಂದಿರುವ ಹುದ್ದೆಯನ್ನು ನೋಡಿಯಾದರೂ ದೇವರ ದರ್ಶನದ ವೇಳೆ ಅಡ್ಡಿ ಉಂಟುಮಾಡದಿರಬಹುದಿತ್ತು. ಅಲ್ಲಿನ ಪುರೋಹಿತ ವರ್ಗದ ಕೆಲವರು ರಾಷ್ಟ್ರದ ದೊಡ್ಡ ಹುದ್ದೆಯನ್ನು ನೋಡಲಿಲ್ಲ. ದೊಡ್ಡ ಹುದ್ದೆಯನ್ನು ಹೊಂದಿರುವ ವ್ಯಕ್ತಿಯು ಯಾವ ಜಾತಿಗೆ ಸೇರಿದವರು ಎಂಬುದನ್ನು ನೋಡಿದರು. ಅಸ್ಪೃಶ್ಯ ಎನ್ನಲಾಗುವ ಜಾತಿಗೆ ಸೇರಿದ ರಾಷ್ಟ್ರಪತಿ ಕೋವಿಂದ ಅವರಿಗೆ ದೇವರ ದರ್ಶನದ ವೇಳೆ ಕಿರಿಕಿರಿ ಉಂಟುಮಾಡಲಾಯಿತು.

ರಾಷ್ಟ್ರಕವಿ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ರವೀಂದ್ರನಾಥ ಟ್ಯಾಗೋರರು ಪರಲಿ ಬ್ರಾಹ್ಮಣ ಜಾತಿಗೆ ಸೇರಿದವರೆಂಬ ಕಾರಣಕ್ಕಾಗಿ ಜಗನ್ನಾಥ ದರ್ಶನವನ್ನು ನಿರಾಕರಿಸಲಾಗುತ್ತದೆ. ರಾಷ್ಟ್ರಪಿತ ಗಾಂಧಿಯವರು ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು ಮತ್ತು ಎಲ್ಲರನ್ನೂ ಕೂಡಿಕೊಂಡು ಸ್ವಾತಂತ್ರ್ಯ ಸಂಗ್ರಾಮ ನಡೆಸಿದರು. ಆಗ ಇಡೀ ಭಾರತವೇ ಒಂದಾಗಿತ್ತು. ಒಂದಾಗಿ ಹೋರಾಡಿತು. ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ಗಾಂಧೀಜಿ ಅವರಿಗೂ ದೇವಸ್ಥಾನದ ಪ್ರವೇಶ ನಿರಾಕರಿಸಲಾಯಿತು.

ಇಂದಿರಾ ಗಾಂಧಿ ಅವರು ರಾಷ್ಟ್ರ ಕಂಡಂತಹ ಶ್ರೇಷ್ಠ ಮಹಿಳೆ. ಪ್ರಧಾನಿ ಆಗಿದ್ದಂಥವರು. ಇಂದಿರಾ ಗಾಂಧಿಯವರು ಪಾರ್ಸಿ ವ್ಯಕ್ತಿಯನ್ನು ಮದುವೆ ಆಗಿದ್ದಾರೆಂದು ಅವರಿಗೂ ಪ್ರವೇಶ ನಿರಾಕರಣೆ.

ಇಂತಹ ನಿರಾಕರಣೆ, ನಿಷೇಧವು 12ನೇ ಶತಮಾನದಲ್ಲಿಯೂ ಇತ್ತು. ಇದನ್ನೆಲ್ಲ ಗಮನಿಸಿದ ಶರಣ ಸಮಾಜವು ದೇವಾಲಯ ಸಂಸ್ಕೃತಿಯನ್ನು ನಿರಾಕರಿಸಿತು. ಅಂದಿನ ದಿನಗಳಲ್ಲಿ ದೇವಾಲಯ ದರ್ಶನವು ಕೆಲವರಿಗೆ ಮಾತ್ರ ಸೀಮಿತವಾಗಿತ್ತು. ಗರ್ಭಗುಡಿ ಸಂಸ್ಕೃತಿ.

ಅಲಕ್ಷಿತರನ್ನು ಸಂಘಟಿಸಿದ ಬಸವಣ್ಣನವರು, ದೇವಾಲಯದಲ್ಲಿ ಅವರಿಗೆ ಪ್ರವೇಶ ನಿಷೇಧಿಸಿರುವುದನ್ನು ಗಮನಿಸುತ್ತಾರೆ: ಇಂಥ ಅಸಮಾನತೆಯು ನಿರ್ಲಕ್ಷಿತರಲ್ಲಿ ಕೀಳರಿಮೆಗೆ ಕಾರಣವಾಗುತ್ತದೆಂದು, ಅದಕ್ಕಾಗಿ ಒಂದು ತತ್ವವನ್ನು ಅನುಸರಿಸಲು ಮುಂದಾಗುತ್ತಾರೆ. ಅದು ತಾಂತ್ರಿಕವೂ ಅಹುದು, ತಾತ್ವಿಕವೂ ಅಹುದು. ಅದುವೇ ಇಷ್ಟಲಿಂಗ ಧಾರಣೆ.

ಜನಿವಾರದ ಜತೆಯಲ್ಲಿ ಉಪನಯನ ಪದ್ಧತಿ ಇರುವಂತೆ ಇಷ್ಟಲಿಂಗ ಧಾರಣೆಯೊಟ್ಟಿಗೆ ದೀಕ್ಷಾ ಪದ್ಧತಿಯನ್ನು ಪರಿಚಯಿಸಲಾಯಿತು. ಬಸವಣ್ಣನವರ ವಚನ-

ಉಳ್ಳವರು ಶಿವಾಲಯವ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ
ದೇಹವೇ ದೇಗುಲ
ಶಿರ ಹೊನ್ನ ಕಳಶವಯ್ಯಾ
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ದೇವಾಲಯ ಸಂಸ್ಕೃತಿಗೆ ಬದಲಾಗಿ ಜೀವಾಲಯ ಸಂಸ್ಕೃತಿಯನ್ನು ಪ್ರಚುರಪಡಿಸಿದರು. ಅಂಗದ ಮೇಲೆ ಇಷ್ಟಲಿಂಗ ಧರಿಸುವ ಪದ್ಧತಿಯನ್ನು ಜಾರಿಗೊಳಿಸಿದ್ದು, ಶರೀರವು ನಡೆದಾಡುವ ದೇವಾಲಯ; ಶರಣನು ಮಾತನಾಡುವ ದೇವರು ಆಗುತ್ತಾನೆಂಬ ಪರಿಕಲ್ಪನೆ. ತನ್ಮೂಲಕ ದೇಹವೆ ದೇವಾಲಯ.

ಬಾಬಾ ಸಾಹೇಬರು ರಚಿಸಿದಂತಹ ಭಾರತ ಸಂವಿಧಾನವು ಸರ್ವರಿಗೂ ಸಮನಾದ ಅವಕಾಶ ಕಲ್ಪಿಸಿದೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ತತ್ವ. ಧಾರ್ಮಿಕ ಕಟ್ಟುಪಾಡುಗಳು ವ್ಯವಸ್ಥೆಯನ್ನು ಆಳುತ್ತಿವೆ. ಉಚ್ಚ- ನೀಚ ಭಾವನೆಗೆ ಅವಕಾಶ ಮಾಡಿಕೊಟ್ಟವೆ. ಸಂವಿಧಾನವನ್ನು ರಾಷ್ಟ್ರಗ್ರಂಥವೆಂದು ಒಪ್ಪಿಕೊಂಡು, ಅದರಂತೆ ನಡೆದಾಗ ಸಮ ಸಮಾಜ.

ಸಂವಿಧಾನ ನೀಡುವಂತಹ ಸೌಲಭ್ಯಗಳು ಬೇಕು, ಅದು ಬಯಸುವ ಸಮಾನತೆ ಬೇಡವೆಂದರೆ ಹೇಗೆ?

ಚುರುಮುರಿ

ಮಾಜಿ- ಹಾಲಿಗಳ ಬಿಗ್‌ಬಾಸ್

● ಲಿಂಗರಾಜು ಡಿ.ಎಸ್.

ಕರ್ನಾಟಕದ ಮಾಜಿ-ಹಾಲಿ ಸಿ.ಎಂಗಳ ಬಿಗ್‌ಬಾಸ್ ಸೀಜನ್ ಶುರುವಾಗಿತ್ತು. ಡಿಕೆಶಿ ಹೋಸ್ಟ್ ಆಗಿದ್ದರು.

ದಿನ-1: 'ಯಡೂರಪ್ಪ ಬ್ರದರ್, ನಿಮ್ಮ ಕುರ್ಚಿ ಕತೆ ಏನು?' ಕುಮಾರಣ್ಣ ಕೆಣಕಿದ್ರು. 'ನನ್ನ ಮಗ ಕಾವಲಿಗೆ ಇದ್ದಾನೆ, 17 ದೇವರುಗಳಿದ್ದಾರೆ, ನಿಮಗ್ಯಾರಿದ್ದಾರೆ?' ಅಂದ್ರು ಸಿ.ಎಂ. 'ನನ್ನತ್ರ ನಮ್ಮಪ್ಪಾರಿದ್ದಾರೆ!' ಕುಮಾರಣ್ಣನ ಮಾತಿಗೆ 'ನನಗೂ ಜಮೀರಿದ್ದಾರೆ' ಅಂದ್ರು ಸಿದ್ದರಾಮಣ್ಣ. 'ಅಪ್ಪ ಅಂಬಾರಿ ಹೊತ್ರೆ ಮಗನಿಗೂ ಹೊರೋ ಯೋಗ ಬರಲ್ಲ' ಅಂದ್ರು ಡಿಕೆಶಿ.

ದಿನ-2: 'ಶೆಟ್ಟರೆ, ಸದಾನಂದ ಗೌಡ್ರೆ ಎಷ್ಟು ದಿನ ಹಿಂಗೆ ಮಾಜಿ ಸಿಎಂ ಆಗಿ ಇರತೀರ? ಬನ್ರಿ, ನಾವೆಲ್ಲಾ ಸೇರಿ ಹುಲಿ-ಕುರಿ ಆಟ ಆಡನ!' ಸಿದ್ದಣ್ಣನ ಮಾತಿಗೆ ಶೆಟ್ಟರ್ ಉತ್ತರ ಕೊಡದೇ ಎದ್ದೋದ್ರು. 'ಯಂಕು ಸಿಎಂ ಬೋಡ್ರಿ, ಬೊಕ್ಕ ಕೆಎಂಎಫ್ ಅಧ್ಯಕ್ಷ ಪೋಸ್ಟ್ ಇತ್ತೆ ಕೊರ್ಪೆರಾ?' ಸದಾನಂದಣ್ಣ ನಗತಾ ಕೇಳಿದ್ರು.

ದಿನ-3: 'ಎಂಚಿನ ಕೃಷ್ಣಣ್ಣ, ಈರೆಗು ಸಿಎಂ ಪೋಸ್ಟ್ ಬೋಡ್ಚಾ?' ಮೊಯ್ಲಿ ಮಾತು ಕೃಷ್ಣರಿಗೆ ಅರ್ಥವಾಗದೇ ತಲೆ ಬಾಚಿಕೊಂಡರು. 'ದೇವೇಗೌಡ್ರೆಲ್ಲಿ?' ಲೋಪಾಮುದ್ರೆ ಹಾಕಿದರು ಡಿಕೆಶಿ.

ದಿನ-4: ಕ್ಯಾಮರಾ ಕೆಟ್ಹೋಗಿತ್ತು. ಮೈಕುಗಳೆಲ್ಲಾ ಬಂದಾಗಿದ್ದವು! ಸ್ಪರ್ಧಿಗಳು ನಾಪತ್ತೆ! ಡಿಕೆಶಿ ಗಡ್ಡ ಕೆರಕೊಂಡರು.

ದಿನ-5: ದೇವೇಗೌಡರು ಕಾಣಿಸಿಕೊಂಡು ಘೋಷಣೆ ಮಾಡಿದರು. 'ನೋಡ್ರೀ, ನಾವು 8 ಜನವೂ ಸಾಮೂಹಿಕ ನಿರ್ಧಾರ ಕೈಗೊಂಡಿದೇವೆ. ವಯಸ್ಸಿನ ಹಿರಿತನದ ಪ್ರಕಾರ ಪ್ರತಿಯೊಬ್ಬರೂ 3 ತಿಂಗಳು ಮುಖ್ಯಮಂತ್ರಿಯಾಗಿ ಅಧಿಕಾರ ನಿರ್ವಹಿಸುತ್ತೇವೆ. (ಡಿಕೆಶಿ ಏನೋ ಹೇಳಕ್ಹೋದಾಗ ಗೌಡ್ರು) ನೀವು ಸುಮ್ಮನಿರ್ರೀ ಅಗ್ರಿಮೆಂಟೆಲ್ಲಾ ರೆಡಿಯಾಗಿದೆ. ಸರ್ಕಾರ ರಚನೆಗೆ ನಾವು ಹೋಗ್ತಿದ್ದೀವಿ!'

'ನಾವು ಇದನ್ನ ಒಪ್ಪಲ್ಲ!' ಡಿಕೆಶಿ ಮಾತು ಮುಗಿಸೋ ಮೊದಲೇ ಜಮೀರಣ್ಣ 'ಹಂಗಾಮಾ' ಅಂತ ಕೂಗ್ತಾ ಬಿಗ್‌ಬಾಸ್ ಮನೆ ಬಾಗಿಲನ್ನು ಒದೆಯತೊಡಗಿದಾಗ, ಐದೇ ದಿನಕ್ಕೆ ಬಿಗ್‌ಬಾಸ್ ಮುಗಿದ್ಹೋಗಿತ್ತು.

ಸಂಗತ

ನರಳಿದವನು ಬಾಳಿಯಾನು!

ದೂರದೃಷ್ಟಿಯ ನಮ್ಮ ನಾಯಕರಿವರು; ಆಹಾ... ನಾಯಕ ಪಟ್ಟಕ್ಕೆ ಎಂಥ ಪೈಪೋಟಿ...

● ಜಿ.ಕೆ.ಗೋವಿಂದ ರಾವ್

ಕರ್ನಾಟಕ ಜನತೆಯ ಪೂರ್ವಸುಕೃತ. ಎಂತಹ ನಾಯಕರು! ಎಂತಹ ದೂರದೃಷ್ಟಿ! ಎಂತಹ ದೂರಾಲೋಚನೆ!

ಚುನಾವಣೆ ಮತ್ತೂ ಎರಡು ವರ್ಷಗಳ ಆಚೆಗಿದೆ. ಹೀಗಿದ್ದೂ ದೇಶಸೇವೆಗೆ ಎಂತಹ ಉತ್ಸಾಹ! ಎಂತಹ ತರಾತುರಿ! ಈ ಮಧ್ಯದ ಎರಡು ವರ್ಷಗಳನ್ನು ಒರೆಸಿಹಾಕಿ ಅದರಾಚೆಗಿನ ನಾಯಕ ಪಟ್ಟಕ್ಕೆ ಎಂತಹ ಪೈಪೋಟಿ!

ಹಾಳು ಕೊರೊನಾ, ಜನರ ಬವಣೆ, ನಗರಗಳಿಂದ ಸಂಸಾರ ಸಮೇತ ತಮ್ಮ ದೂರದ ಹಳ್ಳಿ ಮನೆಗಳಿಗೆ ನಿರಾಶೆ, ಹತಾಶೆಗಳಿಂದ ವಾಪಸು, ಕೊರೊನಾ ಅಲ್ಪಕಾಲದ ಸ್ಥಗಿತ ಸ್ಥಿತಿ, ಮತ್ತೆ ನಗರಗಳತ್ತ ಚಿಕ್ಕಾಸಿನ ಸಂಪಾದನೆಗಾಗಿ ವಾಪಸು, ವ್ಯಾಪಾರ, ವಹಿವಾಟು, ಪಾತಾಳ ಮುಟ್ಟಿರುವ ದಯನೀಯ ಸ್ಥಿತಿ... ಇವೆಲ್ಲವೂ ನಿಜವಿರಬಹುದು. ಆದರೆ ನಮ್ಮ ದೇಶಭಕ್ತರ ದೇಶಸೇವೆಯ ಉತ್ಸಾಹದಲ್ಲಿ ಈ ಎಲ್ಲವೂ ಸ್ವಲ್ಪ ಕಾಲ ಬದಿಗಿರಿಸಬೇಕಾದ ಕಿರಿಕಿರಿಗಳು.

ನಮ್ಮ ಸೇವೆಗಾಗಿ ಟೊಂಕ ಕಟ್ಟಿ ತಯಾರಾಗುತ್ತಿರುವ ನಾಯಕರ ಕುರಿತಾದ ಸಹನೆ, ಸಹಾನುಭೂತಿ ರೂಢಿಸಿಕೊಳ್ಳಬೇಕಾದ ತುರ್ತಿನ ಕಾಲ ಇದು. ನಾಳಿನ ಜನಸೇವೆಗಾಗಿ ಸ್ಪರ್ಧಾತ್ಮಕವಾಗಿ ಸಿದ್ಧರಾಗುತ್ತಿರುವ ನಾಯಕರಿಗೆ ಅವಕಾಶ ಮಾಡಿಕೊಡಬೇಕಾದ ಜವಾಬ್ದಾರಿ ನಮ್ಮದು, ಕೊಂಚ ನತದೃಷ್ಟರೇ ಅನ್ನಿಸಿಬಿಡುವ ಸ್ಥಿತಿ ತಲುಪಿರುವ ಜನರದ್ದು- ಅಲ್ಲವೇ?

ಅಪ್ಪಳಿಸಿದ ರೋಗಕ್ಕೆ ನಲುಗುತ್ತಿದ್ದೇವೆ ನಿಜ. ಆದರೂ ಸಹಿಸಿಕೊಳ್ಳಬೇಕಾದ ಜರೂರಿನ ಕಾಲ ಇದು. ನರಳಿದವನು ಬಾಳಿಯಾನು ಎಂಬುದು ನಮ್ಮ ರಾಜಕಾರಣದ ಹೊಸ ನೀತಿ ಸಾರ.

ನಮ್ಮ ಎರಡು ಪ್ರಮುಖ ರಾಜಕೀಯ ಪಕ್ಷಗಳನ್ನು ನೋಡಿ: ಎರಡೂ ಕಡೆಯಿಂದ ಜಿದ್ದಾಜಿದ್ದಿ ರೀತಿ ತಮ್ಮ ನಾಯಕರನ್ನು ಆರಿಸಿಕೊಳ್ಳುತ್ತಿದ್ದಾರೆ. ಹಾಲಿ ಮುಖ್ಯಮಂತ್ರಿ 'ಉಳಿದಿರುವ ಎರಡೂ ವರ್ಷಗಳು ಅವಿರೋಧವಾಗಿ ನಾನೇ ನಾಯಕ' ಎಂದು ಘೋಷಿಸಿಕೊಳ್ಳುತ್ತಿದ್ದಾರೆ. ಬೆಂಬಲಿಗರೂ ವಿರೋಧಿಗಳೂ ದಿಲ್ಲಿ ಯಾತ್ರೆ, ವರಿಷ್ಠರಿಂದ ಉಪದೇಶ, ಎಚ್ಚರಿಕೆಗಳನ್ನು ಪಡೆಯುತ್ತ, ಮರಳಿ ನಾಡಿಗೆ ಬಂದು ಸಣ್ಣಪುಟ್ಟ ಪಿರಿಪಿರಿ ಮಾಡುತ್ತಲೇ ಮುಂದುವರಿದಿದ್ದಾರೆ. ಭಾವಿ ಮುಖ್ಯಮಂತ್ರಿಯಾಗಲು ತಮ್ಮ ವರಸೆಗಳನ್ನು ಹುರುಪುಗೊಳಿಸಿಕೊಳ್ಳುತ್ತಿರುವ ವಿರೋಧ ಪಕ್ಷದ ವೈವಿಧ್ಯಮಯ ನಾಯಕರು.

ಈ ಮಧ್ಯದಲ್ಲಿ 'ಮುಂದಿನ ಚುನಾವಣೆಯ ಫಲಿತಾಂಶ ನೋಡುತ್ತಿರಿ' ಎಂದು ಜನರ ಕುತೂಹಲ ಕೆರಳಿಸುತ್ತಿರುವ ಮೂರನೇ ಪಕ್ಷವನ್ನೂ ಮರೆಯಬಾರದು.

ಕೋವಿಡ್‌ನಂತಹ ಮಾರಕ ಪಿಡುಗಿನಿಂದ ನರಳುತ್ತಿರುವ ಜನಸಾಮಾನ್ಯರು ತಣ್ಣಗೆ ಆಲೋಚನೆ ಮಾಡುವುದನ್ನು ಕಲಿಯಬೇಕು. ಈ ರೋಗಗಳೇನು ನಮ್ಮ ನಾಡಿಗಷ್ಟೇಯೇ? ನಮ್ಮ ವೈದ್ಯಕೀಯ ಅಚಾತುರ್ಯಗಳಿಂದ ನಡೆದವೇ? ಜಗತ್ತಿನಾದ್ಯಂತ ಹರಡುತ್ತಿರುವ ಪಿಡುಗು ಇದು, ಅಲ್ಲವೇ? ಹಾಗಾಗಿ ರಾಜಕಾರಣಿಗಳ ಕುರಿತು ಜನ ದಿಢೀರ್ ತೀರ್ಪುಗಳನ್ನು ನೀಡಬಾರದು. ರೋಗ ಮತ್ತು ರಾಜಕೀಯ ಎರಡನ್ನೂ ಒಟ್ಟಿಗೇ ಇಟ್ಟು ಮಾತನಾಡಬಾರದು.

ಒಂದು ಕಡೆ, ಲಿಂಗಾಯತರ ಮತ ಕೈತಪ್ಪಿ ಸೋತೆನು ಎಂದು ಕೊರಗುವ ಪಕ್ಷ, ಮತ್ತೊಂದು ಕಡೆ, ಸಾಮ್ರಾಟ್ ಮೋದಿಯವರ ಅಭಯ ಹಸ್ತವಿರುವವರೆಗೆ ನಮಗೇನು ಆತಂಕ ಎಂದು ಬೀಗುವ ಆಳುವ ಪಕ್ಷದ ನಾಯಕರು. ಈ ಎಲ್ಲ ಪಕ್ಷಗಳಿಗೂ ಅವುಗಳದೇ ಆದ ಪ್ರತ್ಯೇಕ ಮಠಗಳಿವೆ, ಗುರುಗಳಿದ್ದಾರೆ. ಪ್ರಜಾತಂತ್ರದ ಬುನಾದಿಯ ಮೇಲೆ ರೂಪಿಸಿದ ಈ ರಾಷ್ಟ್ರವನ್ನು ವ್ಯವಸ್ಥಿತ ಧರ್ಮದಿಂದ ದೂರವಿರಿಸಬೇಕು ಎಂದು ಕನಸು ಕಂಡ ಈ ರಾಷ್ಟ್ರದ ನಾಯಕರನ್ನು ಇಂದು ನೇಪಥ್ಯಕ್ಕೆ ಸರಿಸಿಬಿಟ್ಟಿದ್ದಾರೆ. ಅಂದಿನ ದಿನಗಳ ನೆನಪನ್ನು ಅಲ್ಪಸ್ವಲ್ಪವಾದರೂ ಉಳಿಸಿಕೊಂಡ ತಲೆಮಾರಿನವರಿಗೆ ಒಂದು ಪ್ರಸಂಗ ಖಂಡಿತ ನೆನಪಿರಲೇಬೇಕು.

ನೆಹರೂ ಪ್ರಧಾನಿಯಾಗಿದ್ದ ಅಂದು ಬಾಬು ರಾಜೇಂದ್ರ ಪ್ರಸಾದ್ ರಾಷ್ಟ್ರಪತಿಯಾಗಿದ್ದರು. ಒಮ್ಮೆ ರಾಷ್ಟ್ರಪತಿ ಕಾಶಿಗೆ ತೆರಳಿ ಗಂಗಾ ನದಿಯ ತೀರದಲ್ಲಿ ಕಾಷಾಯವಸ್ತ್ರಧಾರೀ ಸನ್ಯಾಸಿಗಳ ಕಾಲು ತೊಳೆದು ಆಶೀರ್ವಾದ ಪಡೆದರು. ಇದನ್ನು ತಿಳಿದ ನೆಹರೂ, ರಾಷ್ಟ್ರಪತಿ ಅವರೊಡನೆ ಕೊಂಚ ಖಾರವಾಗಿಯೇ ತಮ್ಮ ವಿರೋಧ ವ್ಯಕ್ತಪಡಿಸಿದ್ದರು. ಗಾಂಧೀಜಿ ಕೂಡ ಗುಡಿ, ಮಠಗಳಿಗೆ ಭೇಟಿ ಕೊಡುತ್ತಿರಲಿಲ್ಲ. ಅಪಾರ ದೈವಭಕ್ತರಾದರೂ ಗಾಂಧೀಜಿ ಅವರ ಆರಾಧನೆಯೆಲ್ಲ ಸರ್ವಜನರ ಸಮೂಹದಲ್ಲಿ. ಯಾವ ಕಾಷಾಯವಸ್ತ್ರದ ಸನ್ಯಾಸಿಗೂ ಸೊಪ್ಪು ಹಾಕಿದವರಲ್ಲ.

ತಮ್ಮ ಜಾತಿಯವರನ್ನೇ ಮುಖ್ಯಮಂತ್ರಿ ಮಾಡಬೇಕು, ತಮ್ಮ ಜಾತಿಯವರಿಗೇ ಸಚಿವ ಸ್ಥಾನ ನೀಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ದೊಡ್ಡ ಡೆಲಿಗೇಷನ್ ತೆಗೆದುಕೊಂಡು ದೆಹಲಿಗೂ ಹೋಗಲು ಸಿದ್ಧರಿರುವ ಮಠಾಧಿಪತಿಗಳು ನಮ್ಮ ಸುತ್ತಲಿದ್ದಾರೆ.

ಸದ್ಯದ ಕೊರೊನಾ ಪಿಡುಗು ಇಂದಲ್ಲ ನಾಳೆ ನಶಿಸಬಹುದೆಂಬುದು ಕೇವಲ ನಂಬಿಕೆಯಲ್ಲ, ಖಂಡಿತ ಸತ್ಯ. ಆದರೆ ನಮ್ಮ ರಾಜಕೀಯ ಸ್ಥಿತಿ ಮಾತ್ರ ಇಂದು ನಾಳೆಯಲ್ಲಿ ಸರಿಹೋಗುವುದಿಲ್ಲ. ದುರದೃಷ್ಟವಶಾತ್ ಇಂದಿಗಿಂತ ನಾಳೆ ಮತ್ತೂ ಹದಗೆಡಬಹುದೆಂಬ ಕರುಳ ಆಳದ ಆತಂಕ, ಅಂಜಿಕೆ.

ಈ ಮಧ್ಯೆ ನಿಷ್ಪಕ್ಷಪಾತವಾಗಿ, ವಸ್ತುನಿಷ್ಠವಾಗಿ, ಭವಿಷ್ಯಮುಖಿಯಾಗಿ ಒಂದಷ್ಟು ಚಿಂತನೆಯಲ್ಲಿ ತೊಡಗುವ, ಅಲ್ಪಸಂಖ್ಯಾತರೇ ಆಗಿಬಿಡುತ್ತಿರುವ ಪ್ರಜಾಪ್ರಭುತ್ವವಾದೀ ಜನರ ಪಾಡೇನು ಎಂದು ಈ ಯುಗದ ದೇಶಭಕ್ತರನ್ನು ಕೇಳಿದರೆ, ಅವರ ಉತ್ತರವೂ ಸ್ಪಷ್ಟವಾಗಿರುತ್ತದೆ. 'ಹೀಗೆ ಅನವಶ್ಯಕ ಚಿಂತೆಗಳಲ್ಲಿ ತಲೆಕೆಡಿಸಿಕೊಳ್ಳುವವರಲ್ಲ ನಾವು. ಪ್ರ್ಯಾಕ್ಟಿಕಲ್ ಆಗಿ ಯೋಚಿಸುವವರು. ಮಿಕ್ಕಿದ್ದೆಲ್ಲ ಅವರವರ ಪಾಡು ಅನುಭವಿಸುತ್ತಿರಲಿ ಬಿಡಿ' ಎಂದು ಕೈ ಝಾಡಿಸಿಕೊಂಡು ಬಿಡುವವರು ಅಷ್ಟೇ.

ವಾಚಕರ ವಾಣಿ

ಹೊರಗಿದ್ದರೆ ಪ್ರತಿಭಟಿಸುತ್ತಿದ್ದರೇನೊ!

25 ವರ್ಷಗಳ ಹಿಂದೆ ಪೆಟ್ರೋಲ್ ದರ ಏರಿಕೆಗೆ ದೇಶವ್ಯಾಪಿ ಖಂಡನೆ ವ್ಯಕ್ತವಾಗಿದ್ದ ಸಂಗತಿ ಪ್ರಕಟವಾಗಿದೆ (25 ವರ್ಷಗಳ ಹಿಂದೆ ಅಂಕಣ: ಜುಲೈ 4). ಕೇಂದ್ರ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಹಠಾತ್ತಾಗಿ ಶೇ 25ರಷ್ಟು ಹೆಚ್ಚಿಸಿದ್ದಕ್ಕೆ ದೇಶದಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ವಿವಿಧ ಪಕ್ಷಗಳು ಈ ಕ್ರಮವನ್ನು ಉಗ್ರವಾಗಿ ಖಂಡಿಸಿದ್ದವು ಆಗ. ಏನು ಮಾಡುವುದು, ಆಗ ಪ್ರತಿಭಟಿಸಿದವರಲ್ಲಿ ಸೇರಿದ್ದವರು ಈಗ ಸರ್ಕಾರ ನಡೆಸುತ್ತಿದ್ದಾರೆ. ಹೊರಗಿದ್ದರೆ ಖಂಡಿತ ಉಗ್ರ ಪ್ರತಿಭಟನೆ ನಡೆಸುತ್ತಿದ್ದರೇನೊ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ದೈಹಿಕ ಶಿಕ್ಷಣ: ಮರೆತದ್ದೇಕೆ?

ಸರ್ಕಾರವು ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೋಟ್ಯಂತರ ರೂಪಾಯಿ ಮೌಲ್ಯದ ಪುಸ್ತಕಗಳನ್ನು ಶಾಲಾ ಮಕ್ಕಳಿಗೆ ಒದಗಿಸಿ, 2008ರಿಂದ ಇತರ ವಿಷಯಗಳ ಹಾಗೆ ಪಾಠ ಬೋಧನೆ ಮಾಡಿಸಿ, ಪರೀಕ್ಷೆ ನಡೆಸಿ, ಅಂಕಪಟ್ಟಿಯಲ್ಲಿ ಅಂಕಗಳನ್ನು ದಾಖಲಿಸುತ್ತಿದೆ. ತಾತ್ವಿಕ ಪಾಠಗಳನ್ನು ತರಗತಿ ಕೋಣೆಯಲ್ಲಿಯೂ ಪ್ರಾಯೋಗಿಕ ಪಾಠಗಳನ್ನು ಮೈದಾನದಲ್ಲಿಯೂ ನಡೆಸಲಾಗುತ್ತದೆ. ಪ್ರಸ್ತುತ ಮಕ್ಕಳಿಗೆ 'ಚಂದನ' ವಾಹಿನಿಯಲ್ಲಿ ದೈಹಿಕ ಶಿಕ್ಷಣದ ತಾತ್ವಿಕ ಪಾಠ ಬೋಧನೆಗೆ ಕಾರ್ಯಯೋಜನೆ ರೂಪಿಸದ ಕಾರಣ ಆರೋಗ್ಯ, ಯೋಗ, ಮೌಲ್ಯಶಿಕ್ಷಣ ಮತ್ತು ಆಟಗಳ ವಿಷಯವಾಗಿ ಪಡೆಯಬಹುದಾದ ಬೌದ್ಧಿಕ ಜ್ಞಾನದ ಕಲಿಕೆಯಿಂದ ಅವರು ವಂಚಿತರಾಗಲಿದ್ದಾರೆ. ಚಂದನ ವಾಹಿನಿಯಲ್ಲಿ ಬರುತ್ತಿರುವ ಇತರ ಪಾಠಗಳ ಪಟ್ಟಿಯಲ್ಲಿ ದೈಹಿಕ ಶಿಕ್ಷಣದ ಕಾರ್ಯಕ್ರಮವನ್ನೂ ಅಳವಡಿಸಲು ಮುಂದಾಗಬೇಕು.

ಜಿ.ಪಳನಿಸ್ವಾಮಿ ಜಾಗೇರಿ, ಸೂರಾಪುರ, ಕೊಳ್ಳೇಗಾಲ

ರೈತಪರ ಸಕಾರಾತ್ಮಕ ನಿಲುವು

ರೈತರು ನೇರ ಮಾರಾಟಕ್ಕೆ 'ಸ್ಮಾರ್ಟ್' ಉಪಾಯಗಳನ್ನು ಕಂಡುಕೊಳ್ಳಬೇಕು ಎಂಬ ಪ.ರಾಮಕೃಷ್ಣ ಶಾಸ್ತ್ರಿ ಅವರ ರೈತಪರ ಸಕಾರಾತ್ಮಕ ನಿಲುವುಗಳು (ಸಂಗತ, ಜುಲೈ 4) ಸರಿಯಾಗಿವೆ. 'ಅನ್ನದಾತೊ ಸುಖೀಭವ' ಎಂಬ ಮಾತು ಇಂದು ರೈತರ ಪಾಲಿಗೆ ಸಖ್ಯವಾಗಿ ಉಳಿದಿಲ್ಲ. ಸರ್ಕಾರದ ಪ್ರಮುಖ ಕೃಷಿಪರ ಯೋಜನೆಗಳು ಕೇವಲ ಕಾಗದದ ರೂಪದಲ್ಲಿದ್ದು ಕಾರ್ಯರೂಪಕ್ಕೆ ಬರದೆ ಇರುವುದೂ ಇದಕ್ಕೆ ಕಾರಣವಾಗಿರಬಹುದು.

ಇಸ್ರೇಲ್ ಮಾದರಿಯ ತಂತ್ರಜ್ಞಾನದ ಕುರಿತು ಹಳ್ಳಿಗರಿಗೆ ಮನವರಿಕೆ ಆಗುವಂತಹ ಯೋಜನೆಗಳನ್ನು ಸರ್ಕಾರ ರೂಪಿಸಬೇಕು. ಅನಕ್ಷರಸ್ಥ ರೈತರಿಗೆ ಮಾರುಕಟ್ಟೆಯ ವ್ಯವಹಾರಗಳ ಕುರಿತು ಅರಿವು ಮೂಡಿಸುವ ಕಾರ್ಯಾಗಾರ ನಡೆಸಿ, ಬೆಳೆ ಸಮೀಕ್ಷೆ, ಸಾವಯವ ಕೃಷಿ ಮತ್ತು ತಂತ್ರಜ್ಞಾನ ಬಳಸಿ ಬೆಳೆದ ಬೆಳೆಯನ್ನು ಯಾವ ರೀತಿ ಮಾರುಕಟ್ಟೆಗೆ ತರಬೇಕೆಂಬ ವಿಷಯಗಳನ್ನು ತಿಳಿಸಬೇಕು. ಯಾಕೆಂದರೆ, 'ಒಕ್ಕಲಿಗ ಒಕ್ಕಿದರೆ ನಕ್ಕು ನಲಿಯುವುದು ಜಗವೆಲ್ಲ, ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ' ಎಂಬ ಮಾತಂತೂ ಸತ್ಯ.

ಕೆಂಪಯ್ಯಾ ಕರಿಕಟ್ಟಿ, ಜಾಗನೂರ, ಬೆಳಗಾವಿ

ವಿಕಾರ

'ಲಸಿಕಾ ಅಭಿಯಾನದ ತಲೆಬರಹ
ತಿರುಚಿ ಟ್ರೋಲ್' (ಪ್ರ.ವಾ., ಜೂನ್ 23).
ಶಿವಶಿವಾ! ಹೀಗೂ ಉಂಟೆ? ಪಾಪ,
ಸಂಯುಕ್ತಾ ಬಗೆಗೆ ಶಿವೇತರ,
ಅಯುಕ್ತ ವಿಚಾರ,
ಅಲ್ಲ, ವಿಕಾರ!

ಸಿ.ಪಿ.ಕೆ., ಮೈಸೂರು

ನೇಮಕಾತಿ ಪ್ರಕ್ರಿಯೆ ಸರಳವಾಗಲಿ

ರಾಜ್ಯ ಸರ್ಕಾರದ ವಿವಿಧ ವೃಂದಗಳ ನೇಮಕಾತಿಗಾಗಿ ಅಧಿಸೂಚನೆ ಪ್ರಕಟವಾದ ತಕ್ಷಣ ಆಕಾಂಕ್ಷಿಗಳಲ್ಲಿ ಉತ್ಸಾಹ ಗರಿಗೆದರುವುದು ಸಹಜ. ಆದರೆ ಈ ನೇಮಕಾತಿ ಪ್ರಕ್ರಿಯೆ ನಿಗದಿತ ಅವಧಿಯಲ್ಲಿ ಮುಗಿಯದೆ ಕಾರಣಾಂತರಗಳಿಂದ ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುತ್ತದೆ. ಇದಕ್ಕೆ ಕಾರಣ ನೇಮಕಾತಿ ಪ್ರಕ್ರಿಯೆ ಸರಳವಾಗಿಲ್ಲದಿರುವುದೇ ಆಗಿದೆ. ಆಯ್ಕೆ ಪ್ರಾಧಿಕಾರಗಳು ಆಯ್ಕೆ ಪ್ರಕ್ರಿಯೆ ಮುಗಿಸಿದ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ಕಳಿಸಿಕೊಡುತ್ತವೆ. ಈ ಹಂತದಲ್ಲಿ ಅಭ್ಯರ್ಥಿಗಳಿಗೆ ಹಲವು ಗೊಂದಲಗಳು ಏರ್ಪಡುತ್ತವಲ್ಲದೆ ಅನಗತ್ಯ ಕಿರಿಕಿರಿ ಎದುರಾಗುತ್ತದೆ.

ಜಾತಿ ಸಿಂಧುತ್ವ ಪ್ರಮಾಣಪತ್ರ ಪಡೆಯುವುದು, ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಅಭ್ಯರ್ಥಿ ಹಾಗೂ ವಿದ್ಯಾರ್ಹತೆಗಳ ಅಂಕಪಟ್ಟಿ ನೈಜತೆ ಪರಿಶೀಲನೆ, ಅಭ್ಯರ್ಥಿಗಳ ಗುಣ, ನಡತೆಯ ಬಗೆಗೆ ಪೊಲೀಸ್ ಪರಿಶೀಲನೆ, ವೈದ್ಯಕೀಯ ಅರ್ಹತೆಯ ಪ್ರಮಾಣಪತ್ರ ಇತ್ಯಾದಿಗಳನ್ನು ಪೂರ್ಣಗೊಳಿಸಲು ತಿಳಿಸಲಾಗುತ್ತದೆ. ತಲೆನೋವಿನ ಸಂಗತಿಯೆಂದರೆ, ಈಗಾಗಲೇ ಅನ್ಯ ಇಲಾಖೆಯಲ್ಲಿ ಸರ್ಕಾರಿ ಸೇವೆ ಸಲ್ಲಿಸುತ್ತಿದ್ದು ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವವರೂ ಎಲ್ಲ ದಾಖಲಾತಿಗಳ ಪರಿಶೀಲನೆಗೆ ಮತ್ತೊಮ್ಮೆ ಸಿದ್ಧರಾಗಬೇಕಾಗುತ್ತದೆ. ಇನ್ನು ಸಿಂಧುತ್ವ ಪ್ರಮಾಣಪತ್ರ ಪಡೆಯುವುದು ದೀರ್ಘ ಪ್ರಕ್ರಿಯೆಯಾಗಿದ್ದು ಸೇವಾ ಸಿಂಧು ಪೋರ್ಟಲ್ ಮುಖಾಂತರ ದಾಖಲಾತಿಗಳನ್ನು ಸಲ್ಲಿಸಿದ್ದರೂ ಅನೇಕ ಕಡೆ ಅಧಿಕಾರಿಗಳು ಪದೇಪದೇ ದಾಖಲಾತಿಗಳನ್ನು ಕೇಳುವುದಲ್ಲದೆ ಅನಗತ್ಯ ವಿಳಂಬ ಮಾಡುತ್ತಿದ್ದಾರೆ. ಅಂಕಪಟ್ಟಿ ನೈಜತೆ ಪರಿಶೀಲನೆ ಮಾಡಿಸಿಕೊಳ್ಳುವುದು ವಾಸ್ತವವಾಗಿ ನೇಮಕಾತಿ ಪ್ರಾಧಿಕಾರಗಳ ಕೆಲಸವಾಗಬೇಕು. ಆದರೆ ಅನೇಕ ಇಲಾಖಾ ಮುಖ್ಯಸ್ಥರು ಒಂದು ಪತ್ರ ಬರೆದು ಸುಮ್ಮನಾಗುತ್ತಾರೆ. ವಿದ್ಯಾರ್ಥಿಗಳು ಸ್ವತಃ ಇನ್ನೊಮ್ಮೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಬೇಕು. ಇವೆಲ್ಲವೂ ಅನಗತ್ಯ ವಿಳಂಬಕ್ಕೆ ದಾರಿಯಾಗುತ್ತವೆ.

ಇದನ್ನೆಲ್ಲಾ ತಪ್ಪಿಸಬೇಕಾದರೆ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟವಾದ ನಂತರ ಅದನ್ನು ಪರಿಶೀಲಿಸಲು ಒಂದು ಕೇಂದ್ರೀಕೃತ ಘಟಕಕ್ಕೆ ವರ್ಗಾಯಿಸಬೇಕು. ಸಾಧ್ಯವಾದರೆ ಸರ್ಕಾರವೇ ಘಟಕದ ಮೂಲಕ ದಾಖಲಾತಿಗಳನ್ನು ಆನ್‌ಲೈನ್ ಮುಖಾಂತರ ರಹಸ್ಯವಾಗಿ ಪರಿಶೀಲಿಸಿಕೊಂಡು ಖಚಿತಪಡಿಸಿಕೊಳ್ಳಬೇಕು. ಇದನ್ನು ಒಂದು ನಿರ್ದಿಷ್ಟ ಕಾಲಮಿತಿಯಲ್ಲಿ ಮುಗಿಸಿ ಆನಂತರ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ನೇಮಕಾತಿ ಆದೇಶ ನೀಡಬೇಕು. ನೇಮಕಾತಿ ಪ್ರಾಧಿಕಾರಗಳು ನೇಮಕಾತಿ ಪ್ರಕ್ರಿಯೆಗಾಗಿ ಒಮ್ಮೆ ಹಣಕಾಸು ಇಲಾಖೆಯ ಒಪ್ಪಿಗೆ ಪಡೆದ ನಂತರ ಮತ್ತೆ ಮತ್ತೆ ಒಪ್ಪಿಗೆ ಪಡೆಯುವ ವಿಧಾನದ ಬಗ್ಗೆ ಪರಿಶೀಲನೆ ಅಗತ್ಯ. ಹುದ್ದೆಯೊಂದಕ್ಕೆ ಆಯ್ಕೆಯಾದ ಅಭ್ಯರ್ಥಿ ನೇಮಕಾತಿ ಆದೇಶದ ನಿರೀಕ್ಷೆಯಲ್ಲಿ ವರ್ಷಗಟ್ಟಲೆ ಮನೆಯಲ್ಲಿ ಕೂರುವಂತಾದರೆ ಅದಕ್ಕಿಂತ ಬೇಸರದ ಸಂಗತಿ ಮತ್ತೊಂದಿಲ್ಲ.

ಮಧುಕುಮಾರ ಸಿ.ಎಚ್., ಚಾಮನಹಳ್ಳಿ, ಮದ್ದೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಕರ್ಮಚಾರಿ’ಯನ್ನು ‘ಕರ್ಮಯೋಗಿ’ ಆಗಿಸುವತ್ತ

● ಸಿದ್ದಯ್ಯ ಹಿರೇಮಠ

ಪ್ರಜಾವಾಣಿ ಸಂದರ್ಶನ

ಡಾ.ಆರ್. ಬಾಲಸುಬ್ರಹ್ಮಣ್ಯಂ

ಸರ್ಕಾರಿ ನೌಕರರಲ್ಲಿನ ಸಾಮರ್ಥ್ಯ ಬಲಪಡಿಸಿ ಜನತೆಗೆ ಉತ್ತಮ ಸೇವೆ ಒದಗಿಸಬೇಕು ಎಂಬ ಉದ್ದೇಶದಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ‘ಕರ್ಮಯೋಗಿ’ ಮಿಷನ್ ಅಡಿ ಸಾಮರ್ಥ್ಯ ವೃದ್ಧಿ ಆಯೋಗ (ಕೆಪ್ಯಾಸಿಟಿ ಬಿಲ್ಡಿಂಗ್ ಕಮಿಷನ್) ಸ್ಥಾಪಿಸಲಾಗಿದೆ. ವಿವಿಧ ಕ್ಷೇತ್ರಗಳ ಮೂವರು ‘ಸಮರ್ಥ’ರನ್ನು ಈ ಆಯೋಗದ ಆಯುಕ್ತರನ್ನಾಗಿ ನೇಮಿಸಲಾಗಿದೆ. ಆ ಪೈಕಿ ಒಬ್ಬರು ಕನ್ನಡಿಗರು. ಮೈಸೂರಿನ ಸ್ವಾಮಿ ವಿವೇಕಾನಂದ ಯುಥ್ ಮೂವ್‌ಮೆಂಟ್ ಸಂಸ್ಥೆಯ ಸಂಸ್ಥಾಪಕ, ವೃತ್ತಿಯಿಂದ ವೈದ್ಯರಾಗಿರುವ ಡಾ.ಆರ್. ಬಾಲಸುಬ್ರಹ್ಮಣ್ಯಂ ಅವರೇ ಆ ಹೆಮ್ಮೆಯ ಕನ್ನಡಿಗ. ಆಯೋಗದ ಸ್ವರೂಪ, ಕಾರ್ಯವೈಖರಿ, ಜವಾಬ್ದಾರಿ ಕುರಿತು ‘ಪ್ರಜಾವಾಣಿ’ಗೆ ನೀಡಿರುವ ಸಂದರ್ಶನದಲ್ಲಿ ವಿವರ ನೀಡಿದ್ದಾರೆ.

● ಆಯೋಗದ ಸ್ವರೂಪ ಮತ್ತು ಕಾರ್ಯವೈಖರಿ ಎಂಥದು?

ಮೂರು ಕ್ಷೇತ್ರಗಳ ವಿಷಯ ತಜ್ಞರನ್ನು ಆಯೋಗಕ್ಕೆ ನೇಮಿಸಲಾಗಿದೆ. ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರೂ ಆಗಿರುವ ಆದಿಲ್ ಝೈನುಲ್‌ಭಾಯಿ ಹಂಗಾಮಿ ಅಧ್ಯಕ್ಷರಾಗಿದ್ದಾರೆ. ಗ್ರೇಟರ್ ಮುಂಬೈ ಮಹಾನಗರ ಪಾಲಿಕೆಯ ಆಯುಕ್ತರೂ, ಮಹಾರಾಷ್ಟ್ರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೂ ಆಗಿ ಸೇವೆ ಸಲ್ಲಿಸಿರುವ ಅನುಭವ ಹೊಂದಿರುವ ಹಿರಿಯ ಐಎಎಸ್ ಅಧಿಕಾರಿ ಪ್ರವೀಣ ಪರ್ದೇಶಿ ಮತ್ತು ನಾನು ಸದಸ್ಯರಾಗಿದ್ದೇವೆ.

ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳಿಗೆ ಆರಂಭದಲ್ಲಿ ಸೇವೆ ಮತ್ತು ನೈಪುಣ್ಯ ತರಬೇತಿ ನೀಡಲಾಗುತ್ತದೆ. ಸ್ವಾತಂತ್ರ್ಯಾನಂತರ ಆ ವ್ಯವಸ್ಥೆಯೇ ಮುಂದುವರಿದಿದೆ. ಸೇವೆಯ ಕೆಲ ವರ್ಷಗಳ ನಂತರ ಅವರು ಜನಸಂಪರ್ಕದಿಂದ ದೂರವಾಗುತ್ತಾರೆ. ಆದರೂ ಮಿಡ್ ಕೆರಿಯರ್ ತರಬೇತಿಗೂ, ವಿದೇಶಗಳಿಗೆ ತೆರಳಿ ವಿಧವಿಧವಾದ ತರಬೇತಿ ಪಡೆಯುವುದಕ್ಕೂ ಅವಕಾಶ ಇದೆ. ಆದರೆ, ಆ ಅವಕಾಶ ಜನಸಾಮಾನ್ಯರ ನೇರ ಸಂಪರ್ಕದ ಕ್ಲೆರಿಕಲ್ ಹಂತದಿಂದ ಮೇಲ್ಮಟ್ಟದ ಅಧಿಕಾರಿಗಳಿಗೆ ಇರುವುದಿಲ್ಲ. ಅಂಥ ಸಿಬ್ಬಂದಿಯಲ್ಲೂ ಸೇವಾ ಮನೋಭಾವ ರೂಢಿಸುವ, ‘ನಾನೊಬ್ಬ ಸರ್ಕಾರಿ ನೌಕರ ಅಲ್ಲ, ಸರ್ಕಾರಿ ಸೇವಕ’ ಎಂಬ ಭಾವನೆ ಮೂಡಿಸುವಲ್ಲಿ ಅಗತ್ಯ ತರಬೇತಿ ನೀಡಿ, ಜನರಿಗೆ ನೀಡುವ ಸೇವಾ ವಿಧಾನದಲ್ಲಿ ಪರಿವರ್ತನೆ ತರುವ ಹೊಣೆ ಆಯೋಗದ್ದಾಗಿದೆ.

ನಮ್ಮದು ಇತರ ಆಯೋಗಗಳಂತೆ ಅಧ್ಯಯನ ನಡೆಸಿ ವರದಿ ಸಲ್ಲಿಸುವುದಕ್ಕೆ ಸೀಮಿತವಾಗಿರದೆ, ಅಂದುಕೊಂಡಿದ್ದನ್ನು ಕಾರ್ಯರೂಪಕ್ಕೆ ತರುವ ಶಾಶ್ವತ ಆಯೋಗ. ನೀತಿ ರೂಪಿಸುವ ಸಲಹೆಯನ್ನೂ ಆಯೋಗವು ಪ್ರಧಾನಿ ಕಾರ್ಯಾಲಯಕ್ಕೆ ನೀಡಲಿದೆ. ಮಾನವ ಸಂಪನ್ಮೂಲದ ಲೆಕ್ಕ ಪರಿಶೋಧನೆ ಕಾರ್ಯವನ್ನೂ ಮಾಡಲಿದೆ.



● ತರಬೇತಿಯಿಂದ ಮಾತ್ರ ಪರಿವರ್ತನೆ ಸಾಧ್ಯವೇ?

ಮಾನವ ಸಂಪನ್ಮೂಲ ಬಳಸಿ ಸಂದಿಗ್ಧ ಸ್ಥಿತಿಗಳನ್ನು ನಿರ್ವಹಿಸುವುದು ಸರ್ಕಾರಕ್ಕೆ ಮಾತ್ರ ಸಾಧ್ಯ. ಅದಕ್ಕೆ ಕೋವಿಡ್–19 ಸ್ಥಿತಿ ಸೂಕ್ತ ನಿದರ್ಶನ. ಹಾಗಾಗಿ, ಪ್ರತಿಯೊಬ್ಬ ನೌಕರನ ನೆರವಿನೊಂದಿಗೆ ಜನರ ಜೀವನವನ್ನು ಸುಲಭಗೊಳಿಸುವಲ್ಲಿ ಸರ್ಕಾರದ ಪಾತ್ರ ಮುಖ್ಯ. ಆ ದಿಸೆಯಲ್ಲೇ ತರಬೇತಿ ಅತ್ಯಗತ್ಯ. ಪ್ರತಿ ಸಿಬ್ಬಂದಿಯ ಮನಃ ಪರಿವರ್ತನೆಯೂ ಈ ತರಬೇತಿಯಿಂದ ಸಾಧ್ಯ.

● ಈಗ ಸಮರ್ಪಕ ತರಬೇತಿಯ ಕೊರತೆ ಇದೆಯೇ?

ಹೌದು. ಕೆಳಹಂತದ ನೌಕರರಿಗೆ ಅಗತ್ಯ ಸಂದರ್ಭದ ತರಬೇತಿಯ ಕಲ್ಪನೆಯೇ ಈಗ ಇಲ್ಲ. ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗವಾಗಿ, ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳುವ ಅಧಿಕಾರಿಗಳ, ಸಿಬ್ಬಂದಿಯ ನಿರ್ದಿಷ್ಟ ಪಾತ್ರವನ್ನು ಅರ್ಥೈಸಿಕೊಂಡು, ಕೌಶಲವನ್ನೂ ಗುರುತಿಸಲಾಗುವುದು. ಅವರಲ್ಲಿ ಮನಃ ಪರಿವರ್ತನೆ ತರುವುದು ದೊಡ್ಡ ಸವಾಲು. ಈ ಕಾರ್ಯಕ್ಕೆ ದಶಕವೇ ಬೇಕಾಗಬಹುದು.

ಸರ್ಕಾರಿ ಸೇವೆ ಒದಗಿಸುವ ವೇಳೆ ನಿಯಮಾಧಾರಿತ ವಿಧಾನ (ರೂಲ್ ಬೇಸ್ಡ್) ಕೈಬಿಟ್ಟು ಪಾತ್ರಾಧಾರಿತ (ರೋಲ್ ಬೇಸ್ಡ್) ವಿಧಾನಕ್ಕೆ ಆದ್ಯತೆ ನೀಡುವಂತಾಗಬೇಕು. ಪ್ರತಿ ನೌಕರ ತನ್ನ ಹೊಣೆ ಅಥವಾ ಪಾತ್ರಕ್ಕೆ ಅನುಗುಣವಾಗಿ ವರ್ತಿಸುವುದೂ ಮುಖ್ಯ. ಆರಂಭಿಕ ಹಂತದಲ್ಲಿ ಕೇಂದ್ರ ಸರ್ಕಾರದ 51 ಇಲಾಖೆಗಳಲ್ಲಿನ ನಾಗರಿಕ ಸಂಪರ್ಕದಲ್ಲಿರುವ ಸಿಬ್ಬಂದಿಗೆ ಕಡ್ಡಾಯ ತರಬೇತಿ ನೀಡಲಾಗುತ್ತದೆ. ತರಬೇತಿ ಸಂಸ್ಥೆಗಳಿಗೂ ಹೊಸ ರೂಪ ನೀಡಿ, ಆಯಾ ಇಲಾಖಾವಾರು ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಸಾಮರ್ಥ್ಯ ವೃದ್ಧಿಸುವ ಆಲೋಚನೆ ಇದೆ. ಪ್ರಜಾಕೇಂದ್ರಿತ ಆಡಳಿತ ವ್ಯವಸ್ಥೆಯ ಜಾರಿಯೇ ಆಯೋಗದ ಗುರಿ.

● ಆಯೋಗ ತರಲು ಹೊರಟಿರುವ ಪರಿವರ್ತನೆ ಎಂಥದು?

ಇದುವರೆಗೂ ಕೆಳಹಂತದ ಸಿಬ್ಬಂದಿಗೆ ನಿರ್ದಿಷ್ಟ ತರಬೇತಿ ದೊರೆತಿಲ್ಲ. ಮನಃ ಪರಿವರ್ತಿಸುವ ಕೆಲಸಗಳೇ ಆಗಿಲ್ಲ. ಜೊತೆಗೆ ನಮ್ರತೆ, ವಿನಮ್ರತೆಯನ್ನೂ, ರಾಷ್ಟ್ರಸೇವೆಯ ಪರಿಕಲ್ಪನೆಯನ್ನೂ ಅಳವಡಿಸಿಕೊಳ್ಳಬೇಕು. ‘ನಾನೊಬ್ಬ ನೌಕರ’ ಎಂಬ ಪರಿಕಲ್ಪನೆ ಬಿಟ್ಟು ‘ನಾನೊಬ್ಬ ಸೇವಕ’ ಎಂದೇ ಭಾವಿಸುವಂತೆ ಪ್ರೇರೇಪಿಸಲಾಗುವುದು.

ದೇಶದಾದ್ಯಂತ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ 739 ತರಬೇತಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ನಾಯಕತ್ವ ತರಬೇತಿ ನೀಡುವವರು ಸಾಮಾನ್ಯವಾಗಿ ಒಂದೇ ರೀತಿಯ ತರಬೇತಿ ನೀಡುತ್ತಾರೆ. ಅಂಥವರನ್ನು ಬಿಡಿಬಿಡಿಯಾಗಿ ಬಳಸಿಕೊಳ್ಳದೆ, ಎಲ್ಲರಿಗೂ ಉಪಯುಕ್ತವಾಗುವಂತೆ ಬಳಸಿಕೊಳ್ಳುವುದೂ ನಮ್ಮ ಉದ್ದೇಶ.

ಮುಖ್ಯವಾಗಿ ಯಾವುದೇ ವಿಷಯದ ಕುರಿತು ಉದಾಹರಣೆ ನೀಡುವಾಗ ಸ್ಥಳೀಯ ವಿವರಣೆ ಒಳಗೊಂಡ ನಮ್ಮ ಅನುಭವಗಳನ್ನೇ ಬೋಧಿಸುವ ಅಗತ್ಯವಿದೆ. ಸವಾಲು ಸ್ವೀಕರಿಸಿ ಸಾಧಿಸಿ ತೋರಿದವರ ನಿದರ್ಶನವನ್ನೇ ನೀಡುವ ಜ್ಞಾನ ಭಂಡಾರ ಸೃಷ್ಟಿಸುವ ಕೆಲಸ ಆಗಬೇಕಿದೆ. ಆ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖವಾಗಿದ್ದೇವೆ.

● ತರಬೇತುದಾರರ ಪಾತ್ರ ಮತ್ತು ಸಾಮರ್ಥ್ಯ ಏನು?

ತರಬೇತುದಾರನ ಹುದ್ದೆ ಎಂದರೆ ಕಾಟಾಚಾರದ ಹುದ್ದೆ, ನಿರ್ಲಕ್ಷಿತ ಹುದ್ದೆ ಎಂಬ ಕಲ್ಪನೆ ಇದೆ. ತರಬೇತುದಾರ ಮಹಾನ್ ವ್ಯಕ್ತಿ ಎಂಬ ಭಾವನೆ ಮೂಡುವಂತಾಗಬೇಕು. ಅವರ ಆತ್ಮವಿಶ್ವಾಸ ವೃದ್ಧಿಸಿ, ಅವರ ನೆರವಿನಿದಲೇ ಮೂರು ಹಂತದ ಸಾಮರ್ಥ್ಯ ವೃದ್ಧಿಯ ಕಾರ್ಯ ಮಾಡುತ್ತೇವೆ. ವೈಯಕ್ತಿಕ ಹಂತ, ಇಲಾಖಾ ಹಂತ ಮತ್ತು ಸರ್ಕಾರಿ ಹಂತ ನಮ್ಮ ಗುರಿ. ಪ್ರತಿ ನೌಕರನ ದಕ್ಷತೆಯ ಮೌಲ್ಯಮಾಪನವನ್ನೂ ತಂತ್ರಜ್ಞಾನ ಬಳಸಿ ಮಾಡಲಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಡಾ.ಆರ್. ಬಾಲಸುಬ್ರಹ್ಮಣ್ಯಂ

● ಆಯೋಗ ಮತ್ತೆ ಯಾವ ಗುರಿ ಇರಿಸಿಕೊಂಡಿದೆ?

ವಿವಿಧ ವಿಷಯಗಳ ಕುರಿತ ಚರ್ಚೆಗೆ ಜಗತ್ತಿನಾದ್ಯಂತ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ. ಆದರೆ, ಮಾನವ ಸಂಪನ್ಮೂಲದ ಸದ್ಬಳಕೆಗೆ ತರಲಾದ ಸುಧಾರಣೆ ಕುರಿತು ಚರ್ಚಿಸಲು ಜಾಗತಿಕ ಸಮಾವೇಶ ಏರ್ಪಡಿಸುವುದು ನಮ್ಮ ಗುರಿ. ಭವಿಷ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ಸಾಮರ್ಥ್ಯ ಹೆಚ್ಚಳಕ್ಕೆ ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕೆಂಬುದೇ ಈ ಸಮಾವೇಶದ ಉದ್ದೇಶ. ಆ ಮಾದರಿಯ ಸಮಾವೇಶ ಜಗತ್ತಿನಲ್ಲೇ ಪ್ರಥಮ ಎಂಬುದೂ ವಿಶೇಷ. ಜನರು ಮತ್ತು ನೌಕರರು ಏನನ್ನು ಬಯಸುತ್ತಾರೆ ಎಂಬುದನ್ನೂ ಸಮೀಕ್ಷೆ ಮೂಲಕ ಕಂಡುಕೊಳ್ಳುತ್ತೇವೆ.

● ಭ್ರಷ್ಟಾಚಾರ ಕೊನೆಗಾಣಿಸುವ ಉದ್ದೇಶವೂ ಇದೆಯೇ?

ಭ್ರಷ್ಟಾಚಾರದ ಬಗ್ಗೇ ಮಾತನಾಡುವುದು ನಕಾರಾತ್ಮಕವಾದ ವಿಚಾರ. ಹಾಗಾಗಿ, ಸಕಾರಾತ್ಮಕತೆಯೇ ನಮ್ಮ ಆಲೋಚನೆ. ನಾವು ಸದ್ವಿಚಾರ, ಸದ್ಭಾವನೆ, ಸದ್ಮೌಲ್ಯಗಳನ್ನು ಹೊಂದಿರುವ ಮನಃಸ್ಥಿತಿಯನ್ನು ರೂಪಿಸಿದಲ್ಲಿ ಇಂದಲ್ಲ ನಾಳೆ ವ್ಯವಸ್ಥೆಯೇ ಬದಲಾಗುತ್ತದೆ. ಆ ದಿಸೆಯಲ್ಲಿ ಇರಿಸಲಾದ ಮೊದಲ ಹೆಜ್ಜೆ ಇದಾಗಿದೆ. ಈಗಿರುವ ಭ್ರಷ್ಟ ವ್ಯವಸ್ಥೆಯಿಂದ ಲಾಭ ಪಡೆಯುವವರು ಇದನ್ನು ವಿರೋಧಿಸುತ್ತಾರೆ. ನಮ್ಮ ವೈಫಲ್ಯ ಬಯಸುತ್ತಾರೆ. ಪ್ರತಿ ನೌಕರನನ್ನೂ ‘ಕರ್ಮಚಾರಿ’ ಎಂಬ ಧೋರಣೆಯಿಂದ ‘ಕರ್ಮಯೋಗಿ’ ಎಂಬ ಧೋರಣೆಯತ್ತ ಕೊಂಡೊಯ್ಯುವುದೇ ನಮ್ಮ ಉದ್ದೇಶ.

ಸಾಮರ್ಥ್ಯ ವೃದ್ಧಿ ಆಯೋಗ

ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರುವ ಉದ್ದೇಶ ಹೊಂದಿರುವ ಕೇಂದ್ರ ಸರ್ಕಾರ, ಈ ಸಂಬಂಧ ಮಹತ್ವದ ಹೆಜ್ಜೆ ಇರಿಸಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಕೂಸು.

ಅಖಿಲ ಭಾರತ ಸೇವಾ ವ್ಯಾಪ್ತಿಯ ಅಧಿಕಾರಿಗಳು ಹಾಗೂ ಇತರ ಸಿಬ್ಬಂದಿಯ ಕೌಶಲ, ದಕ್ಷತೆ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ನಾಗರಿಕ ಸೇವಾ ಸಾಮರ್ಥ್ಯ ವೃದ್ಧಿಯ ರಾಷ್ಟ್ರೀಯ ಕಾರ್ಯಕ್ರಮ (ನ್ಯಾಷನಲ್ ಪ್ರೋಗ್ರಾಂ ಫಾರ್ ಸಿವಿಲ್ ಸರ್ವೀಸಸ್ ಕೆಪಾಸಿಟಿ ಬಿಲ್ಡಿಂಗ್) ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಈ ಯೋಜನೆಗೆ ‘ಮಿಷನ್ ಕರ್ಮಯೋಗಿ’ ಎಂಬ ಹೆಸರನ್ನು ಇರಿಸಲಾಗಿದೆ.

ಈ ರಾಷ್ಟ್ರೀಯ ಯೋಜನೆಗೆ ಕೇಂದ್ರ ಸಚಿವ ಸಂಪುಟದ ಅನುಮೋದನೆ ದೊರೆತಿದ್ದು, ಇದರ ಮೇಲುಸ್ತುವಾರಿಗಾಗಿ ಸಾಮರ್ಥ್ಯ ವೃದ್ಧಿ ಆಯೋಗವನ್ನು (ಕೆಪ್ಯಾಸಿಟಿ ಬಿಲ್ಡಿಂಗ್ ಕಮಿಷನ್) ರಚಿಸಲಾಗಿದೆ.

ನಾಗರಿಕ ಸೇವೆಯಲ್ಲಿರುವ ಅಧಿಕಾರಿ, ಸಿಬ್ಬಂದಿಯ ಸಾಮರ್ಥ್ಯ ವೃದ್ಧಿಗಾಗಿ ಯೋಜನೆ ಅಡಿ ರೂಪಿಸಲಾಗುವ ಕಾರ್ಯಕ್ರಮಗಳನ್ನು ಈ ಆಯೋಗವು ಪರಿಶೀಲಿಸಿ, ಸಮ್ಮತಿ ನೀಡಲಿದೆ. ಸಿಬ್ಬಂದಿಗೆ ಒದಗಿಸುವ ತರಬೇತಿಯಲ್ಲಿ ಏಕರೂಪದ ವಿಧಾನ ಜಾರಿಗೊಳಿಸುವುದು ಹಾಗೂ ಸಹಕಾರ ತತ್ವದ ಆಧಾರದಲ್ಲಿ ಸಾಮರ್ಥ್ಯ ವೃದ್ಧಿಸುವ ವ್ಯವಸ್ಥೆಯನ್ನು ಈ ಆಯೋಗ ನಿರ್ವಹಿಸಲಿದೆ.

ಆರಂಭಿಕ ಹಂತದಲ್ಲಿ ಕೇಂದ್ರ ಸರ್ಕಾರದ ಅಂದಾಜು 50 ಲಕ್ಷ ಸಿಬ್ಬಂದಿಯ ಸಾಮರ್ಥ್ಯ ವೃದ್ಧಿಗೆ ಆಯೋಗವು ಕ್ರಮ ಕೈಗೊಳ್ಳಲಿದೆ. ಆಯಾ ರಾಜ್ಯ ಸರ್ಕಾರಗಳೂ ಆಯೋಗದ ಸಲಹೆ– ಸಹಕಾರದ ಮೂಲಕ ತನ್ನ ನೌಕರರ ಸಾಮರ್ಥ್ಯ ವೃದ್ಧಿಗೂ ಮುಕ್ತ ಅವಕಾಶ ಕಲ್ಪಿಸಲಿದೆ.

ಉತ್ತರ ಪ್ರದೇಶ ಚುನಾವಣೆ

ವಿಪಕ್ಷ ಒಡಕು ಬಿಜೆಪಿಗೆ ಲಾಭ

● ಆನಂದ್ ಮಿಶ್ರಾ

ನವದೆಹಲಿ: ಕೋವಿಡ್–19ರ ಎರಡನೇ ಅಲೆಯ ನಂತರ ತೀವ್ರ ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರಕ್ಕೆ, ವಿರೋಧ ಪಕ್ಷಗಳಲ್ಲಿನ ಭಿನ್ನಮತವು ಲಾಭವಾಗಿ ಒದಗಿಬಂದಿದೆ.

ವಿರೋಧ ಪಕ್ಷಗಳ ಮುಖಂಡರು ಪರಸ್ಪರರ ವಿರುದ್ಧ ನೀಡುತ್ತಿರುವ ಹೇಳಿಕೆಗಳು ಆಡಳಿತಾರೂಢರ ಪಾಲಿಗೆ ಬೆಳ್ಳಿ ರೇಖೆಯೇ ಆಗಿದೆ.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಅಥವಾ ಬಹುಜನ ಸಮಾಜವಾದಿ ಪಕ್ಷ (ಬಿಎಸ್‌ಪಿ) ಸಖ್ಯ ಇಲ್ಲದೆಯೂ ಚುನಾವಣೆಗೆ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷವು ಶಕ್ತವಾಗಿದೆ ಎಂದು ಕಾಂಗ್ರೆಸ್ ಹೇಳಿದೆ. ಬಿಎಸ್‌ಪಿಯು ಬಿಜೆಪಿಯ ‘ಬಿ’ ತಂಡ ಎಂದೂ ಆರೋಪಿಸಿದೆ.

ಇದಕ್ಕೆ ತಿರುಗೇಟು ನೀಡಿರುವ ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ, ಕಾಂಗ್ರೆಸ್ ಪದದಲ್ಲಿರುವ ಮೊದಲ ಅಕ್ಷರ ‘ಸಿ’ ಎಂದರೆ ಕುಯುಕ್ತಿ (ಕನ್ನಿಂಗ್) ಎಂದು ಜರೆದಿದ್ದಾರೆ. ‘ಉತ್ತರಪ್ರದೇಶದಲ್ಲಿ ದಯನೀಯ ಸ್ಥಿತಿಯಲ್ಲಿರುವ ಕಾಂಗ್ರೆಸ್‌ನ ಈ ಹೇಳಿಕೆ ಆಕ್ಷೇಪಾರ್ಹವಾದುದು. ಬಿಎಸ್‌ಪಿ ಎಂದರೆ ಬಹುಜನ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗದವರು ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರು. ಇವರ ಸಂಖ್ಯೆಯೇ ಹೆಚ್ಚಿರುವುದರಿಂದ ಅವರೆಲ್ಲ ಬಹುಜನ’ ಎಂದಿದ್ದಾರೆ.

ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಸಮಾಜವಾದಿ ಈ ಮೂರೂ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದ ಮಾಯಾವತಿ, ಇದೀಗ, ‘ಈ ಮೂರು ಪಕ್ಷಗಳು ಅಧಿಕಾರದಲ್ಲಿ ಇದ್ದುದೇ ಆದಲ್ಲಿ ಉತ್ತರಪ್ರದೇಶದಲ್ಲಿ ಯಾವ ಚುನಾವಣೆಯೂ ಮುಕ್ತ ಹಾಗೂ ಪಾರದರ್ಶಕವಾಗಿ ನಡೆಯಲಾರದು’ ಎಂದಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಜೊತೆಗೆ ಹಾಗೂ 2017ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದ ಸಮಾಜವಾದಿ ಪಕ್ಷವು, ಈ ಬಾರಿ ಯಾವುದೇ ಪ್ರಮುಖ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೇ ಇರಲು ನಿರ್ಧರಿಸಿದ್ದಾಗಿ ಪ್ರಕಟಿಸಿದೆ.

ಕಳೆದ 15 ವರ್ಷಗಳಲ್ಲಿ ಈ ನಾಲ್ಕೂ ಪಕ್ಷಗಳ ಬಲಾಬಲವನ್ನು ಗಮನಿಸುವುದಾದರೆ, ಕಳೆದ ಮೂರು ಚುನಾವಣೆಗಳಲ್ಲಿ (2014, 2019ರ ಲೋಕಸಭಾ ಚುನಾವಣೆಯಲ್ಲಿ ಹಾಗೂ 2017ರ ವಿಧಾನಸಭಾ ಚುನಾವಣೆ) ಮತ ಗಳಿಕೆಯ ಪ್ರಮಾಣದಲ್ಲಿ ಬಿಜೆಪಿಯೇ ಮುಂದಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಶೇ 40ರಷ್ಟು ಮತಗಳೊಂದಿಗೆ ಗೆಲುವು ಸಾಧಿಸಿದ್ದರೆ, 2019ರ ಲೋಕಸಭಾ ಚುನಾವಣೆ ಹೊತ್ತಿಗೆ ಈ ಪ್ರಮಾಣವನ್ನು ಶೇ 50ಕ್ಕೆ ಹೆಚ್ಚಿಸಿಕೊಂಡಿತು.

2007ರಲ್ಲಿ ಶೇ 30ರಷ್ಟು ಮತ ಗಳಿಸಿದ್ದ ಬಿಎಸ್‌ಪಿ ಮತ್ತು ಸಮಾಜವಾದಿ ಪಕ್ಷಗಳ ಮತ ಗಳಿಕೆ ಸಾಮರ್ಥ್ಯ ಆನಂತರ ಕ್ಷೀಣಿಸುತ್ತಲೇ ಬಂದಿದೆ.

ಮುಂಬರುವ ಚುನಾವಣೆಯಲ್ಲಿ ಎಸ್‌ಪಿ, ಬಿಎಸ್‌ಪಿ, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳಲ್ಲಿನ ಚತುಷ್ಕೋನ ಸ್ಪರ್ಧೆ ಖಚಿತವೇ ಆದಲ್ಲಿ, ಶೇ 30ರಿಂದ ಶೇ 35ರಷ್ಟು ಮತ ಪಡೆದ ಯಾವುದೇ ಪಕ್ಷವು ಅಧಿಕಾರಕ್ಕೆ ಬರಲು ದಾರಿಯಾಗುತ್ತದೆ.

2012ರಲ್ಲಿ 47 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿ, 2017ರ ಚುನಾವಣೆಯಲ್ಲಿ 312 ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಹೆಚ್ಚುಕಡಿಮೆ ಶೇ 40ರಷ್ಟು ಮತಗಳನ್ನು ಬಿಜೆಪಿಯೊಂದೇ ಪಡೆದಿತ್ತು. 2012ರ ಚುನಾವಣೆಯಲ್ಲಿ ಬಿಎಸ್‌ಪಿ ಶೇ 26ರಷ್ಟು ಹಾಗೂ ಎಸ್‌ಪಿ ಶೇ 29ರಷ್ಟು ಮತ ಗಳಿಸಿದ್ದವು. ಆದರೆ, 2017ರಲ್ಲಿ ಎರಡೂ ಪಕ್ಷಗಳು ಸರಿಸುಮಾರು ಶೇ 22ರಷ್ಟು ಮತ ಪಡೆಯಲಷ್ಟೇ ಶಕ್ತವಾಗಿದ್ದವು. ಕಾಂಗ್ರೆಸ್ ಪಡೆದ ಮತಗಳ ಪ್ರಮಾಣ ಶೇ 12ರಿಂದ ಶೇ 6.25ಕ್ಕೆ ಇಳಿದಿತ್ತು.

2019ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಯು ಶೇ 50ರಷ್ಟು ಮತ ಪಡೆದಿದ್ದರೆ, ಬಿಎಸ್‌ಪಿ ಶೇ 20ಕ್ಕಿಂತ ಹಾಗೂ ಎಸ್‌ಪಿ ಶೇ 18ಕ್ಕಿಂತ ಕಡಿಮೆ ಮತ ಪಡೆದಿವೆ.

2014ರ ಲೋಕಸಭಾ ಚುನಾವಣೆಯಲ್ಲಿಯೂ ಬಿಜೆಪಿ ಸುಮಾರು ಶೇ 42.5ರಷ್ಟು ಮತ ಪಡೆದಿದ್ದರೆ, ಎಸ್‌ಪಿ ಹಾಗೂ ಬಿಎಸ್‌ಪಿ ಕ್ರಮವಾಗಿ ಶೇ 22 ಹಾಗೂ ಶೇ 20ರಷ್ಟು ಮತ ಗಳಿಸಿದ್ದವು. ಕಾಂಗ್ರೆಸ್ ಮತ ಗಳಿಕೆಯ ಪ್ರಮಾಣ ಶೇ 7.5ರಷ್ಟಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಲು ಬಿಜೆಪಿ ಹೊರಟಿದೆ. ಆದರೆ ನಮ್ಮ ಪೂರ್ವಜರು ಭಾರತವನ್ನು ಮುಸ್ಲಿಂ ರಾಷ್ಟ್ರವನ್ನಾಗಿ ಮಾಡುವ ಕನಸು ಕಂಡಿದ್ದರು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳಿದ್ದಾರೆ ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ರಾಹುಲ್ ಅವರು ಈ ಬಗ್ಗೆ ಟ್ವೀಟ್ ಮಾಡಿದ್ದು, ಆ ಟ್ವೀಟ್ ಅನ್ನು ಎಬಿಪಿ ನ್ಯೂಸ್ ತನ್ನ ಬುಲೆಟಿನ್‌ನಲ್ಲಿ ತೋರಿಸಿದೆ ಎಂದು ಹಲವರು ಸ್ಕ್ರೀನ್‌ಶಾಟ್ ಹಂಚಿಕೊಂಡಿದ್ದಾರೆ.

‘ಪೌರತ್ವ ತಿದ್ದುಪಡಿ ಮಸೂದೆಯು ಸಂವಿಧಾನದ ಮೇಲಿನ ದಾಳಿ’ ಎಂದು 2019ರ ಡಿಸೆಂಬರ್ 10ರಂದು ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದರು. ಆ ಟ್ವೀಟ್ ಅನ್ನು ಎಬಿಪಿ ನ್ಯೂಸ್ ತನ್ನ ಸುದ್ದಿ ಬುಲೆಟಿನ್‌ನಲ್ಲಿ ಪ್ರಕಟಿಸಿತ್ತು. ಆ ಸುದ್ದಿ ಬುಲೆಟಿನ್‌ನ ವಿಡಿಯೊ ಎಬಿಪಿ ನ್ಯೂಸ್‌ನ ಯುಟ್ಯೂಬ್ ಚಾನಲ್‌ನಲ್ಲಿ ಇನ್ನೂ ಲಭ್ಯವಿದೆ. ಎಬಿಪಿ ನ್ಯೂಸ್‌ನ ಸುದ್ದಿ ಬುಲೆಟಿನ್ ಅನ್ನು ಸ್ಕ್ರೀನ್‌ಶಾಟ್ ಮಾಡಿ, ಅದರಲ್ಲಿನ ಪಠ್ಯವನ್ನು ಮಾತ್ರ ಬದಲಿಸಲಾಗಿದೆ. ಮೂಲ ವಿಡಿಯೊ ಮತ್ತು ವೈರಲ್ ಆಗಿರುವ ಸ್ಕ್ರೀನ್‌ಶಾಟ್‌ನಲ್ಲಿರುವ ಅಕ್ಷರಗಳ ವಿನ್ಯಾಸ ಬೇರೆ-ಬೇರೆಯಾಗಿದೆ. ಹೀಗೆ ಸ್ಕ್ರೀನ್‌ಶಾಟ್ ಅನ್ನು ತಿರುಚುವ ಮೂಲಕ ರಾಹುಲ್ ಗಾಂಧಿ ಅವರ ಬಗ್ಗೆ ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮುದುಕನ ಹೆಂಡತಿಯ ಕಷ್ಟ

ತಾವು ಕಟ್ಟಿಕೊಂಡ ಆಶ್ರಮದಲ್ಲಿ ವೆಸ್ಸಂತರ ಬೋಧಿಸತ್ವ ಮತ್ತು ಮಾದ್ರಿ ತಮ್ಮ ಮಕ್ಕಳೊಂದಿಗೆ ಏಳು ತಿಂಗಳುಗಳ ಕಾಲ ಬದುಕಿದರು. ಮಾದ್ರಿ ದಿನನಿತ್ಯ ಮಕ್ಕಳಿಗೆ ಸ್ನಾನ ಕರ್ಮಗಳನ್ನು ಮಾಡಿಸಿ, ಆಶ್ರಮವನ್ನು ಸ್ವಚ್ಛಗೊಳಿಸಿ, ಮಕ್ಕಳನ್ನು ತಂದೆಯ ಬಳಿಗೆ ಬಿಟ್ಟು ತಾನು ಬಿದಿರಿನ ಬುಟ್ಟಿ ಹಿಡಿದು ಹಣ್ಣು ಗಡ್ಡೆಗಳನ್ನು ತರಲು ಹೋಗುತ್ತಿದ್ದಳು. ಸಂಜೆಯ ಹೊತ್ತಿಗೆ ಮರಳಿ ಬಂದು ಮತ್ತೆ ಮಕ್ಕಳಿಗೆ ಸ್ನಾನ ಮಾಡಿಸಿ, ತಾನೂ ಮಾಡಿ, ತಂದ ಗೆಡ್ಡೆ-ಗೆಣಸು ಮತ್ತು ಹಣ್ಣುಗಳನ್ನು ಎಲ್ಲರಿಗೂ ಹಂಚುತ್ತಿದ್ದಳು. ನಾಲ್ಕೂ ಜನ ಸೇರಿ ಅವನ್ನೇ ತಿಂದು ತೃಪ್ತಿಯಿಂದಿರುತ್ತಿದ್ದರು. ನಂತರ ಮಕ್ಕಳನ್ನು ಕರೆದುಕೊಂಡು ತನ್ನ ಆಶ್ರಮಕ್ಕೆ ಹೋಗಿ ಮಲಗುತ್ತಿದ್ದಳು. ಇದೇ ನಿತ್ಯದ ದಿನಚರಿಯಾಗಿತ್ತು.

ಈ ಸಮಯದಲ್ಲಿ ಕಳಿಂಗ ರಾಷ್ಟ್ರದ ದುನ್ನಿವಿಟ್ಠ ಎಂಬ ಗ್ರಾಮದಲ್ಲಿ ಪೂಜಕ ಎಂಬ ಬ್ರಾಹ್ಮಣನಿದ್ದ. ಅವನಿಗಾಗಲೇ ಸಾಕಷ್ಟು ವಯಸ್ಸಾಗಿತ್ತು. ಆತ ಭಿಕ್ಷೆ ಬೇಡಿ ನೂರು ಕಹಾಪಣಗಳನ್ನು ಸಂಗ್ರಹ ಮಾಡಿದ್ದ. ಮತ್ತಷ್ಟು ಹಣ ಕೂಡಿಸಲೆಂದು ಬೇರೊಂದು ರಾಜ್ಯಕ್ಕೆ ಹೋಗುವಾಗ ತನ್ನಲ್ಲಿದ್ದ ಹಣವನ್ನು ಮತ್ತೊಬ್ಬ ಬ್ರಾಹ್ಮಣನ ಕಡೆಗೆ ಕೊಟ್ಟು ಹೋದ. ಹಣ ತೆಗೆದುಕೊಂಡ ಬ್ರಾಹ್ಮಣನಿಗೆ ಯಾವುದೋ ಆಪತ್ತು ಬಂದು ಹಣ ಬೇಕಾಯಿತು. ಆತ ಅನಿವಾರ್ಯವಾಗಿ ಪೂಜಕ ಬ್ರಾಹ್ಮಣನ ಹಣವನ್ನು ಬಳಸಿಕೊಂಡುಬಿಟ್ಟ. ಮುದುಕ ಪೂಜಕ ಬ್ರಾಹ್ಮಣ ಮರಳಿ ಬಂದು ತನ್ನ ಹಣವನ್ನು ಕೇಳಿದ. ತಾನು ಬಳಸಿದ್ದ ನೂರು ಕಹಾಪಣಗಳನ್ನು ಮರಳಿ ಕೊಡಲು ಅಸಮರ್ಥನಾದ ಕಾರಣ ಆತ ಸುಂದರ ತರುಣಿಯಾದ ಅಮಿತ್ರತಾಪನಳೆಂಬ ತನ್ನ ಮಗಳನ್ನು ಪೂಜಕನಿಗೆ ಮದುವೆ ಮಾಡಿ ಕೊಟ್ಟುಬಿಟ್ಟ. ಆತ ಅವಳನ್ನು ಕರೆದುಕೊಂಡು ಮರಳಿ ಕಳಿಂಗ ರಾಷ್ಟ್ರದ ದುನಿವಿಟ್ಠಕ್ಕೆ ಬಂದು ವಾಸಿಸತೊಡಗಿದ. ಪಾಲಿಗೆ ಬಂದದ್ದೇ ಪಂಚಾಮೃತವೆಂದುಕೊಂಡು ಅಮಿತ್ರತಾಪನಳು ಮುದಿಗಂಡನ ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದಳು. ಆಕೆಯ ನಡೆಗಳನ್ನು ಕಂಡ ನಗರದ ತರುಣ ಬ್ರಾಹ್ಮಣರು ತಮ್ಮ ಹೆಂಡಂದಿರನ್ನು ಟೀಕಿಸುತ್ತಿದ್ದರು. ‘ಆ ಅಮಿತ್ರತಾಪನಳು, ತನ್ನ ಗಂಡ ಮುದಿಯನಾಗಿದ್ದರೂ ಅದೆಷ್ಟು ಪ್ರೀತಿಯಿಂದ, ಗೌರವದಿಂದ ಸೇವಿಸುತ್ತಾಳೆ. ಆಕೆಯಿಂದ ನೋಡಿ ಕಲಿಯಿರಿ. ನಿಮಗೆಲ್ಲ ಆಕೆಯೊಂದು ಮಾದರಿ’ ಎನ್ನುತ್ತಿದ್ದರು. ಈ ಮಾತುಗಳನ್ನು ಕೇಳಿ ಕೇಳಿ ಆ ತರುಣಿಯರು ಒಟ್ಟಾಗಿ ಮಾತನಾಡಿಕೊಂಡರು. ‘ಯಾಕೋ, ಈ ಅಮಿತ್ರತಾಪನಳ ಪ್ರಭಾವ ಹೆಚ್ಚಾಯಿತು. ಆಕೆಯಿಂದಾಗಿ ನಾವು ನಮ್ಮ ಗಂಡಂದಿರ ಟೀಕೆ ಕೇಳಬೇಕಾಗಿದೆ ಅವಳನ್ನು ಹೇಗಾದರೂ ಮಾಡಿ ಈ ಗ್ರಾಮದಿಂದ ಓಡಿಸಿಬಿಡೋಣ’ ಎಂದು ಆಲೋಚನೆ ಮಾಡಿದರು. ಮರುದಿನದಿಂದ ನದಿಗೆ, ದೇವಸ್ಥಾನಕ್ಕೆ ಹೋದಾಗ ಅವಳನ್ನು ಕಂಡು ಅಪಹಾಸ್ಯ ಮಾಡತೊಡಗಿದರು. ‘ಅಯ್ಯೋ, ನಿನ್ನ ತಂದೆ-ತಾಯಿಯರಂಥ ಶತ್ರುಗಳು ಯಾರೂ ಇರಲಾರರು. ಅದಕ್ಕೇ ಈ ಮುದಿಗಂಡನಿಗೆ ನಿನ್ನಂಥ ಸುಂದರಿಯನ್ನು ಕಟ್ಟಿಬಿಟ್ಟದ್ದಾರೆ. ನೀನೊಬ್ಬ ತರುಣನನ್ನು ಮದುವೆಯಾಗಿದ್ದರೆ ಅದೆಷ್ಟು ಸಂತೋಷ ಪಡುತ್ತಿದ್ದೆ? ಈ ಮುದಿಗಂಡನ ಜೊತೆಗೆ ಕ್ರೀಡೆಯೂ ಸಾಧ್ಯವಿಲ್ಲ, ರತಿಕ್ರೀಡೆಯೂ ಸಾಧ್ಯವಿಲ್ಲ. ಅವನೊಂದಿಗೆ ಬದುಕುವುದಕ್ಕಿಂತ ಹಾವು ಕಚ್ಚಿ ಸಾಯುವುದು ಮೇಲು. ನೀನು ನಿನ್ನ ತಂದೆಯ ಮನೆಗೆ ಹೋಗಿ ಮತ್ತೊಬ್ಬ ತರುಣನನ್ನು ಮದುವೆಯಾಗು’ ಈ ಪರಿಯ ಕೊಂಕು ಮಾತು ಅಮಿತ್ರತಾಪನಳ ಮನಸ್ಸಿಗೆ ಗಾಸಿಯನ್ನುಂಟುಮಾಡಿತು. ❖

ದಿನ ಭವಿಷ್ಯ

ಮಂಗಳವಾರ ಜುಲೈ 6, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುನರ್ವಸು ದ್ವಾದಶೀ ಗಂ. 45-36 (ರಾ. 12-21) ಮಂಗಳವಾರ ನಿತ್ಯ ನಕ್ಷತ ಕೃತ್ತಿಕಾ ಗಂ. 23-54 (ಹ. 3-40) ಶೂಲ ನಾಮ ಯೋಗ ಗಂ. 23-53 ಕೌಲವ ಕರಣ ಗಂ. 13-7 ವಿಷ ಗಂ. 8-16 ಅಮೃತ ಗಂ. 17-18 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-02 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 2 3

ಮೇಷ: ಕೆಲಸ ಕಾರ್ಯಗಳಲ್ಲಿ ಬಂಧು ಮಿತ್ರರ ಸಲಹೆಯಿಂದಾಗಿ ಅನುಕೂಲವಾಗಲಿದೆ. ಉಲ್ಲಾಸಮಯ ಕೌಟುಂಬಿಕ ಜೀವನ ನಡೆಸಲಿದ್ದೀರಿ. ಉದ್ಯೋಗದಲ್ಲಿ ಬದಲಾವಣೆ ಮತ್ತು ಸ್ಥಳ ಬದಲಾವಣೆಯಾಗುವ ಸಾಧ್ಯತೆ ಕಂಡುಬರುವುದು.

ವೃಷಭ: ವಿದ್ಯುತ್ ಉಪಕರಣಗಳ ರಿಪೇರಿ, ಮಾರಾಟ ವ್ಯವಹಾರಸ್ಥರಿಗೆ ಹೆಚ್ಚಿನ ಲಾಭ. ಆಸ್ತಿ ಸಂಬಂಧದ ತಗಾದೆಗಳಿಗಾಗಿ ನ್ಯಾಯವಾದಿಗಳ ಸಲಹೆ ಪಡೆಯಬೇಕಾದೀತು. ಕಲಾವಿದರು, ಸಂಗೀತಗಾರರಿಗೆ ಆದಾಯದಲ್ಲಿ ಹೆಚ್ಚಳ.

ಮಿಥುನ: ಆಮದು–ರಫ್ತುದಾರರಿಗೆ, ಮಾರ್ಗನಿರ್ಮಾಣ ಗುತ್ತಿಗೆದಾರರಿಗೆ ಹೆಚ್ಚಿನ ಆರ್ಥಿಕ ಅನುಕೂಲ. ಸಣ್ಣ ವಿಷಯಕ್ಕೆ ಹಿರಿಯರ ವಿರೋಧವನ್ನು ಎದುರಿಸಬೇಕಾದ ಸಂದರ್ಭಗಳು ಕಂಡುಬರುವುದು. ತಾಳ್ಮೆಯಿಂದ ನೆಮ್ಮದಿ.

ಕರ್ಕಾಟಕ: ನೌಕರರಿಗೆ ಪದೋನ್ನತಿಯ ಸಾಧ್ಯತೆ. ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು, ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಲಭ್ಯ. ಸ್ತ್ರೀಯರಿಗೆ ಉತ್ತಮ ಅವಕಾಶಗಳು ದೊರೆತು ಶ್ರೇಯಸ್ಸು.

ಸಿಂಹ: ಉದ್ಯಮ ಮತ್ತು ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಕಾಣುವಿರಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ತೊಂದರೆಗಳು ಎದುರಾಗುವ ಸಾಧ್ಯತೆ. ರೈತಾಪಿ ವರ್ಗದವರಿಗೆ, ಸ್ವಂತ ಉದ್ದಿಮೆಯರಿಗೆ ಕೂಲಿಕಾರರ ಸಮಸ್ಯೆ ಸಾಧ್ಯತೆ.

ಕನ್ಯಾ: ವ್ಯವಹಾರದಲ್ಲಿ ಹೆಚ್ಚಿನ ಹಣ ತೊಡಗಿಸಲಿದ್ದೀರಿ. ಬಂಧುಗಳ ಸಹಕಾರವು ನಿಮ್ಮ ಪಾಲಿಗೆ ದೊರಕುವುದು. ಪ್ರಯಾಣದಲ್ಲಿಯೂ ಸುಖಾನುಭವ ನಿಮ್ಮದಾಗಲಿದೆ. ಮನೆಯಲ್ಲಿ ನೆಮ್ಮದಿಯ ಬದುಕನ್ನು ಕಾಣುವಿರಿ.

ತುಲಾ: ಗೃಹ ನಿರ್ಮಾಣ ಕಾರ್ಯಗಳು ಭರದಿಂದ ಸಾಗಲಿವೆ. ಮನೆಗೆ ಹೊಸ ಸದಸ್ಯರ ಸೇರ್ಪಡೆಯಾಗುವ ಸಾಧ್ಯತೆ. ಆರೋಗ್ಯದಲ್ಲಿ ಸುಧಾರಣೆ. ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ಹಣಕಾಸು ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ವೃಶ್ಚಿಕ: ಕೈಗಾರಿಕೋದ್ಯಮಿಗಳಿಗೆ, ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ, ವನಸ್ಪತಿ ವ್ಯಾಪಾರಸ್ಥರಿಗೆ ವ್ಯವಹಾರ ವೃದ್ಧಿ, ಆದಾಯದಲ್ಲಿ ಹೆಚ್ಚಳ. ಸಂಗಾತಿಯ ಕಡೆಯಿಂದ ಆಸ್ತಿ - ಸಂಪತ್ತು ಕೂಡಿಬರುವ ಸಾಧ್ಯತೆ.

ಧನು: ನೌಕರರಿಗೆ ಸ್ಥಾನ ಬದಲಾವಣೆ ಅಥವಾ ವರ್ಗಾವಣೆಯ ಸಾಧ್ಯತೆ ಕಂಡುಬರುವುದು. ರಾಜಕೀಯ ಮುಖಂಡರಿಗೆ ಹೆಚ್ಚಿನ ಅಧಿಕಾರ ಲಭಿಸಲಿದೆ. ವ್ಯವಹಾರದಲ್ಲಿ ವೃದ್ಧಿಯೊಂದಿಗೆ ಸಂಪಾದನೆಯಲ್ಲಿ ಹೆಚ್ಚಳ.

ಮಕರ: ಸ್ವ ಉದ್ಯೋಗದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಕಂಡುಬರುವುದು, ಸ್ತ್ರೀಯರಿಗೆ ವಿವಾಹ ಸಂಬಂಧಗಳು ಕೂಡಿಬರಲಿದೆ ಹಾಗೂ ಗೌರವಾದರಗಳು ಅರಸಿಬರಲಿದೆ. ಎಂಜಿನಿಯರ್ ಮುಂತಾದ ತಾಂತ್ರಿಕ ಪರಿಣತರಿಗೆ ಯಶಸ್ಸು.

ಕುಂಭ: ವ್ಯವಹಾರದಲ್ಲಿ ಸಾಧಾರಣವಾದ ಆದಾಯ ನಿರೀಕ್ಷೆ. ನೆರೆಹೊರೆಯವರ ಕಿರುಕುಳದಿಂದಾಗಿ ನೆಮ್ಮದಿ, ಶಾಂತಿ ಕದಡುವ ಸಾಧ್ಯತೆ. ಸಮಾಧಾನದಿಂದ ವ್ಯವಹರಿಸುವುದು ಉತ್ತಮ. ವಿದ್ಯಾರ್ಥಿಗಳಲ್ಲಿ ನಿರಾಸಕ್ತಿ.

ಮೀನ: ಲೇವಾದೇವಿ ವ್ಯವಹಾರದಲ್ಲಿ ಧನಲಾಭ. ನಟ - ನಟಿಯರಿಗೆ ಗೌರವಾದರಗಳು ಲಭಿಸಲಿವೆ. ರಾಜಕಾರಣಿಗಳಿಗೆ ಹಿನ್ನಡೆ ಸಾಧ್ಯತೆ. ಮಕ್ಕಳಿಂದ ಕೀರ್ತಿ ಲಾಭವಾಗುವುದು. ಪತ್ನಿಯ ಸಹಕಾರದಿಂದ ನೆಮ್ಮದಿಯ ಬದುಕು.

ನಿಮ್ಮ ಜನ್ಮದಿನ 6-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯವಹಾರದಲ್ಲಿ ಸಾಧಾರಣ ಪ್ರಗತಿಯನ್ನು ಕಾಣಬಹುದು. ಕ್ರೀಡಾಪಟುಗಳಿಗೆ ಹರ್ಷದ ವರ್ಷವಾಗುವುದು. ಬರಹಗಾರರಿಗೆ ಎಡರು– ತೊಡರುಗಳ ಮಧ್ಯೆಯೂ ಗೌರವಾದರಗಳು ಪ್ರಾಪ್ತವಾಗುವವು. ಆರೋಗ್ಯ ಭಾಗ್ಯ ನಿಮ್ಮಪಾಲಿಗೆ ಉತ್ತಮವಾಗಿದೆ.

ಪದಬಂಧ 4649

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೂಲಂಕಷವಾಗಿ ನೋಡುವವ (4)
3.ದೊಡ್ಡ ಶರೀರವುಳ್ಳವನು (4)
5.ಜನರು ಒಪ್ಪಿಸಿರುವ ಕಾಣಿಕೆ (3)
6.ಪಿತೃಗಳಿಗೆ ತರ್ಪಣ ಕೊಡುವಿಕೆ (4)
8.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
10.ಅನೇಕ ಅಭಿಮಾನಿಗಳನ್ನು ಹೊಂದಿರುವ ನಟಿ (4)
11. ಮಂಗ ಮಾಡುವ ತುಂಟಾಟ (4)
12.ಮತ್ತೆ ಮತ್ತೆ ನೆನಪಾಗುವ ತಾಯಿಯ ಪ್ರೀತಿ (3)
14.ಅವನದು ಅತಿ ಕಷ್ಟದ ಕಾಲ! (4)
16.ಪರವಾಗಿ ಹಿಡಿದಿರುವ ಕೊಡಲಿ (3)
17.ಚತುರ ತೋರಿದ ವಿಸ್ಮಯ? (4)
18.ಚಿಲಕದ ಹತ್ತಿರವಿರುವ ಉಕ್ಕಿನ ಕವಚ (4)

ಮೇಲಿಂದ ಕೆಳಕ್ಕೆ

2.ಜನನಾಯಕನ ನೀಡಿದ ಹೊನ್ನು (3)
3.ಕರುವಿಗೆ ತೋರಿದ ದಯೆ (3)
4.ಶ್ರಮ ನಿರ್ವಹಿಸುವಿಕೆ (2)
7.ಯಾವ ಉದ್ದೇಶವೂ ಇಲ್ಲದೆ ಸಹಜವಾದುದು (5)
9.ಸ್ತೂಪದ ಬಳಿಯೂ ಪ್ರಕಟವಾಗದ ಚೇತನ! (5)
13.ಪತಾಕೆಯನ್ನು ಹಿಡಿದಿರುವ ದಡ್ಡ! (3)
14.ರುಚಿ ನೋಡೋಣವೆಂದರೆ ಇದು ಶುದ್ಧವಾಗಿಲ್ಲ! (3)
15.ಕಚಕ್ಕನೆ ಕತ್ತರಿಸಿರುವ ತಲೆಕೂದಲು (2)



4648ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಹಾಪೂರ 3.ಗುಣಕ 5.ವಿಲಕ್ಷಣ 7.ಸರದಿ 9.ಕಡಾಯಿ 10.ಕಣಜ 12.ರುಸುಮು 14.ಪಾರಂಗತ 16.ಕಡಲು 17.ತಿರಸ್ಕಾರ

ಮೇಲಿಂದ ಕೆಳಕ್ಕೆ: 1.ಮಧುಮಾಸ 2.ರವಿ 3.ಗುಣ 4.ಕಸುಗಾಯಿ 6.ಲತಾಂಗಿ 8.ದಿವಿಜ 9.ಕದಿರು 10.ಕರಣಿಕ 11.ಪ್ಲವಂಗ 13.ಮುಜುಗರ 14.ಪಾಲು 15.ತತಿ

ಸುಡೊಕು 5035

4				2		6		1
		2			5		9	
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5034 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

2ನೇ ಬಾರಿಯೂ ಸಿಗದ ಜಾಮೀನು

ಮುಂಬೈ (ಪಿಟಿಐ): ಸ್ಟ್ಯಾನ್ ಸ್ವಾಮಿ ಅವರು ಮಧ್ಯಂತರ ಜಾಮೀನು ಕೋರಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಅವರಿಗೆ ಜಾಮೀನು ನೀಡಬಾರದು ಎಂದು ಎನ್‌ಐಎ ವಾದಿಸಿತ್ತು.

'ಜೈಲಿನಲ್ಲಿ ವೈದ್ಯಕೀಯ ಸವಲತ್ತು ಇಲ್ಲ. ನಾನು ದಿನೇ ದಿನೇ ಸಾಯುತ್ತಿದ್ದೇನೆ. ಜಾಮೀನು ದೊರೆಯದಿದ್ದರೆ ನಾನು ಇಲ್ಲೇ ಸತ್ತು ಹೋಗುತ್ತೇನೆ' ಎಂದು ಹಿಂದಿನ ವಿಚಾರಣೆ ವೇಳೆ ಸ್ಟ್ಯಾನ್ ಸ್ವಾಮಿ ಹೇಳಿದ್ದರು. 'ಯಾವುದೇ ಕಾರಣಕ್ಕೂ ಅವರಿಗೆ ಜಾಮೀನು ನೀಡಬಾರದು' ಎಂದು ಎನ್‌ಐಎ ಪ್ರತಿಪಾದಿಸಿತು. ಹೀಗಾಗಿ ಹೈಕೋರ್ಟ್ ಅರ್ಜಿ ತಿರಸ್ಕರಿಸಿತ್ತು. ಸ್ಟ್ಯಾನ್ ಸ್ವಾಮಿ ಪರ ವಕೀಲ ಮಿಹಿರ್ ದೇಸಾಯಿ, ಅನಾರೋಗ್ಯದ ಕಾರಣ ಮುಂದಿಟ್ಟು ಮತ್ತೆ ಜಾಮೀನು ಅರ್ಜಿ ಸಲ್ಲಿಸಿದ್ದರು. ವಿಚಾರಣೆಯನ್ನು ಹೈಕೋರ್ಟ್ ಸೋಮವಾರವಷ್ಟೇ ವಿಚಾರಣೆಗೆ ಕೈಗೆತ್ತಿಕೊಂಡಿತ್ತು.

ಸ್ಟ್ಯಾನ್ ಸ್ವಾಮಿ ಅವರ ಕಸ್ಟಡಿ ಸಾವನ್ನೂ ತನಿಖೆಗೆ ಒಳಪಡಿಸಲಾಗುತ್ತದೆ ಎಂದು ಹೈಕೋರ್ಟ್ ಹೇಳಿದೆ.

ಜಾಮೀನು ನಿರಾಕರಣೆಗೆ ಅಸಮಾಧಾನ • ವಿರೋಧ ಪಕ್ಷಗಳ ನಾಯಕರ ಆಕ್ರೋಶ, ಟೀಕೆ

'ಸ್ಟ್ಯಾನ್ ಸ್ವಾಮಿಯದ್ದು ಸಾವಲ್ಲ, ಕೊಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಟ್ಯಾನ್ ಸ್ವಾಮಿಯದ್ದು ಸಾವಲ್ಲ, ಕೊಲೆ'. ಬುಡಕಟ್ಟು ಜನರ ಹಕ್ಕುಗಳ ಹೋರಾಟಗಾರ ಫಾದರ್ ಸ್ಟ್ಯಾನ್ ಸ್ವಾಮಿ ಅವರ ಸಾವಿನ ಬಗ್ಗೆ ಸಾಮಾಜಿಕ ಹೋರಾಟಗಾರರು, ವಿರೋಧ ಪಕ್ಷಗಳು ಮತ್ತು ಸಾರ್ವಜನಿಕರು ಪ್ರತಿಕ್ರಿಯೆ ನೀಡಿರುವ ರೀತಿ ಇದು.

ಸ್ಟ್ಯಾನ್ ಸ್ವಾಮಿ ಅವರ ಸಾವಿನ ಸುದ್ದಿ ಬಹಿರಂಗವಾದ ಬೆನ್ನಲ್ಲೇ, ಅದು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಟ್ರೆಂಡ್ ಆಯಿತು. ಟ್ವಿಟರ್‌ನಲ್ಲಿ ಸಂಜೆ 4.30ರ ವೇಳೆಯಲ್ಲಿ #StanSwamy ಹ್ಯಾಷ್‌ಟ್ಯಾಗ್‌ನಲ್ಲಿ ಸಂತಾಪ ಸೂಚನಾ ಟ್ವೀಟ್‌ಗಳು ಬರಲಾರಂಭಿಸಿದವು. ಆದರೆ ಕೆಲವೇ ನಿಮಿಷಗಳಲ್ಲಿ, 'ಇದು ರಾಜಕೀಯ ಕೊಲೆ', 'ವ್ಯವಸ್ಥೆ ಸ್ಟ್ಯಾನ್ ಸ್ವಾಮಿ ಅವರನ್ನು ಕೊಂದಿದೆ', 'ಬಿಜೆಪಿ ಸ್ಟ್ಯಾನ್ ಸ್ವಾಮಿ ಅವರನ್ನು ಕೊಂದಿದೆ' ಎಂದು ಹಲವರು ಟ್ವೀಟ್ ಮಾಡಿದರು. #StanSwamy ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಟ್ರೆಂಡ್ ಆಯಿತು. ಸಂಜೆ 5ರ ವೇಳೆ ಈ ಹ್ಯಾಷ್‌ಟ್ಯಾಗ್ ಮೊದಲ ಸ್ಥಾನದಲ್ಲಿತ್ತು. ನಂತರ ಸತತ ಐದು ತಾಸು ಈ ಹ್ಯಾಷ್‌ಟ್ಯಾಗ್ ಮೊದಲ ಸ್ಥಾನದಲ್ಲಿತ್ತು.

'84 ವರ್ಷದ ಅನಾರೋಗ್ಯ ಪೀಡಿತ ವ್ಯಕ್ತಿಗೆ ಜಾಮೀನು ನೀಡುವುದನ್ನು ಎನ್‌ಐಎ ನಿರಾಕರಿಸುವ ಮೂಲಕ ಅವರನ್ನು ಕೊಂದಿದೆ'. 'ಜಾಮೀನು ನೀಡದೆ ನ್ಯಾಯಾಂಗವು ಸ್ಟ್ಯಾನ್ ಸ್ವಾಮಿಯನ್ನು ಕೊಂದಿದೆ' ಎಂದು ಹಲವರು ಟ್ವೀಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಶಿಕ್ಷೆಯಾಗಬೇಕಿತ್ತು'

'ಸ್ಟ್ಯಾನ್ ಸ್ವಾಮಿ ಸಹಜವಾಗಿ ಸತ್ತಿದ್ದನ್ನು ಕೇಳಿ ಬೇಸರವಾಗುತ್ತಿದೆ. ದೇಶದ ವಿರುದ್ಧ ಸ್ಟ್ಯಾನ್ ಎಸಗಿದ್ದ ಘೋರ ಅಪರಾಧಗಳಿಗಾಗಿ ಆತನಿಗೆ ಶಿಕ್ಷೆಯಾಗಬೇಕಿತ್ತು' ಎಂದು ದೆಹಲಿ ಬಿಜೆಪಿ ನಾಯಕ ಕಪಿಲ್ ಮಿಶ್ರಾ ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು ಹಲವರು ಬೆಂಬಲಿಸಿದ್ದಾರೆ.

ಉಗ್ರನೊಬ್ಬ ಸತ್ತ ಎಂದು ಕಪಿಲ್ ಮಿಶ್ರಾ ಅವರ ಬೆಂಬಲಿಗರು ಟ್ವೀಟ್ ಮಾಡಿದ್ದಾರೆ. ಸ್ಟ್ಯಾನ್ ಸ್ವಾಮಿ ಅವರ ಸಾವನ್ನು ಟ್ವಿಟರ್‌ನಲ್ಲಿ ಕೆಲವರು ಸಂಭ್ರಮಿಸಿದ್ದಾರೆ. #StanSwamy ಹ್ಯಾಷ್‌ಟ್ಯಾಗ್‌ನಲ್ಲಿಯೇ ಸಂಭ್ರಮಚಾರಣೆಯ ಟ್ವೀಟ್‌ಗಳನ್ನು ಮಾಡಲಾಗಿದೆ.

ಕಪಿಲ್ ಮಿಶ್ರಾ ಅವರ ಟ್ವೀಟ್‌ಗೆ ಆಕ್ಷೇಪವೂ ವ್ಯಕ್ತವಾಗಿದೆ.

ಫಾದರ್ ಸ್ಟ್ಯಾನ್ ಸ್ವಾಮಿ ಅವರ ಸಾವಿನ ಸುದ್ದಿ ಕೇಳಿ ತೀರಾ ದುಃಖವಾಗಿದೆ. ಎನ್‌ಐಎ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಬಿಜೆಪಿ ಮತ್ತು ನ್ಯಾಯಾಂಗವು ಸ್ಟ್ಯಾನ್ ಸ್ವಾಮಿ ಅವರನ್ನು ಕೊಲೆ ಮಾಡಿವೆ

ಯೋಗೇಂದ್ರ ಯಾದವ್, ಸ್ವರಾಜ್ ಇಂಡಿಯಾ ಸಂಸ್ಥಾಪಕ

ಫಾದರ್ ಸ್ಟ್ಯಾನ್ ಸ್ವಾಮಿ ಅವರನ್ನು ಕೊಂದವರು ಯಾರು? ಬುಡಕಟ್ಟು ಜನರ ಅಭಿವೃದ್ಧಿಗಾಗಿ ತಮ್ಮ ಇಡೀ ಜೀವನವನ್ನು ಮುಡುಪಾಗಿ ಇಟ್ಟಿದ್ದ 84 ವರ್ಷದ ಈ ಸಂತನಿಂದ ಹೆದರಿದ್ದವರು ಯಾರು? ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ಮೂಲಕ ನ್ಯಾಯಾಂಗವು ಈ ಅಪರಾಧದಿಂದ ತನ್ನ ಕೈ ತೊಳೆದುಕೊಳ್ಳುತ್ತದೆಯೇ?

ಥಾಮಸ್ ಐಸಾಕ್, ಸಿಪಿಎಂ ನಾಯಕ

ಈ ಸಾವು ಆಘಾತ ನೀಡಿದೆ. ಸ್ಟ್ಯಾನ್ ಸ್ವಾಮಿ ಅವರಿಗೆ ಅಗತ್ಯವಿದ್ದ ಚಿಕಿತ್ಸೆಯನ್ನು ಸಮಯಕ್ಕೆ ಸರಿಯಾಗಿ ನೀಡದೇ ಇದ್ದ ಕಾರಣದಿಂದಲೇ ಅವರು ಮೃತಪಟ್ಟಿದ್ದಾರೆ. ಕೇಂದ್ರ ಸರ್ಕಾರವೇ ಇದಕ್ಕೆ ಹೊಣೆ

ಹೇಮಂತ್ ಸೋರೆನ್, ಜಾರ್ಖಂಡ್ ಮುಖ್ಯಮಂತ್ರಿ

ಸಾಬೀತಾಗದ ಆರೋಪಗಳ ಹೆಸರಿನಲ್ಲಿ, ಯುಎಪಿಎ ಅಡಿ ಅವರನ್ನು ಬಂಧಿಸಲಾಗಿತ್ತು. 2020ರ ಅಕ್ಟೋಬರ್‌ನಿಂದ ಅವರನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗಿತ್ತು. ಕಸ್ಟಡಿಯಲ್ಲಿನ ಈ ಕೊಲೆಗೆ ಹೊಣೆಗಾರರನ್ನು ಗುರುತಿಸಲೇಬೇಕು

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

ಸ್ಟ್ಯಾನ್ ಸ್ವಾಮಿ ಅವರು ಬದುಕಿದ್ದಾಗ ಅವರ ಘನತೆಯನ್ನು ಕಿತ್ತುಕೊಂಡಿದ್ದ ಈ ನಿರ್ದಯಿ ಸರ್ಕಾರದ ಕೈಗಳಿಗೆ ರಕ್ತ ಅಂಟಿದೆ. ಈ ಸಾವಿನ ಸುದ್ದಿ ಕೇಳಿ ನನ್ನ ಕರುಳು ಹಿಂಡಿದೆ, ಆಘಾತವಾಗಿದೆ ಮತ್ತು ಭಯವಾಗುತ್ತಿದೆ

ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ

ಭಯೋತ್ಪಾದನೆಯ ಸುಳ್ಳು ಆಪಾದನೆಯಲ್ಲಿ ಒಂಬತ್ತು ತಿಂಗಳಿನಿಂದ ಬಂಧನದಲ್ಲಿದ್ದ ಮಾನವ ಹಕ್ಕುಗಳ ಹೋರಾಟಗಾರ ಫಾದರ್ ಸ್ಟ್ಯಾನ್ ಸ್ವಾಮಿ ಅವರು ಕಸ್ಟಡಿಯಲ್ಲೇ ಮೃತಪಟ್ಟಿದ್ದಾರೆ. ಇದು ಅಕ್ಷಮ್ಯ

ಮೇರಿ ಲಾವ್ಲೋರ್, ವಿಶ್ವಸಂಸ್ಥೆಯಲ್ಲಿ ಮಾನವ ಹಕ್ಕುಗಳ ಹೋರಾಟಗಾರರ ವಿಶೇಷ ಪ್ರತಿನಿಧಿ

ಸ್ಟ್ಯಾನ್ ಸ್ವಾಮಿ ಅವರಿಗೆ ನ್ಯಾಯ ಸಿಗಬೇಕಿತ್ತು, ಅವರನ್ನು ಮಾನವೀಯವಾಗಿ ನಡೆಸಿಕೊಳ್ಳಬೇಕಿತ್ತು

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಸವಿನೆನಪು



ಶ್ರೀ ಎಂ. ಗೋವಪ್ಪ ನವರು
ಜನನ: 26.05.1948 – ನಿಧನ: 06.07.2018 ರಂದು
ಕಂಬದಹಳ್ಳಿ ಶಿಡ್ಲಘಟ್ಟ (ತಾ) ಚಿಕ್ಕಬಳ್ಳಾಪುರ (ಜಿ)
ನೀವು ನಮ್ಮನ್ನಗಲಿ ಮೂರು ವರ್ಷ ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,
ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಕುಟುಂಬ ವರ್ಗದವರು.



24ನೇ ವರ್ಷದ ಪುಣ್ಯಸ್ಮರಣೆ
ನಿಮ್ಮ ನೆನಪು ನಮಗೆ ಸದಾ ಸ್ಫೂರ್ತಿದಾಯಕ, ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶನ
ಲೇಟ್ ಸಿ. ರಾಮಯ್ಯ
PWD & BBMP ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ ಅಧ್ಯಕ್ಷರು, ಜಯಮಹಲ್ ಬ್ಲಾಕ್ ಕಾಂಗ್ರೆಸ್
ನಿಧನ: 06.07.1997
ನಿಮ್ಮ ಸವಿನೆನಪಿನಲ್ಲಿ
ಆರ್.ಅಖಂಡ ಶ್ರೀನಿವಾಸ ಮೂರ್ತಿ
ಶಾಸಕರು, ಪುಲಿಕೇಶಿನಗರ
ಮತ್ತು ಕುಟುಂಬದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬ್ಯಾಂಕ್‌ಗೆ ವಂಚನೆ: ಶಕ್ತಿಭೋಗ್ ಫುಡ್ಸ್ ಅಧ್ಯಕ್ಷ ಬಂಧನ

ನವದೆಹಲಿ (ಪಿಟಿಐ): ಬ್ಯಾಂಕ್‌ನಿಂದ ಕೋಟ್ಯಂತರ ರೂಪಾಯಿ ಸಾಲ ಪಡೆದು ವಂಚಿಸಿದ ಆರೋಪದಡಿ ದೆಹಲಿ ಮೂಲದ ಶಕ್ತಿಭೋಗ್ ಫುಡ್ಸ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೇವಲ್ ಕೃಷನ್ ಕುಮಾರ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ.

ಭಾನುವಾರ ರಾತ್ರಿ ಬಂಧಿಸಲಾಗಿದ್ದು, ಸೋಮವಾರ ವಿಶೇಷ ಪಿಎಂಎಲ್‌ಎ ಕೋರ್ಟ್ ಎದುರು ಹಾಜರುಪಡಿಸಲಾಯಿತು. ಕೋರ್ಟ್ ಜುಲೈ 9ರವರೆಗೂ ಇ.ಡಿ ವಶಕ್ಕೆ ವಿಚಾರಣೆಗೆ ಒಪ್ಪಿಸಿದೆ ಎಂದು ಹೇಳಿಕೆಯು ತಿಳಿಸಿದೆ. ಬಂಧನಕ್ಕೂ ಮೊದಲು ಅಧಿಕಾರಿಗಳು ದೆಹಲಿ ಮತ್ತು ಹರಿಯಾಣದಲ್ಲಿ ಒಂಬತ್ತು ಕಡೆ ದಾಳಿ ನಡೆಸಿದ್ದರು.

ದಾಳಿಯ ವೇಳೆಗೆ ವಂಚನೆಗೆ ಸಂಬಂಧಿತ ದಾಖಲೆಗಳು, ಡಿಜಿಟಲ್ ಸಾಕ್ಷ್ಯಗಳನ್ನು ವಶಕ್ಕೆ ಪಡೆಯಲಾಗಿದೆ. ಇ.ಡಿ ಈ ಸಂಬಂಧ ಸಿಬಿಐನ ಎಫ್‌ಐಆರ್ ಆಧರಿಸಿ ಪಿಎಂಎಲ್ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಶಕ್ತಿಭೋಗ್ ಫುಡ್ಸ್ ಲಿಮಿಟೆಡ್ ವಿರುದ್ಧ ₹ 3,269 ಕೋಟಿ ರೂಪಾಯಿ ವಂಚನೆಗೆ ಸಂಬಂಧಿಸಿ ಮೊಕದ್ದಮೆ ದಾಖಲಿಸಿತ್ತು.

ಮಾನವೀಯ ಚೇತನ ಅಮಾನವೀಯತೆಗೆ ಬಲಿ

• ಸಿ. ಮರಿಜೋಸೆಫ್

ತಮಿಳುನಾಡಿನ ತಿರುಚ್ಚಿಯಲ್ಲಿ ಜನಿಸಿದ ಸ್ಟ್ಯಾನ್ ಸ್ವಾಮಿ ಅವರು ಜೆಸ್ವಿತ್ ಸಂಸ್ಥೆಯ ಗುರುವಾಗಿ ಜಾರ್ಖಂಡ್ ರಾಜ್ಯದ ರಾಜಧಾನಿ ರಾಂಚಿಯಿಂದ ಸುಮಾರು ಹನ್ನೊಂದು ಕಿಲೋಮೀಟರು ದೂರದ ನಾಮ್ ಕುಮ್ ಎಂಬಲ್ಲಿ ಜೆಸ್ವಿತ್ ಬಡಕುಟೀರದಲ್ಲಿ ವಾಸಿಸುತ್ತ ಆದಿವಾಸಿಗಳ ಹಕ್ಕುಸ್ಥಾಪನೆಯ ಕೆಲಸದಲ್ಲಿ ನಿರತರಾಗಿದ್ದರು.

ನಮ್ಮ ದೇಶದ ಜನಸಂಖ್ಯೆಯಲ್ಲಿ ದಂಡಕಾರಣ್ಯದ ಆದಿವಾಸಿಗಳ ಪ್ರಮಾಣ ಶೇ 8.9ರಷ್ಟಿದ್ದು, ಪಶ್ಚಿಮಬಂಗಾಳದಿಂದ ಹಿಡಿದು ಗುಜರಾತ್‌ವರೆಗೆ ವ್ಯಾಪಿಸಿದ್ದಾರೆ. ತಳಿಶಾಸ್ತ್ರದ ವಿಜ್ಞಾನಿಗಳ ಪ್ರಕಾರ ಇವರು ನಮ್ಮ ದೇಶದ ಮೂಲನಿವಾಸಿಗಳು.

ಯಾವಾಗ ಅರಣ್ಯಗಳನ್ನು ಜನಜೀವನದಿಂದ ಮುಕ್ತಗೊಳಿಸಬೇಕು ಎಂಬ ಆದೇಶ ಹೊರಟಿತೋ ಅಂದಿನಿಂದ ಈ ಆದಿವಾಸಿಗಳಿಗೆ ತೊಂದರೆ ಶುರುವಾಯಿತು. ಕಾಡನ್ನೇ ತಾಯಿಯಂತೆ ಪೂಜಿಸುತ್ತಿದ್ದ ಇವರಿಗೆ ಕಾಡಿನ ಹಕ್ಕನ್ನು ನಿರಾಕರಿಸಲಾಯಿತು; ಬಲವಂತವಾಗಿ ಒಕ್ಕಲೆಬ್ಬಿಸುವ ಪ್ರಯತ್ನಗಳೂ ನಡೆದವು. ಇಂಥ ದಬ್ಬಾಳಿಕೆ ವಿರುದ್ಧ ಆದಿವಾಸಿಗಳು ಸೆಟೆದು ನಿಂತು ತಮ್ಮ ಹಕ್ಕುಸ್ಥಾಪನೆಗಾಗಿ ಹೋರಾಡುತ್ತಿದ್ದಾರೆ ಎಂದು ಅಲ್ಪಸಂಖ್ಯಾತರ ಹಕ್ಕುಗಳ ಆಯೋಗದ ವರದಿ ದಾಖಲಿಸಿದೆ.

ಈ ದಟ್ಟ ಅರಣ್ಯಗಳು ನೈಸರ್ಗಿಕ ಸಂಪತ್ತಿನ ನಿಧಿಯಾಗಿವೆ. ಉದ್ಯಮಿಗಳು ಸರ್ಕಾರದ ಮೇಲೆ ಒತ್ತಡ ಹೇರುತ್ತಾ ಖನಿಜದ ಗಣಿಗಳನ್ನು ದೀರ್ಘಾವಧಿಗೆ ಗುತ್ತಿಗೆ ಪಡೆಯಲು ಹೊಂಚು ಹಾಕುತ್ತಿದ್ದಾರೆ. ಅಷ್ಟೇ ಅಲ್ಲದೆ ಇಲ್ಲಿನ ನದಿಗಳೂ ಕಣಿವೆಗಳೂ ಭಾರಿ ಗಾತ್ರದ ಅಣೆಕಟ್ಟುಗಳನ್ನು ಕಟ್ಟಲು ಸೂಕ್ತವಾಗಿದ್ದು ವಿದ್ಯುತ್ ಉತ್ಪಾದನೆಗೆ ಸಹಕಾರಿ. ನಾಗರಿಕ ಸಮುದಾಯಕ್ಕೆ ವರದಾನವಾಗಲಿರುವ ಈ ಅಭಿವೃದ್ಧಿ ಕಾರ್ಯಗಳಿಂದ ನಿಜವಾಗಿ ಸಂತ್ರಸ್ತರಾಗಲಿರುವವರು ಆದಿವಾಸಿಗಳು. ಅವರೆಲ್ಲರೂ ಇಂದು ಸಂಘಟಿತರಾಗಿ ಪ್ರತಿಭಟನೆಗೆ ತೊಡಗಿದ್ದಾರೆ. ಆದರೆ ಸರ್ಕಾರವು ಈ ನಡವಳಿಕೆಯನ್ನು ರಾಜದ್ರೋಹ ಎಂದು ಪರಿಗಣಿಸಿದೆ.

ಸ್ಟ್ಯಾನ್ ಸ್ವಾಮಿ ಅವರ ಬಿಡುಗಡೆಗೆ ಆಗ್ರಹಿಸಿ ಕ್ರೈಸ್ತ ಸನ್ಯಾಸಿನಿಯರು ಸಿಕಂದರಾಬಾದ್‌ನಲ್ಲಿ 2020ರಲ್ಲಿ ನಡೆಸಿದ ಪ್ರತಿಭಟನೆಯ ದೃಶ್ಯ

ಕೆಲವರ್ಷಗಳ ಹಿಂದೆ ಆಡಳಿತಯಂತ್ರವು ಭೇದೋಪಾಯವಾಗಿ ಸಲ್ವಾಜುಡುಮ್ ಎಂಬ ಸಂಘಟನೆಯನ್ನು ಹೋರಾಟಗಾರರ ವಿರುದ್ಧ ಎತ್ತಿಕಟ್ಟಿ ಆದಿವಾಸಿಗಳು ಪರಸ್ಪರ ಹೊಡೆದಾಡುವಂತೆ ಮಾಡಿತು. ಹೋರಾಟಗಾರರನ್ನು ಮಾವೋವಾದಿಗಳು ಅಥವಾ ಅವರಿಗೆ ಸಹಾಯ ಮಾಡಿದವರು ಎಂಬ ಆರೋಪದ ಮೇಲೆ ಅಕ್ರಮ ಚಟುವಟಿಕೆ ತಡೆ ಕಾಯ್ದೆ ಅಡಿ ಬಂಧಿಸಿ ಸೆರೆಗೆ ತಳ್ಳಲಾಯಿತು.

ಸ್ಟ್ಯಾನ್ ಸ್ವಾಮಿಯವರು ಅಮಾಯಕ ಅವಿದ್ಯಾವಂತ ಆದಿವಾಸಿಗಳು ಹೀಗೆ ಶೋಷಣೆಗೊಳಗಾಗುವುದನ್ನು ಕಂಡು ನೊಂದರು. ಸೆರೆಮನೆಗೆ ಭೇಟಿ ನೀಡಿ ಮುಗ್ಧ ಆದಿವಾಸಿಗಳಿಗೆ ಸಾಂತ್ವನ ಹೇಳಿದರು. ಪೊಲೀಸ್ ಅಧಿಕಾರಿಗಳ ನಿರಂಕುಶ ವರ್ತನೆ ಹಾಗೂ ಬಂಧಿತರಾದ ಅಮಾಯಕ ಆದಿವಾಸಿಗಳ ಸ್ಥಿತಿಗತಿಗಳ ಕುರಿತು ಮಾನವಹಕ್ಕುಗಳ ವಕೀಲೆ ಸುಧಾ ಭಾರದ್ವಾಜ್ ಅವರ ಸಹಯೋಗದಲ್ಲಿ ತಮ್ಮದೇ ವಾರಪತ್ರಿಕೆಯಲ್ಲಿ 2018ರ ಏಪ್ರಿಲ್ 7ರಂದು ದೀರ್ಘ ಲೇಖನ ಬರೆದರು. ಜನಜಾಗೃತಿ ಮೂಡಿಸಿದ ಕಾರಣಕ್ಕಾಗಿ ಸರ್ಕಾರದ ಕೆಂಗಣ್ಣಿಗೆ ಗುರಿಯಾದರು.

ಈ ನಡುವೆ 2018ರ ಜನವರಿ ಒಂದರಂದು ಭೀಮಾ-ಕೋರೆಗಾಂವ್ ಯುದ್ಧದ 200ನೇ ವರ್ಷಾಚರಣೆ ಸಂದರ್ಭದಲ್ಲಿ ಕೆಲ ಕಿಡಿಗೇಡಿಗಳು ಗಲಭೆಯೆಬ್ಬಿಸಿದರು. ಕೇಂದ್ರದ ಆಡಳಿತಾರೂಢ ಬಿಜೆಪಿ ವಿರುದ್ಧ ಜನಾಭಿಪ್ರಾಯ ದಟ್ಟವಾಗುತ್ತಿತ್ತು. ಅದರ ಮುಂದಿನ ವರ್ಷ ನಡೆಯಲಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ವಿರುದ್ಧ ವ್ಯತಿರಿಕ್ತ ಪರಿಣಾಮ ಉಂಟಾಗಬಹುದೆಂದು ಭಾವಿಸಿದ ಬಿಜೆಪಿ, ತನ್ನ ವಿರುದ್ಧ ಮಾತನಾಡುವ ವಿಚಾರವಾದಿಗಳು, ಚಿಂತಕರು, ಮಾನವಹಕ್ಕು ಕಾರ್ಯಕರ್ತರು ಮುಂತಾದವರ ಮೇಲೆ ಕತ್ತಿ ಬೀಸತೊಡಗಿತು. ದೇಶದ ಎಲ್ಲೆಲ್ಲೋ ಇದ್ದ ವಿಚಾರವಾದಿಗಳನ್ನು ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಸಿಲುಕಿಸಲಾಯಿತು.

83ರ ವಯೋವೃದ್ಧ ಸ್ಟ್ಯಾನ್ ಸ್ವಾಮಿ ಅವರ ನಿವಾಸದ ಮೇಲೆ ದಾಳಿ ನಡೆಸಿದ ತನಿಖಾ ಸಂಸ್ಥೆಯು ಕಳೆದ ಅಕ್ಟೋಬರ್ ಎಂಟರಂದು ಅವರನ್ನು ಬಂಧಿಸಿ ಮುಂಬೈಗೆ ಕೊಂಡೊಯ್ಯಿತು. ಅವರು ಬಹಿಷ್ಕೃತ ಮಾವೊವಾದಿ ಸಂಘಟನೆಯೊಂದಿಗೆ ಕೈಜೋಡಿಸಿದ್ದಾರೆ ಎಂಬುದು ಪ್ರಮುಖ ಆರೋಪವಾಗಿತ್ತು.

ಸ್ಟ್ಯಾನ್ ಸ್ವಾಮಿಯವರಿಗೆ ಪಾರ್ಕಿನ್ಸನ್ ಕಾಯಿಲೆಯಿದೆ. ಅವರ ದೇಹಕ್ಕೆ ಆಗಾಗ್ಗೆ ರಕ್ತ ಮರುಪೂರಣ ಮಾಡಬೇಕಿತ್ತು, ಕೈ ನಡುಗುವ ಕಾರಣ ಅವರಿಗೆ ರುಜು ಹಾಕಲು ಸಹ ಆಗುತ್ತಿರಲಿಲ್ಲ, ಚಹಾ ಕುಡಿಯುವ ಕಪ್ ಹಿಡಿಯಲೂ ಅವರಿಗೆ ಸಾಧ್ಯವಾಗುತ್ತಿರಲಿಲ್ಲ, ದ್ರವಾಹಾರವನ್ನು ಸೇವಿಸಲು ಹೀರುಗೊಳವೆ ಬೇಕಾಗಿದೆ ಎಂದರೂ ನಿರಾಕರಿಸಲಾಯಿತು. ಆಸ್ಪತ್ರೆಯ ಹಾಸಿಗೆಯ ಮೇಲಿದ್ದಾಗಲೂ ಅವರ ಕಾಲಿಗೆ ಬೇಡಿ ತೊಡಿಸಿ ಮಂಚಕ್ಕೆ ಬಿಗಿಯಲಾಗಿತ್ತು.

ಮಾನವತೆಯನ್ನು ಎತ್ತಿಹಿಡಿಯಲು ದುಡಿದ ಒಂದು ಮಹಾನ್ ಚೇತನ ಅಮಾನವೀಯತೆಗೆ ಬಲಿಯಾಯಿತು.

(ಲೇಖಕ: ಹವ್ಯಾಸಿ ಬರಹಗಾರ)

ಕುಟುಂಬಗಳ ಸಾಲ ಹೆಚ್ಚಳ

ಮುಂಬೈ (ಪಿಟಿಐ): ಕುಟುಂಬಗಳು ಹೊಂದಿರುವ ಸಾಲದ ಪ್ರಮಾಣ 2020–21ನೆಯ ಸಾಲಿನಲ್ಲಿ ತೀವ್ರ ಏರಿಕೆ ಕಂಡಿದೆ. 2019–20ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ ಶೇಕಡ 32.5ರಷ್ಟು ಇದ್ದ ಸಾಲದ ಪ್ರಮಾಣವು, 2020–21ರಲ್ಲಿ ಶೇ 37.3ಕ್ಕೆ ಹೆಚ್ಚಳವಾಗಿದೆ. ಇದು ಕೋವಿಡ್‌ನಿಂದ ಆಗಿರುವ ಹಣಕಾಸಿನ ಪರಿಣಾಮಗಳನ್ನು ತೋರಿಸುತ್ತಿದೆ. ಕೋವಿಡ್ ಎರಡನೆಯ ಅಲೆಯ ಪರಿಣಾಮವಾಗಿ ಸಾಲದ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದಲ್ಲಿ ಇನ್ನಷ್ಟು ಜಾಸ್ತಿ ಆಗಬಹುದು ಎಂದು ಎಸ್‌ಬಿಐ ವರದಿ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,722
ಇಂದಿನ ಅಂತ್ಯ	15,834
▲	112
ದಿನದ ಗರಿಷ್ಠ	15,845

ವಿನಿಮಯ ದರ

$ ಡಾಲರ್	74.30
£ ಪೌಂಡ್	102.96
€ ಯುರೊ	88.26
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1400 (1380)
ಸೋಯಾ (ರಿಫೈನ್ಡ್)	₹1340 (1305)
ಸೂರ್ಯಕಾಂತಿ (ರಿಫೈನ್ಡ್)	₹1430(1340)
ಪಾಮೋಲಿನ್	₹1170(1160)

ಸತತ ಎರಡನೇ ತಿಂಗಳಿನಲ್ಲೂ ನಕಾರಾತ್ಮಕ ಬೆಳವಣಿಗೆ

ಸೇವಾ ವಲಯದ ಚಟುವಟಿಕೆ ಕುಸಿತ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಜೂನ್ ತಿಂಗಳಿನಲ್ಲಿಯೂ ನಕಾರಾತ್ಮಕ ಮಟ್ಟದಲ್ಲಿಯೇ ಇವೆ. ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ ಮತ್ತು ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಸತತ ಎರಡನೇ ತಿಂಗಳಿನಲ್ಲಿಯೂ ಚಟುವಟಿಕೆಗಳು ನಕಾರಾತ್ಮಕ ಮಟ್ಟದಲ್ಲಿಯೇ ಇರುವಂತಾಗಿದೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳ ಸೂಚ್ಯಂಕವು ಮೇ ತಿಂಗಳಿನಲ್ಲಿ 46.4ರಷ್ಟಿತ್ತು. ಜೂನ್‌ನಲ್ಲಿ ಇದು 41.2ಕ್ಕೆ ಇಳಿಕೆ ಕಂಡಿದೆ. 2020ರ ಜುಲೈ ನಂತರ ಕಂಡುಬಂದಿರುವ ಅತ್ಯಂತ ವೇಗದ ಕುಸಿತ ಇದಾಗಿದೆ. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು 'ಸಕಾರಾತ್ಮಕ' ಎಂದು ಪರಿಗಣಿಸಲಾಗುತ್ತದೆ. ಸೂಚ್ಯಂಕವು 50ಕ್ಕಿಂತ ಕೆಳಗಿದ್ದರೆ ಅದು 'ನಕಾರಾತ್ಮಕ' ಎಂದು ಪರಿಗಣಿತವಾಗುತ್ತದೆ.

ಲಾಕ್‌ಡೌನ್‌ನಿಂದಾಗಿ ಬೇಡಿಕೆ ತಗ್ಗಿರುವುದರಿಂದ ಕಂಪನಿಗಳು ಉದ್ಯೋಗಗಳ ಸಂಖ್ಯೆಯನ್ನು ಮತ್ತಷ್ಟು ಕಡಿಮೆ ಮಾಡಿವೆ ಎಂದು ಸಂಸ್ಥೆ ಹೇಳಿದೆ.

ಭಾರತದಲ್ಲಿನ ಕೋವಿಡ್ ಪರಿಸ್ಥಿತಿಯನ್ನು ಗಮನಿಸಿದಾಗ ಸೇವಾ ವಲಯದ ಮೇಲೆ ಪರಿಣಾಮ ಉಂಟಾಗಲಿದೆ ಎನ್ನುವ ನಿರೀಕ್ಷೆ ಇತ್ತು. ಹೊಸ ವಹಿವಾಟುಗಳು ಕಡಿಮೆ ಆಗಿದ್ದು, ಉದ್ಯೋಗ ಕಡಿತವು ತೀವ್ರವಾಗಿದೆ. ಹೀಗಿದ್ದರೂ ಮೊದಲು ಜಾರಿಗೊಳಿಸಿದ್ದ ಲಾಕ್‌ಡೌನ್ ಸಂದರ್ಭದಲ್ಲಿ ಆಗಿದ್ದ ದಾಖಲೆಯ ಕುಸಿತಕ್ಕೆ ಹೋಲಿಸಿದರೆ ಜೂನ್ ತಿಂಗಳ ಕುಸಿತವು ತುಸು ಕಡಿಮೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಭಾರತದ ಸೇವೆಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೇಡಿಕೆಯು ಜೂನ್‌ನಲ್ಲಿ ಇನ್ನಷ್ಟು ಇಳಿಕೆ ಆಗಿದ್ದು, ಹೊಸ ರಫ್ತು ವಹಿವಾಟು ಸತತ 16ನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ.

ಸೇವಾ ವಲಯ ಹಾಗೂ ತಯಾರಿಕಾ ವಲಯಗಳ ಚಟುವಟಿಕೆಗಳ ಸ್ಥಿತಿಯನ್ನು ತಿಳಿಸುವ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಮೇ ತಿಂಗಳಿನಲ್ಲಿ 48.1 ರಷ್ಟು ಇದ್ದಿದ್ದು, ಜೂನ್‌ನಲ್ಲಿ 43.1ಕ್ಕೆ ಇಳಿಕೆ ಕಂಡಿದೆ. 2020ರ ಜುಲೈ ಬಳಿಕ ಅತ್ಯಂತ ತೀಕ್ಷ್ಣವಾದ ಕುಸಿತ ಇದಾಗಿದೆ.

ಜೊಮ್ಯಾಟೊ ಐಪಿಒಗೆ 'ಸೆಬಿ' ಒಪ್ಪಿಗೆ

ನವದೆಹಲಿ (ಪಿಟಿಐ): ಹೋಟೆಲ್, ರೆಸ್ಟೋರೆಂಟ್‌ಗಳಿಂದ ಆಹಾರವನ್ನು ಮನೆಬಾಗಿಲಿಗೆ ತಲುಪಿಸುವ ಸೇವೆ ನೀಡುವ ಜೊಮ್ಯಾಟೊ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಪ್ರಕ್ರಿಯೆಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಒಪ್ಪಿಗೆ ನೀಡಿದೆ.

ಕಂಪನಿಯು ₹ 8,250 ಕೋಟಿ ಮೌಲ್ಯದ ಐಪಿಒಗೆ ಮುಂದಾಗಿದೆ. ಇದರಲ್ಲಿ ಹೊಸ ಷೇರುಗಳ ವಿತರಣೆಯ ಮೂಲಕ ₹ 7,500 ಕೋಟಿ ಹಾಗೂ ಇನ್ಫೊ ಎಡ್ಜ್ (ಇಂಡಿಯಾ) ಲಿಮಿಟೆಡ್ ಕಂಪನಿಯು ಜೊಮ್ಯಾಟೊದಲ್ಲಿ ಹೊಂದಿರುವ ಷೇರುಗಳನ್ನು ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ ₹ 750 ಕೋಟಿಗೆ ಮಾರಾಟ ಮಾಡಲಿದೆ.

ಟೈಗರ್ ಗ್ಲೋಬಲ್, ಕೋರಾ ಮತ್ತು ಇತರೆ ಹೂಡಿಕೆದಾರರಿಂದ ಜೊಮ್ಯಾಟೊ ಕಂಪನಿಯು ಫೆಬ್ರುವರಿಯಲ್ಲಿ ₹ 1,800 ಕೋಟಿ ಬಂಡವಾಳ ಸಂಗ್ರಹಿಸಿದೆ.

ಪೆಟ್ರೋಲ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸೋಮವಾರ ಪೆಟ್ರೋಲ್ ಬೆಲೆಯಲ್ಲಿ 35 ಪೈಸೆ ಹೆಚ್ಚಳ ಮಾಡಿವೆ. ಡೀಸೆಲ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ. ದೆಹಲಿಯಲ್ಲಿ ಪೆಟ್ರೋಲ್ ಲೀಟರಿಗೆ ₹ 99.86 ಆಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ₹ 103.20 ಆಗಿದೆ.

ಮುಂಬೈ ಧಾರಣೆ

ಶೇಂಗಾ

5-7-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	8700-8750
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1410 (1390)
ಒಂದು ವಾರದ ಡೆಲಿವರಿ	1405 (1380)
ಸೋಯಾ ಕಚ್ಚಾ	1280 (1275)
ಪಾಮ್ ವಾರದ ಡೆಲಿವರಿ	1168 (1158)
ಸೂರ್ಯಕಾಂತಿ ಎಣ್ಣೆ ಕಚ್ಚಾ	1370 (1260)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,300 (47,300)
ಬೆಳ್ಳಿ ಕೆ.ಜಿ 69,650 (69,450)

ಆವರಣದಲ್ಲಿ ಶನಿವಾರದ ಧಾರಣೆ

ಎನ್‌ಎಸ್‌ಇ: 100ಕ್ಕೆ ತಲುಪಿದ ಇಟಿಎಫ್‌ಗಳ ಸಂಖ್ಯೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ಇದುವರೆಗೆ ಒಟ್ಟು 100 ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳು ಪ್ರವೇಶ ಪಡೆದಿವೆ ಎಂದು ಎನ್‌ಎಸ್‌ಸಿ ಸೋಮವಾರ ತಿಳಿಸಿದೆ. 2002ರಲ್ಲಿ ಎನ್‌ಎಸ್‌ಇಯಲ್ಲಿ ಮೊದಲ ಇಟಿಎಫ್ ಪ್ರವೇಶ ಪಡೆದಿತ್ತು.

'ಒಟ್ಟು 100 ಇಟಿಎಫ್‌ಗಳು ಎನ್‌ಎಸ್‌ಇಯಲ್ಲಿ ಪ್ರವೇಶ ಪಡೆಯಲು 19 ವರ್ಷಗಳಿಗಿಂತ ಹೆಚ್ಚು ಸಮಯ ಬೇಕಾಯಿತು. ಈ ಪೈಕಿ, ಕಳೆದ ಒಂದೇ ವರ್ಷದಲ್ಲಿ ಒಟ್ಟು 21 ಇಟಿಎಫ್‌ಗಳು ಎನ್‌ಎಸ್‌ಇ ಪ್ರವೇಶಿಸಿವೆ' ಎಂದು ಪ್ರಕಟಣೆ ತಿಳಿಸಿದೆ.

ಮೇ ತಿಂಗಳವರೆಗಿನ ಮಾಹಿತಿ ಅನ್ವಯ ದೇಶದಲ್ಲಿ ಇಟಿಎಫ್‌ಗಳ ಮೂಲಕ ಆಗಿರುವ ಹೂಡಿಕೆಯ ಮೌಲ್ಯವು ₹ 3.16 ಲಕ್ಷ ಕೋಟಿ. 2016ರ ಏಪ್ರಿಲ್ ವೇಳೆಗೆ ದೇಶದ ಇಟಿಎಫ್‌ಗಳಲ್ಲಿ ₹ 23 ಸಾವಿರ ಕೋಟಿ ಹೂಡಿಕೆ ಆಗಿತ್ತು. ಅಂದರೆ, ಐದು ವರ್ಷಗಳಲ್ಲಿ ಹೂಡಿಕೆ ಆಗಿರುವ ಮೌಲ್ಯದಲ್ಲಿ 13.8 ಪಟ್ಟು ಹೆಚ್ಚಳ ಆಗಿದೆ.

'ಭಾರತದಲ್ಲಿ ಸಣ್ಣ ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಕುಟುಂಬಗಳು ಉಳಿತಾಯ ಮಾಡುವ ಮೊತ್ತವು ಹಣಕಾಸು ಉತ್ಪನ್ನಗಳಲ್ಲಿ ಹೂಡಿಕೆ ಆಗುವಂತೆ ಮಾಡಿ, ಬಂಡವಾಳ ಸೃಷ್ಟಿಸಿಕೊಡುವುದು ನಮ್ಮ ಮುಖ್ಯ ಗುರಿಗಳಲ್ಲಿ ಒಂದು. ಇಟಿಎಫ್‌ಗಳು ಬಹಳ ಸರಳವಾದ ಹಾಗೂ ಕಡಿಮೆ ಖರ್ಚಿನ ಹೂಡಿಕೆ ಉತ್ಪನ್ನಗಳು. ಪಿಂಚಣಿ ನಿಧಿಗಳು, ಕೇಂದ್ರ ಸರ್ಕಾರ ಕೂಡ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುತ್ತಿವೆ' ಎಂದು ಎನ್‌ಎಸ್‌ಇ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಕ್ರಂ ಲಿಮಯೆ ಹೇಳಿದ್ದಾರೆ.

ಇಟಿಎಫ್‌ನಲ್ಲಿ ಹೂಡಿಕೆ ಮಾಡುವ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಪ್ರೈಮ್‌ಇನ್ವೆಸ್ಟರ್ ಸಂಸ್ಥೆಯ ಸಹಸಂಸ್ಥಾಪಕಿ ವಿದ್ಯಾ ಬಾಲಾ, 'ಇಟಿಎಫ್‌ನಲ್ಲಿನ ಹೂಡಿಕೆ ಕಡಿಮೆ ಖರ್ಚಿನದು ಎಂಬ ಮಾತ್ರಕ್ಕೆ ಅದು ಉತ್ತಮ ಎಂದಾಗುವುದಿಲ್ಲ. ಹೂಡಿಕೆಯಿಂದ ಎಷ್ಟು ಲಾಭ ಸಿಗುತ್ತದೆ, ಸೂಚ್ಯಂಕ ಯಾವ ರೀತಿ ವರ್ತಿಸುತ್ತದೆ, ನಿಮ್ಮ ಒಟ್ಟಾರೆ ಹೂಡಿಕೆಗಳಲ್ಲಿ ಇಟಿಎಫ್ ಯಾವ ಪಾತ್ರ ವಹಿಸುತ್ತದೆ ಎಂಬುದನ್ನೆಲ್ಲ ಗಮನಿಸಬೇಕು' ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಚಿತ್ರದುರ್ಗ	
ಆಪಿ	41449-41899
ಬೆಟ್ಟೆ	34829-35259
ಕೆಂಪುಗೋಟು	28119-28500
ರಾಶಿ	40939-41369
ಕುಮಟ	
ಚಿಪ್ಪು	41449-41899
ಕೋಕ	34829-35259
ಫ್ಯಾಕ್ಟರಿ	28119-28500
ಹಳೆಚಾಲಿ	41119-42716
ಹೊಸಚಾಲಿ	37089-39599
ಸಿದ್ದಾಪುರ	
ಬಿಳಿಗೋಟು	24599-32899
ಚಾಲಿ	34209-38599
ಕೋಕ	18089-30929
ಕೆಂಪುಗೋಟು	26099-30699
ರಾಶಿ	38109-41099
ತಟ್ಟಿಬೆಟ್ಟೆ	31099-36099
ಶಿರಸಿ	
ಬೆಟ್ಟೆ	23696-39003
ಬಿಳಿಗೋಟು	22369-34699
ಚಾಲಿ	31069-39499
ರಾಶಿ	38219-42018
ಯಲ್ಲಾಪುರ	
ಬಿಳಿಗೋಟು	28812-33899
ಚಾಲಿ	34412-39469
ಕೋಕ	20612-31499
ಕೆಂಪುಗೋಟು	29742-33891
ರಾಶಿ	39412-45099
ತಟ್ಟಿಬೆಟ್ಟೆ	34299-38989

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ಮುಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಶ್ರೀ ರಾಘವೇಂದ್ರ ಸ್ವಾಮಿ ಜ್ಯೋತಿಷಾಲಯ ಪಂಡಿತ್ ರಾಘವೇಂದ್ರ ಗುರೂಜಿ ನಿಮ್ಮಯಾವುದೇ ಸಮಸ್ಯೆಯಿರಲಿ 3ದಿನದಲ್ಲಿ ಫೋನಿನ ಮೂಲಕ ಪರಿಹಾರ ಶತಸಿದ್ಧ ಮಂತ್ರಾಲಯ 7760909072

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ॥ ವಿವೇಕಾನಂದ ಜೋಶಿ 7899899949

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

ಉದ್ಯೋಗಾವಕಾಶ
General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ಬೆಂಗಳೂರಿನಲ್ಲಿರುವ ಆರ್ಯುವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆರ್ಯುವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸದನದಲ್ಲಿ ಅಸಭ್ಯ ವರ್ತನೆ: ಸುಪ್ರೀಂ ಕೋರ್ಟ್ ಅಸಮಾಧಾನ

ಜನಪ್ರತಿನಿಧಿಗಳ ಅಶಿಸ್ತು ಅಕ್ಷಮ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಸದನದಲ್ಲಿ ಶಾಸಕರು ಹಾಗೂ ಸಂಸದರ ಅಶಿಸ್ತಿನ ವರ್ತನೆಯನ್ನು ಕ್ಷಮಿಸಲಾಗದು ಎಂದಿರುವ ಸುಪ್ರೀಂ ಕೋರ್ಟ್, ಸದನದಲ್ಲಿನ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ್ದಲ್ಲಿ ಅವರು ವಿಚಾರಣೆಯನ್ನೂ ಎದುರಿಸಬೇಕು ಎಂದು ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರನ್ನು ಒಳಗೊಂಡ ನ್ಯಾಯಪೀಠ, 'ಶಾಸಕಾಂಗ ಸಂಸ್ಥೆಗಳಲ್ಲಿ ಶಿಷ್ಟಾಚಾರ ಪಾಲನೆ ಆಗಲೇಬೇಕು' ಎಂದು ಕೇರಳ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ರಂಜಿತ್ ಕುಮಾರ್ ಅವರಿಗೆ ತಿಳಿಸಿತು.

ಕೇರಳ ವಿಧಾನಸಭೆಯಲ್ಲಿ 2015ರಲ್ಲಿ ನಡೆದ ಗದ್ದಲ ಹಾಗೂ ಪೀಠೋಪಕರಣಗಳನ್ನು ಧ್ವಂಸಗೊಳಿಸಿದ ಪ್ರಕರಣದಲ್ಲಿ, ಈಗಿನ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಸೇರಿದಂತೆ ಸಿಪಿಎಂ ಮುಖಂಡರ ವಿರುದ್ಧದ ಪ್ರಕರಣ ಕೈಬಿಡುವಂತೆ ಕೋರಿ ಕೇರಳ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

ಆರೋಪ ಎದುರಿಸುತ್ತಿರುವ ಸದಸ್ಯರು ಆಗ ವಿರೋಧ ಪಕ್ಷದಲ್ಲಿದ್ದರು.

'ಮಸೂದೆಯೊಂದರ ಮೇಲೆ ಚರ್ಚೆ ನಡೆಯುತ್ತಿರುವಾಗ, ಶಾಸಕರು ಎನ್ನಿಸಿಕೊಂಡವರು ಮೈಕ್ ಕಿತ್ತೆಸೆದು, ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದಾರೆ. ಅವರ ಈ ವರ್ತನೆ ಅಕ್ಷಮ್ಯ' ಎಂದು ನ್ಯಾಯಪೀಠ ಹೇಳಿದೆ.

'ಸಾರ್ವಜನಿಕರ ಎದುರು ಯಾವ ವರ್ತನೆಯನ್ನು ನೀವು ಸಮರ್ಥಿಸಿಕೊಳ್ಳಲು ಹೊರಟಿದ್ದೀರಿ? ತುಂಬಾ ಪ್ರಮುಖವಾದ ಬಜೆಟ್ ಮಂಡನೆ ಸಂದರ್ಭದಲ್ಲಿ ಗಲಾಟೆ ನಡೆಸಿದ ಈ ನಡವಳಿಕೆಯ ಹಿಂದೆ ಯಾವ ಸಾರ್ವಜನಿಕ ಹಿತಾಸಕ್ತಿ ಇದೆ?' ಎಂದು ವಕೀಲರನ್ನು ತರಾಟೆಗೆ ತೆಗೆದುಕೊಂಡಿತು.

ಪ್ರಕರಣವನ್ನು ವಾಪಸ್ ತೆಗೆದುಕೊಳ್ಳುವುದು ಪಬ್ಲಿಕ್ ಪ್ರಾಸಿಕ್ಯೂಟರ್ ನಿರ್ಧಾರವೇ ಹೊರತು ರಾಜ್ಯ ಸರ್ಕಾರದ್ದಲ್ಲ ಎಂದು ಚಾಟಿ ಬೀಸಿದ ಪೀಠ, ಹೆಚ್ಚುವರಿ ದಾಖಲೆಗಳೊಂದಿಗೆ ಬರುವಂತೆ ಆದೇಶಿಸಿ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ಕೇರಳ ಹೈಕೋರ್ಟ್, 'ಜನಪ್ರತಿನಿಧಿಗಳ ನಡತೆ ಸದನದ ಘನತೆಗೆ ತಕ್ಕುದಾಗಿರಬೇಕು ಇಲ್ಲದಿದ್ದಲ್ಲಿ ಪರಿಣಾಮವನ್ನು ಎದುರಿಸಬೇಕು' ಎಂದು ಮಾರ್ಚ್ 12ರಂದು ನೀಡಿದ ಆದೇಶದಲ್ಲಿ ಹೇಳಿತ್ತು.

ಈ ಘಟನೆಗೆ ಸಂಬಂಧಿಸಿದಂತೆ, ದೂರು ದಾಖಲಿಸಿದ ವಿಧಾನ ಸಮರ್ಪಕವಾಗಿಲ್ಲ. ಸಭಾಧ್ಯಕ್ಷರ ಅನುಮತಿ ಇಲ್ಲದೇ ಪ್ರಕರಣ ದಾಖಲಿಸಲಾಗಿದೆ ಎಂಬುದು ರಾಜ್ಯ ಸರ್ಕಾರದ ವಾದ.

ಎಲ್ಲಾ ದೇಶಗಳಿಗೂ 'ಕೋವಿನ್' ಆ್ಯಪ್ ಲಭ್ಯ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಭಾರತದ ಕೋವಿಡ್ ಲಸಿಕಾ ಅಭಿಯಾನದ ತಂತ್ರಜ್ಞಾನ ವೇದಿಕೆ 'ಕೋವಿನ್' ಆ್ಯಪ್ ಅನ್ನು ಜಾಗತಿಕ ಮಟ್ಟದ ಬಳಕೆಗೆ ವಿಸ್ತರಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಕೋವಿನ್ ಗ್ಲೋಬಲ್ ಕಾನ್‌ಕ್ಲೇವ್‌ನಲ್ಲಿ ತಿಳಿಸಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, 'ಕೋವಿಡ್ ಸಾಂಕ್ರಾಮಿಕದ ವಿರುದ್ಧದ ಹೋರಾಟದಲ್ಲಿ ಭಾರತ ತನ್ನ ಪರಿಣತಿ, ಅನುಭವ ಮತ್ತು ಸಂಪನ್ಮೂಲಗಳನ್ನು ಜಾಗತಿಕ ಸಮುದಾಯದ ಜೊತೆ ಹಂಚಿಕೊಳ್ಳಲು ಬದ್ಧವಾಗಿದೆ. ನಮ್ಮ ಮಿತಿಗಳ ನಡುವೆಯೂ ನಾವು ಮೊದಲಿನಿಂದಲೂ ಜಗತ್ತಿನ ಜೊತೆ ನಮ್ಮಿಂದ ಎಷ್ಟು ಸಾಧ್ಯವೋ ಅಷ್ಟನ್ನು ಹಂಚಿಕೊಂಡಿದ್ದೇವೆ' ಎಂದರು.

ಇಡೀ ಜಗತ್ತನ್ನೇ ಒಂದು ಕುಟುಂಬ ಎಂದು ಭಾವಿಸುವುದನ್ನು ನಮ್ಮ ನಾಗರಿಕತೆ ಪ್ರತಿಪಾದಿಸುತ್ತದೆ. ಹಾಗಾಗಿ, ಕೋವಿನ್ ಅನ್ನು ಎಲ್ಲರಿಗೂ ಅನುಕೂಲ ಆಗುವಂತೆ ರೂಪಿಸುತ್ತಿರುವುದು.
ನರೇಂದ್ರ ಮೋದಿ, ಪ್ರಧಾನಿ

ಎಷ್ಟೇ ಪ್ರಬಲ ದೇಶವಾದರೂ ಈ ರೀತಿಯ ಸಾಂಕ್ರಾಮಿಕವನ್ನು ಏಕಾಂಗಿಯಾಗಿ ಎದುರಿಸಲಾಗದು ಎಂಬುದನ್ನು ಅನುಭವ ತೋರಿಸಿಕೊಟ್ಟಿದೆ. ಕೋವಿಡ್ ವಿರುದ್ಧದ ಭಾರತದ ಹೋರಾಟಕ್ಕೆ ತಂತ್ರಜ್ಞಾನವನ್ನು ಪೂರ್ಣವಾಗಿ ಮೀಸಲಿಡಬೇಕಿಲ್ಲ. ಖುಷಿಯ ವಿಚಾರವೇನೆಂದರೆ ಸಾಫ್ಟ್‌ವೇರ್ ಬಳಕೆಗೆ ಸಂಪನ್ಮೂಲದ ಮಿತಿ ಎಂಬುದು ಇರುವುದಿಲ್ಲ ಎಂದು ಅವರು ಹೇಳಿದರು.

ಕೆನಡ, ಮೆಕ್ಸಿಕೊ, ನೈಜೀರಿಯಾ, ಪನಾಮ, ಉಗಾಂಡ ಸೇರಿ 50ಕ್ಕೂ ಹೆಚ್ಚು ದೇಶಗಳು ಲಸಿಕಾ ಅಭಿಯಾನಕ್ಕಾಗಿ 'ಕೋವಿನ್' ಅಳವಡಿಸಿಕೊಳ್ಳಲು ಆಸಕ್ತಿ ತೋರಿವೆ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಸಿಇಒ ಡಾ. ಆರ್.ಎಸ್. ಶರ್ಮ ಇತ್ತೀಚೆಗೆ ಹೇಳಿದ್ದರು.

ಭಾರತದಲ್ಲಿ ಸ್ಪುಟ್ನಿಕ್ ಲಸಿಕೆ ತಯಾರಿಕೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ 'ಸ್ಪುಟ್ನಿಕ್ ವಿ' ಲಸಿಕೆ ತಯಾರಿಸಲು ಭಾರತೀಯ ಔಷಧ ನಿಯಂತ್ರಣ ಮಹಾ ನಿರ್ದೇಶನಾಲಯ (ಡಿಸಿಜಿಐ) ಅನುಮತಿ ನೀಡಿದೆ ಎಂದು ಪನೇಸಿಯಾ ಬಯೊಟೆಕ್ ಸೋಮವಾರ ಪ್ರಕಟಿಸಿದೆ.

'ಭಾರತದಲ್ಲಿ ಸ್ಪುಟ್ನಿಕ್ ವಿ ಲಸಿಕೆ ತಯಾರಿಸಲು ಅನುಮತಿ ದೊರೆತಿದೆ. ಲಸಿಕೆ ತಯಾರಿಕೆಗೆ ತ್ವರಿತವಾಗಿ ಎಲ್ಲ ಪ್ರಕ್ರಿಯೆಗಳಿಗೆ ಅನುಮೋದನೆ ನೀಡಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತ ಸರ್ಕಾರಕ್ಕೆ ಕೃತಜ್ಞತೆಗಳು' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಜೈನ್ ತಿಳಿಸಿದ್ದಾರೆ.

ಹಿಮಾಚಲ ಪ್ರದೇಶದ ಬದ್ದಿಯಲ್ಲಿರುವ ಪನೇಸಿಯಾ ಬಯೊಟೆಕ್ ಕೇಂದ್ರದಲ್ಲಿ ತಯಾರಿಸಿದ ಲಸಿಕೆಯನ್ನು ಗುಣಮಟ್ಟದ ಪರೀಕ್ಷೆಗಾಗಿ ರಷ್ಯಾದ ಗಮಲೆಯಾ ಕೇಂದ್ರಕ್ಕೆ ಕಳುಹಿಸಲಾಗಿತ್ತು. ಗುಣಮಟ್ಟಕ್ಕೆ ಸಂಬಂಧಿಸಿದ ಎಲ್ಲ ಮಾನದಂಡಗಳನ್ನು ಪೂರೈಸಲಾಗಿದೆ ಎಂದು ತಿಳಿಸಿದ್ದಾರೆ. ಸ್ಪುಟ್ನಿಕ್ ವಿ ಅನ್ನು ಭಾರತದಲ್ಲಿ ತುರ್ತು ಬಳಕೆಯ ಮಾನ್ಯತೆಗಾಗಿ 2021ರ ಏಪ್ರಿಲ್ 12ರಂದು ನೋಂದಣಿ ಮಾಡಲಾಗಿತ್ತು.

ರಸ್ತೆ ಜಲಾವೃತ
ಭಾರಿ ಮಳೆಯಿಂದ ಬಿಹಾರದ ಮೋತಿಹಾರಿಯಲ್ಲಿ ಸೋಮವಾರ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಜಲಾವೃತಗೊಂಡಿರುವ ರಸ್ತೆಯಲ್ಲಿಯೇ ವಾಹನಗಳು ಸಂಚರಿಸಿದವು – ಪಿಟಿಐ ಚಿತ್ರ

ಕೋವಿಡ್: ಸಿಬಿಎಸ್‌ಇ ಅರ್ಧವಾರ್ಷಿಕ ಪಠ್ಯಕ್ರಮ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) 2021-2022ನೇ ಸಾಲಿನ 10 ಮತ್ತು 12ನೇ ತರಗತಿಗಳಿಗೆ ವಿಶೇಷ ಮೌಲ್ಯಮಾಪನ ವ್ಯವಸ್ಥೆಯನ್ನು ಪ್ರಕಟಿಸಿದೆ. ಎರಡೂ ತರಗತಿಗಳನ್ನು ವರ್ಷಕ್ಕೆ ಎರಡು ಅವಧಿಯಂತೆ ವಿಭಾಗಿಸಲಾಗಿದೆ. ಒಂದೇ ತರಗತಿಗೆ ಎರಡು ಅವಧಿಯಲ್ಲಿ ಮೌಲ್ಯಮಾಪನ ನಡೆಯಲಿದೆ. ಕೋವಿಡ್ ಸಾಂಕ್ರಾಮಿಕದ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸಿಬಿಎಸ್‌ಇ ಹೇಳಿದೆ.

2021-22ನೇ ಸಾಲಿನ ಪಠ್ಯಕ್ರಮದಲ್ಲೂ ಬದಲಾವಣೆ ಮಾಡಲಾಗುತ್ತದೆ. ಆಂತರಿಕ ಮೌಲ್ಯಮಾಪನಕ್ಕೆ ಹೆಚ್ಚು ಒತ್ತು ಮತ್ತು ಆದ್ಯತೆ ನೀಡಲಾಗುತ್ತದೆ ಎಂದು ಸಿಬಿಎಸ್‌ಇ ಹೇಳಿದೆ. ಕೋವಿಡ್ ಎರಡನೇ ಅಲೆಯ ಕಾರಣ 2020-21ನೇ ಸಾಲಿನ ಪರೀಕ್ಷೆಗಳನ್ನು ಸಿಬಿಎಸ್‌ಇ ರದ್ದುಪಡಿಸಿತ್ತು. ಸಿಬಿಎಸ್‌ಇ 12ನೇ ತರಗತಿಯ ಫಲಿತಾಂಶವನ್ನು ಜುಲೈ 31ರ ಒಳಗೆ ಪ್ರಕಟಿಸಲಿದೆ. ಇದರ ಮಧ್ಯೆಯೇ ಮುಂದಿನ ಶೈಕ್ಷಣಿಕ ವರ್ಷದ ರೂಪುರೇಷೆಯನ್ನು ಸಿಬಿಎಸ್‌ಇ ಅಂತಿಮಗೊಳಿಸಿದೆ.

10 ಮತ್ತು 12ನೇ ತರಗತಿಯ ಪಠ್ಯಕ್ರಮಗಳನ್ನು ವರ್ಷಕ್ಕೆ ಎರಡು ಅವಧಿಯಂತೆ ವಿಭಾಗಿಸಲಾಗಿದೆ. ಇಡೀ ವರ್ಷದ ಪಠ್ಯಕ್ರಮವನ್ನು ಒಂದು ಅವಧಿಗೆ ಶೇ 50ರಂತೆ ವಿಭಾಗಿಸಲಾಗಿದೆ. ಪ್ರತಿ ಅವಧಿಯ ಅಂತ್ಯದಲ್ಲಿ ಮೌಲ್ಯಮಾಪನ ನಡೆಯಲಿದೆ. ಆಂತರಿಕ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆ, ಪ್ರಾಯೋಗಿಕ ಯೋಜನೆಗಳಿಗೆ ಆದ್ಯತೆ ನೀಡಲಾಗುತ್ತದೆ. ಜಾರಿಯಲ್ಲಿರುವ ಮಾರ್ಗಸೂಚಿ ಅನ್ವಯ ಅಂಕಗಳನ್ನು ನೀಡಲಾಗುತ್ತದೆ ಎಂದು ಸಿಬಿಎಸ್‌ಇ ಮಾಹಿತಿ ನೀಡಿದೆ.

ಬಾಯಿ ಮೂಲಕ ನೀಡುವ ಲಸಿಕೆ ಅಭಿವೃದ್ಧಿ ಪ್ರಸ್ತಾವ ಸಲ್ಲಿಕೆ

ಕೋಲ್ಕತ್ತ (ಪಿಟಿಐ): ಕೋವಿಡ್ ಸೋಂಕು ವಿರುದ್ಧ ಚಿಕಿತ್ಸೆಗೆ ಬಾಯಿ ಮೂಲಕ ನೀಡುವ ಲಸಿಕೆ ಅಭಿವೃದ್ಧಿಗೆ ಕೋಲ್ಕತ್ತದ ಐಸಿಎಂಆರ್–ಎನ್‌ಐಸಿಇಡಿ ಸಂಸ್ಥೆಯು ಕೇಂದ್ರದ ಜೈವಿಕ ತಂತ್ರಜ್ಞಾನ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ.

ಸಂಸ್ಥೆಯ ಅಧಿಕಾರಿಗಳು ಸೋಮವಾರ ಈ ಮಾಹಿತಿ ನೀಡಿದ್ದು, 'ಜರ್ಮನ್ ಸಂಸ್ಥೆಯ ಸಹಯೋಗದಲ್ಲಿ ಉಲ್ಲೇಖಿತ ಔಷಧವನ್ನು ಅಭಿವೃದ್ಧಿಪಡಿಸಲಾಗುವುದು. ಪ್ರಸ್ತಾವ ಇಲಾಖೆಯ ಪರಿಶೀಲನೆಯಲ್ಲಿದೆ. ಅನುಮೋದನೆ ಮತ್ತು ಹಣಕಾಸು ಬಿಡುಗಡೆ ಹಿಂದೆಯೇ ಅಭಿವೃದ್ಧಿ ಪ್ರಕ್ರಿಯೆಯೂ ಶುರುವಾಗಲಿದೆ' ಎಂದು ತಿಳಿಸಿದ್ದಾರೆ.

'ಬಾಯಿ ಮೂಲಕ ನೀಡಬಹುದಾದ ಔಷಧ ಅಭಿವೃದ್ಧಿಗೆ ಸುಮಾರು 5–6 ವರ್ಷ ಬೇಕಾಗಬಹುದು' ಎಂದು ಐಸಿಎಂಆರ್–ಎನ್‌ಐಸಿಇಡಿ ನಿರ್ದೇಶಕ ಶಾಂತ ದತ್ತಾ ಹೇಳಿದರು.

ನೀಲಗಿರಿ ಜಿಲ್ಲೆ ಪ್ರವೇಶ: ಇ-ಪಾಸ್ ಕಡ್ಡಾಯ

ಉದಕಮಂಡಲ (ಪಿಟಿಐ): ತಮಿಳುನಾಡಿನ ನೀಲಗಿರಿ ಜಿಲ್ಲೆಗೆ ಭೇಟಿ ನೀಡುವ ಕರ್ನಾಟಕ ಮತ್ತು ಕೇರಳದ ಪ್ರವಾಸಿಗರು ಹಾಗೂ ಸಾರ್ವಜನಿಕರು ಕಡ್ಡಾಯವಾಗಿ ಇ-ಪಾಸ್ ಹೊಂದಿರಬೇಕು ಎಂದು ಜಿಲ್ಲಾಧಿಕಾರಿ ಜೆ. ಇನ್ನೊಸೆಂಟ್ ದಿವ್ಯಾ ಸೋಮವಾರ ಹೇಳಿದ್ದಾರೆ.

ರಾಜ್ಯ ಸರ್ಕಾರದ ನಿರ್ದೇಶನದ ಮೇರೆಗೆ ನೀಲಗಿರಿಯ ಪ್ರಸಿದ್ಧ ಪ್ರವಾಸಿ ತಾಣಗಳನ್ನು ತೆರೆಯುವ ನಿರ್ಧಾರ ಕೈಗೊಳ್ಳಲಾಗುವುದು ಎಂದೂ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಒಬಿಸಿ ಮೀಸಲಾತಿ; ಬಿಜೆಪಿ ಸದಸ್ಯರ ಗದ್ದಲದ ನಡುವೆ ಅಂಗೀಕಾರ

2011ರ ಜನಗಣತಿ ವಿವರಕ್ಕೆ ಮಹಾರಾಷ್ಟ್ರ ಪಟ್ಟು

ಮುಂಬೈ (ಪಿಟಿಐ): ಬಿಜೆಪಿ ಸದಸ್ಯರ ಗದ್ದಲದ ನಡುವೆಯೇ ಮಹಾರಾಷ್ಟ್ರ ವಿಧಾನಸಭೆಯು, 2011ರ ಜನಗಣತಿಯ ಮಾಹಿತಿಯನ್ನು ಕೇಂದ್ರ ಸರ್ಕಾರ ಒದಗಿಸುವಂತೆ ಕೋರುವ ನಿರ್ಣಯವನ್ನು ಸೋಮವಾರ ಅಂಗೀಕರಿಸಿತು.

ಇತರ ಹಿಂದುಳಿದ ವರ್ಗಗಳ (ಒಬಿಸಿ) ಜನಸಂಖ್ಯೆಯ ಸಮಗ್ರ ಮಾಹಿತಿಯನ್ನು ಸಿದ್ಧಪಡಿಸಲು ಜನಗಣತಿಯ ವಿವರಗಳು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಅಗತ್ಯವಿದೆ. ಇದರಿಂದ, ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಲು ಅನುಕೂಲವಾಗುತ್ತದೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಎನ್‌ಸಿಪಿ ನಾಯಕ ಹಾಗೂ ಆಹಾರ ಸಚಿವ ಛಗನ್ ಭುಜಬಲ್ ಅವರು ನಿರ್ಣಯ ಮಂಡಿಸಿದರು. ವಿರೋಧ ಪಕ್ಷ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ಸ್ಪೀಕರ್ ಪೀಠದ ಮುಂದೆ ನುಗ್ಗಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಹಾಕಿದರು.

'ಈ ನಿರ್ಣಯವು ರಾಜಕೀಯ ಪ್ರೇರಿತವಾಗಿದೆ. ಇದರಿಂದ ಯಾವುದೇ ಉದ್ದೇಶ ಈಡೇರುವುದಿಲ್ಲ. ಇತರ ಹಿಂದುಳಿದ ವರ್ಗಗಳು ರಾಜಕೀಯವಾಗಿ ಹಿಂದುಳಿದಿರುವ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿ ವಿವರ ಸಿದ್ಧಪಡಿಸುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಆದರೆ, ನ್ಯಾಯಾಲಯದ ನಿರ್ದೇಶನವನ್ನು ಸರ್ಕಾರ ಪಾಲಿಸಿಲ್ಲ' ಎಂದು ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ದೂರಿದರು.

'2011ರ ಜನಗಣತಿ ಎಂಟು ಕೋಟಿ ತಪ್ಪುಗಳಿವೆ. ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಮಾಹಿತಿಯಲ್ಲಿ 69 ಲಕ್ಷ ತಪ್ಪುಗಳಿವೆ. ಹೀಗಾಗಿ, ಈ ಮಾಹಿತಿಯನ್ನು ಕೇಂದ್ರ ಸರ್ಕಾರ ನೀಡಿಲ್ಲ' ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಭುಜಬಲ್, 'ತಪ್ಪುಗಳಿದ್ದರೆ ಇದುವರೆಗೆ ಸರಿಪಡಿಸುವ ಪ್ರಯತ್ನ ಏಕೆ ಮಾಡಿಲ್ಲ. ಕೇಂದ್ರ ಸರ್ಕಾರದ ಉಜ್ವಲ್ ಅನಿಲ ಯೋಜನೆದಂತಹ ಯೋಜನೆಗಳಿಗೆ ಇದೇ ಮಾಹಿತಿಯನ್ನು ಬಳಸುತ್ತಿರುವಾಗ ಒಬಿಸಿ ಮೀಸಲಾತಿ ವಿಷಯಕ್ಕೆ ನೀಡಲು ಏನು ತೊಂದರೆ' ಎಂದು ಹೇಳಿದರು.

ನಿರ್ಣಯವನ್ನು ಧ್ವನಿಮತಕ್ಕೆ ಹಾಕಿದಾಗ ಬಿಜೆಪಿ ಶಾಸಕರಾದ ಗಿರೀಶ್ ಮಹಾಜನ್ ಮತ್ತು ಸಂಜಯ್ ಕುಟೆ ಅವರು ಸ್ಪೀಕರ್ ಪೀಠವನ್ನೇರಿ ವಾಗ್ವಾದದಲ್ಲಿ ತೊಡಗಿದರು. ಆಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಯಿತು. ಮತ್ತೆ ಸದನವು ಸೇರಿದಾಗ ಬಿಜೆಪಿ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಶಿವಸೇನಾ ಮತ್ತು ಎನ್‌ಸಿಪಿ ಸದಸ್ಯರು ಒತ್ತಾಯಿಸಿದರು. ಸದಸ್ಯರನಡುವೆವಾಗ್ವಾದಉಂಟಾದಾಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು. ಬಳಿಕ ಸದನವು ಸೇರಿದಾಗ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಅನುಚಿತ ವರ್ತನೆ ಆರೋಪ: ಬಿಜೆಪಿಯ 12 ಶಾಸಕರ ಅಮಾನತು

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ಭಾಸ್ಕರ್ ಜಾಧವ್ ಅವರ ಜೊತೆಗೆ ಅವರ ಕಚೇರಿಯಲ್ಲಿಯೇ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಬಿಜೆಪಿಯ 12 ಶಾಸಕರನ್ನು ಒಂದು ವರ್ಷದ ಅವಧಿಗೆ ವಿಧಾನಸಭೆಯಿಂದ ಅಮಾನತುಪಡಿಸಲಾಗಿದೆ.

12 ಶಾಸಕರನ್ನು ಸದನದಿಂದ ಅಮಾನತುಪಡಿಸಬೇಕು ಎಂಬ ನಿಲುವಳಿಯನ್ನು ಸಂಸದೀಯ ವ್ಯವಹಾರಗಳ ಸಚಿವ ಅನಿಲ್ ಪರಬ್ ಮಂಡಿಸಿದ್ದು, ಸದನ ಇದನ್ನು ಧ್ವನಿಮತದಿಂದ ಅಂಗೀಕರಿಸಿತು.

ಸಂಜಯ್ ಕುಟೆ, ಆಶೀಷ್ ಶೆಲಾರ್, ಅಭಿಮನ್ಯು ಪವಾರ್, ಗಿರೀಶ್ ಮಹಾಜನ್, ಅತುಲ್ ಭಟ್ಕಲ್ಕರ್, ಪರಾಗ್ ಅಲ್ವಾಣಿ, ಹರೀಶ್ ಪಿಂಪಾಲೆ, ಯೋಗೇಶ್ ಸಾಗರ್, ಜಯ್ ಕುಮಾರ್ ರಾವತ್, ನಾರಾಯಣ್ ಕುಚೆ, ರಾಮ್ ಸತ್ಪುಟೆ ಮತ್ತು ಬಂಟಿ ಬಾಂಗ್ಡಿಯಾ ಅಮಾನತುಗೊಂಡ ಶಾಸಕರು.

ಅಮಾನತು ಅವಧಿಯಲ್ಲಿ ಈ ಶಾಸಕರಿಗೆ ಮುಂಬೈ, ನಾಗಪುರದಲ್ಲಿರುವ ಸಚಿವಾಲಯದ ಆವರಣಕ್ಕೆ ಪ್ರವೇಶ ನೀಡಲಾಗುವುದಿಲ್ಲ ಎಂದು ಪರಬ್ ತಿಳಿಸಿದರು. ಅಮಾನತು ಕ್ರಮಕ್ಕೆ ಆಕ್ಷೇಪಿಸಿದ ಬಿಜೆಪಿ ಶಾಸಕರು ಮುಖಂಡ ದೇವೇಂದ್ರ ಫಡಣವೀಸ್ ನೇತೃತ್ವದಲ್ಲಿ ಕಲಾಪ ಬಹಿಷ್ಕರಿಸಲಾಗುವುದು ಎಂದು ಪ್ರಕಟಿಸಿದರು.

'ಮುಸ್ಲಿಮರನ್ನು ಹಿಂಸಿಸಿದ ಬಿಜೆಪಿ ನಾಯಕರನ್ನು ವಜಾಗೊಳಿಸಿ'



ನವದೆಹಲಿ (ಪಿಟಿಐ): 'ಅಮಾಯಕ ಮುಸ್ಲಿಮರಿಗೆ ಹಿಂಸೆ ನೀಡಿರುವ ಬಿಜೆಪಿ ನಾಯಕರನ್ನು ಅವರ ಹುದ್ದೆಗಳಿಂದ ತೆಗೆದುಹಾಕಬೇಕು. ಇದು ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಂದ ಆರಂಭವಾಗಬೇಕು' ಎಂದು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ದಿಗ್ವಿಜಯ್ ಸಿಂಗ್ ಒತ್ತಾಯಿಸಿದ್ದಾರೆ.

ಘಜಿಯಾಬಾದ್‌ದಲ್ಲಿ ಭಾನುವಾರ ಮುಸ್ಲಿಂ ರಾಷ್ಟ್ರೀಯ ಮಂಚ್ ಆಯೋಜಿಸಿದ್ದ 'ಹಿಂದೂಸ್ತಾನ ಫಸ್ಟ್, ಹಿಂದೂಸ್ತಾನಿ ಬೆಸ್ಟ್' ಕಾರ್ಯಕ್ರಮದಲ್ಲಿ ಮಾತನಾಡಿದ್ದ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು, 'ಎಲ್ಲ ಭಾರತೀಯರ ಡಿಎನ್‌ಎ ಒಂದೇ' ಎಂದು ಹೇಳಿಕೆ ನೀಡಿದ್ದರು. ಜತೆಗೆ, 'ಗೋವು ಪವಿತ್ರ ಪ್ರಾಣಿ. ಆದರೆ, ಗುಂಪು ಹತ್ಯೆ ಮಾಡುವುದು ಹಿಂದುತ್ವಕ್ಕೆ ವಿರುದ್ಧವಾಗಿದೆ. ಕೆಲವು ಸಂದರ್ಭಗಳಲ್ಲಿ ಗುಂಪು ಹತ್ಯೆಯ ಸುಳ್ಳು ಪ್ರಕರಣಗಳನ್ನು ಕೆಲವರ ವಿರುದ್ಧ ದಾಖಲಿಸಲಾಗಿದೆ' ಎಂದು ಹೇಳಿದ್ದರು.

ಭಾಗವತ್ ಅವರ ಹೇಳಿಕೆಗೆ ಸಿಂಗ್ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

'ಮಾತು–ಕೃತಿಗೂ ಸಾಕಷ್ಟು ಅಂತರವಿದೆ'

ಲಖನೌ (ಪಿಟಿಐ): 'ಭಾರತೀಯರೆಲ್ಲರ ಡಿಎನ್‌ಎ ಒಂದೇ' ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆಗೆ ಅರ್ಥವಿಲ್ಲ. ಸಂಘ ಪರಿವಾರ, ಬಿಜೆಪಿ, ಸರ್ಕಾರದ ಮಾತು ಮತ್ತು ಕೃತಿಗೂ ಸಾಕಷ್ಟು ಅಂತರವಿದೆ' ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಪ್ರತಿಕ್ರಿಯಿಸಿದ್ದಾರೆ.

ವ್ಯತ್ಯಾಸವಿದೆ ಎಂಬುದನ್ನು ಎಲ್ಲರೂ ಗಮನಿಸಬಹುದು. ಭಾಗವತ್ ಅವರ ಹೇಳಿಕೆ ಈ ದ್ವಿಮುಖ ನೀತಿಯನ್ನು ಬಿಂಬಿಸುತ್ತದೆ ಎಂದು ಹೇಳಿರುವ ಮಾಯಾವತಿ, ಪೂರಕವಾಗಿ ಹೇಳಿಕೆ 'ಬಾಯಲ್ಲಿ ರಾಮ, ಬಗಲಲ್ಲಿ ಚೂರಿ' (ಮುಹ್ ಮೇ ರಾಮ್, ಬಗಲ್ ಮೇ ಚೂರಿ) ಎಂಬಂತಿದೆ ಎಂದಿದ್ದಾರೆ.

ಸಿಬಿಎಸ್‌ಇ 10ನೇ ತರಗತಿ ಫಲಿತಾಂಶ: ಅರ್ಜಿ ವಿಚಾರಣೆಗೆ ಹೈಕೋರ್ಟ್ ಒಪ್ಪಿಗೆ

ನವದೆಹಲಿ (ಪಿಟಿಐ): ಸಿಬಿಎಸ್‌ಇ ಶಾಲೆಗಳ 10ನೇ ತರಗತಿ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಲು ಅಂಕಗಳ ನಿಗದಿಗೆ ಅನುಸರಿಸುವ ಮಾನದಂಡ ಸಂಬಂಧ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಜುಲೈ 9ರಂದು ನಡೆಸಲು ದೆಹಲಿ ಹೈಕೋರ್ಟ್ ಒಪ್ಪಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠ, ಆಗಸ್ಟ್ 28ಕ್ಕೆ ಈ ಅರ್ಜಿ ವಿಚಾರಣೆ ಮುಂದೂಡಿತ್ತು. ಆದರೆ, ಜಸ್ಟೀಸ್ ಫಾರ್ ಆಲ್ ಸ್ವಯಂ ಸೇವಾ ಸಂಸ್ಥೆ, 'ಈ ಅರ್ಜಿಯನ್ನು ಬೇಗ ವಿಚಾರಣೆ' ನಡೆಸುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು.

ಎನ್‌ಜಿಒ ಪರ ವಕೀಲರ ವಾದ ಆಲಿಸಿದ ನ್ಯಾಯಾಲಯ, ಅರ್ಜಿಯ ವಿಚಾರಣೆಯನ್ನು ಜುಲೈ 9ರಂದು ನಡೆಸಲು ಒಪ್ಪಿಗೆ ನೀಡಿತು.

ಮುಂದಿನ ತಿಂಗಳು ಕೋವಿಡ್ 3ನೇ ಅಲೆ?

ನವದೆಹಲಿ: ಕೋವಿಡ್–19ರ ಮೂರನೇ ಅಲೆಯು ಮುಂದಿನ ತಿಂಗಳ ಹೊತ್ತಿಗೇ ಕಾಣಿಸಿಕೊಳ್ಳಬಹುದು ಮತ್ತು ಸೆಪ್ಟೆಂಬರ್ ಮಧ್ಯದ ಹೊತ್ತಿಗೆ ಗರಿಷ್ಠ ಮಟ್ಟಕ್ಕೆ ಹೋಗಬಹುದು ಎಂದು ಎಸ್‌ಬಿಐ–ರಿಸರ್ಚ್‌ನ ವರದಿಯು ಹೇಳಿದೆ.

ಈ ಹಿಂದಿನ ಅನುಭವದ ಆಧಾರದಲ್ಲಿ ಹೇಳುವುದಾದರೆ, ಆಗಸ್ಟ್ ಎರಡನೇ ವಾರದ ಹೊತ್ತಿಗೇ ಪ್ರಕರಣಗಳಲ್ಲಿ ಏರಿಕೆ ಕಾಣಿಸಿಕೊಳ್ಳಬಹುದು ಎಂದು ವರದಿಯು ಅಂದಾಜಿಸಿದೆ. ಜಾಗತಿಕ ದತ್ತಾಂಶಗಳ ಆಧಾರದಲ್ಲಿ ಲೆಕ್ಕ ಹಾಕಿದರೆ, ಮೂರನೇ ಅಲೆಯು ಗರಿಷ್ಠ ಮಟ್ಟದಲ್ಲಿರುವಾಗ ಪ್ರಕರಣಗಳ ಸಂಖ್ಯೆಯು ಎರಡನೇ ಅಲೆಯ 1.7 ಪಟ್ಟು ಇರಬಹುದು ಎಂದು ಸಂಶೋಧನಾ ವರದಿಯು ಹೇಳಿದೆ.

ತಲಾ ಆದಾಯ ಹೆಚ್ಚು ಇರುವ ದೇಶಗಳಲ್ಲಿ ಸಾವಿನ ಪ್ರಮಾಣವೂ ಹೆಚ್ಚು ಎಂಬುದು ಕೋವಿಡ್–19ರ ಎರಡು ಅಲೆಗಳ ಸಂದರ್ಭದಲ್ಲಿ ಅರಿವಿಗೆ ಬಂದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಯೂರೊ ಕಪ್: ಫೈನಲ್ ಕನಸಿನಲ್ಲಿ ಇಟಲಿ–ಸ್ಪೇನ್

ಲಂಡನ್ (ಎಪಿ): ಅಜೇಯವಾಗಿ ಸೆಮಿಫೈನಲ್ ಪ್ರವೇಶಿಸಿರುವ ಸ್ಪೇನ್ ಮತ್ತು ಇಟಲಿ ತಂಡಗಳು ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ರಾತ್ರಿ ಮುಖಾಮುಖಿಯಾಗಲಿವೆ.

ಎರಡೂ ತಂಡಗಳು ಈ ಚಾಂಪಿಯನ್‌ಷಿಪ್‌ನಲ್ಲಿ ಮಾತ್ರವಲ್ಲ, ಇತ್ತೀಚಿನ ಕೆಲವು ಟೂರ್ನಿಗಳಲ್ಲಿ ಸೋತಿಲ್ಲ. ಸ್ಪೇನ್ ಕಳೆದ ಅಕ್ಟೋಬರ್‌ನಿಂದ 13 ಪಂದ್ಯಗಳಲ್ಲಿ ಸೋಲರಿಯದೆ ಮುನ್ನುಗ್ಗಿದೆ. ಇಟಲಿ 2018ರಿಂದ 32 ಪಂದ್ಯಗಳಲ್ಲಿ ಅಜೇಯವಾಗಿ ಉಳಿದಿದ್ದು ರಾಷ್ಟ್ರೀಯ ದಾಖಲೆ ನಿರ್ಮಿಸಿದೆ.

ಸ್ವಿಟ್ಜರ್ಲೆಂಡ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ 3–1ರ ಜಯ ಗಳಿಸಿ ಸ್ಪೇನ್ ನಾಲ್ಕರ ಘಟ್ಟ ಪ್ರವೇಶಿಸಿದೆ. ಇಟಲಿ ಬೆಲ್ಜಿಯಂ ಎದುರು 2–1ರಲ್ಲಿ ಗೆಲುವು ಸಾಧಿಸಿ ಈ ಹಂತಕ್ಕೆ ಲಗ್ಗೆ ಇರಿಸಿದೆ.

ಇಟಲಿ, ಚಾಂಪಿಯನ್‌ಷಿಪ್‌ನಲ್ಲಿ ಈ ವರೆಗೂ ಅತ್ಯುತ್ತಮ ಸಾಮರ್ಥ್ಯ ಪ್ರದರ್ಶಿಸಿದೆ. ಒಂದು ಗೋಲು ಕೂಡ ಬಿಟ್ಟುಕೊಡದೆ ಗುಂಪು ಹಂತದ ಮೂರೂ ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ತಂಡ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಬಲಿಷ್ಠ ಆಸ್ಟ್ರಿಯಾವನ್ನು ಮಣಿಸಿತ್ತು. ವಿಶ್ವ ಕ್ರಮಾಂಕದಲ್ಲಿ ಒಂದೇ ಸ್ಥಾನದಲ್ಲಿರುವ ಬೆಲ್ಜಿಯಂ ತಂಡವನ್ನು ಎಂಟರ ಘಟ್ಟದಲ್ಲಿ ಸೋಲಿಸಿ ಬೆರಗು ಮೂಡಿಸಿದೆ.

ಸ್ಪೇನ್ ಕಳೆದ 29 ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಸೋಲು ಕಂಡಿದೆ. ಈ ಓಟವನ್ನು ಇನ್ನೂ ಮುಂದುವರಿಸಬೇಕಾದರೆ ಇಟಲಿಯ ಬಲಿಷ್ಠ ಆಕ್ರಮಣ ಮತ್ತು ರಕ್ಷಣಾ ವಿಭಾಗವನ್ನು ಮೀರಿ ನಿಲ್ಲಬೇಕಾಗಿದೆ.

ಎಲ್ಲ ವಿಭಾಗದಲ್ಲೂ ಬಲಿಷ್ಠ ಇಟಲಿ: 2018ರಲ್ಲಿ ರಾಬರ್ಟೊ ಮನ್ಸಿನಿ ಕೋಚ್ ಆಗಿ ನೇಮಕಗೊಂಡ ನಂತರ ಇಟಲಿ ತಂಡದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ತಂಡದ ಆಕ್ರಮಣ ವಿಭಾಗ ಹೆಚ್ಚು ಬಲಪಡೆದುಕೊಂಡಿದೆ. ಇದೇ ವೇಳೆ ಲಿಯೊನಾರ್ಡೊ ಬೊನುಷಿ ಮತ್ತು ಜಾರ್ಜಿಯೊ ಚಿಲಿನಿ ನೇತೃತ್ವದ ಆಕ್ರಮಣ ವಿಭಾಗ ಸ್ಥಿರ ಪ್ರದರ್ಶನ ನೀಡುತ್ತಿದೆ. ಚಾಂಪಿಯನ್‌ಷಿಪ್‌ನಲ್ಲಿ ಈ ವರೆಗೆ ತಂಡ ಬಿಟ್ಟುಕೊಟ್ಟಿರುವುದು ಎರಡೇ ಗೋಲು.

ಸ್ಪೇನ್‌ನ ರಕ್ಷಣಾ ವಿಭಾಗ ಈಚೆಗೆ ಶಕ್ತಿ ಪಡೆದುಕೊಳ್ಳುತ್ತಿದೆ. ಫ್ರಾನ್ಸ್‌ನಿಂದ ಬಂದು ಸ್ಪೇನ್ ನಾಗರಿಕತೆ ಪಡೆದುಕೊಂಡಿರುವ ಸೆಂಟರ್ ಬ್ಯಾಕ್ ಅಯ್ಮೆರಿಕ್ ಲ್ಯಾಪೊರ್ಟೆ ಅವರ ಮೇಲೆ ತಂಡ ಹೆಚ್ಚು ನಿರೀಕ್ಷೆ ಇರಿಸಿಕೊಂಡಿದೆ. ಆಕ್ರಮಣ ವಿಭಾಗದಲ್ಲಿ ಅಲ್ವಾರೊ ಮೊರಾಟ್ ಮತ್ತು ಲೂಯಿಸ್ ಹೆನ್ರಿಕ್ ಲಯ ಕಂಡುಕೊಳ್ಳಬೇಕಾಗಿದೆ.

ಇಟಲಿಯ ಸ್ಟ್ರೈಕರ್ ಸಿರೊ ಇಮೊಬೈಲ್ ಮತ್ತು ಫಾರ್ವರ್ಡ್ ಆಟಗಾರ ಲೊರೆನ್ಸೊ ಇನ್‌ಸೈನ್ ಮೇಲೆ ಸ್ಪೇನ್ ಹೆಚ್ಚು ನಿಗಾ ಇರಿಸಬೇಕಾಗಿದೆ. ಆದರೆ ಸ್ಪೇನ್‌ನ ಮಿಡ್‌ಫೀಲ್ಡ್ ವಿಭಾಗ ಇಟಲಿಗೆ ಸವಾಲೊಡ್ಡುವುದರಲ್ಲಿ ಸಂದೇಹ ಇಲ್ಲ.

ಉಭಯ ತಂಡಗಳು ಸಾಗಿಬಂದ ಹಾದಿ

ಇಟಲಿ (ಗುಂಪು ಹಂತ)	
ಟರ್ಕಿ ವಿರುದ್ಧ	3-0 ಜಯ
ಸ್ವಿಟ್ಜರ್ಲೆಂಡ್ ವಿರುದ್ಧ	3-0 ಜಯ
ವೇಲ್ಸ್ ವಿರುದ್ಧ	1-0 ಜಯ
ಪ್ರೀ ಕ್ವಾರ್ಟರ್ ಫೈನಲ್	
ಆಸ್ಟ್ರಿಯಾ ವಿರುದ್ಧ	2-1 ಜಯ (ಹೆಚ್ಚುವರಿ ಅವಧಿ)
ಕ್ವಾರ್ಟರ್ ಫೈನಲ್	
ಬೆಲ್ಜಿಯಂ ಎದುರು	2-1ರಲ್ಲಿ ಜಯ

ಸ್ಪೇನ್ (ಗುಂಪು ಹಂತ)	
ಸ್ವೀಡನ್ ಎದುರು	0-0 ಡ್ರಾ
ಪೋಲೆಂಡ್ ವಿರುದ್ಧ	1-1 ಡ್ರಾ
ಸ್ಲೊವಾಕಿಯಾ ವಿರುದ್ಧ	5-0 ಜಯ
ಪ್ರೀ ಕ್ವಾರ್ಟರ್ ಫೈನಲ್	
ಕ್ರೊವೇಷ್ಯಾ ವಿರುದ್ಧ	5-3 ಜಯ (ಹೆಚ್ಚುವರಿ ಅವಧಿ)
ಸ್ವಿಟ್ಜರ್ಲೆಂಡ್ ವಿರುದ್ಧ	3-1ರಲ್ಲಿ ಜಯ (ಪೆನಾಲ್ಟಿ ಶೂಟೌಟ್)

ಪಂದ್ಯ ಆರಂಭ: ರಾತ್ರಿ **12.30** (ಭಾರತೀಯ ಕಾಲಮಾನ) ನೇರ ಪ್ರಸಾರ: **ಸೋನಿ ನೆಟ್‌ವರ್ಕ್**

ಮುಖಾಮುಖಿ ಫಲಿತಾಂಶ
36 ಪಂದ್ಯಗಳು
12 ಇಟಲಿ ಜಯ
11 ಸ್ಪೇನ್ ಜಯ
13 ಡ್ರಾ

ಮುಖಾಮುಖಿಯಲ್ಲಿ ಗೋಲುಗಳು
43 ಇಟಲಿ
40 ಸ್ಪೇನ್

ಸಂಕ್ಷಿಪ್ತ ಸುದ್ದಿ

ಗೋಮತಿ ನದಿ ಯೋಜನೆ: 43 ಕಡೆ ಸಿಬಿಐ ಶೋಧ

ನವದೆಹಲಿ (ಪಿಟಿಐ): ಉತ್ತರಪ್ರದೇಶದ ಲಖನೌನ ಗೋಮತಿ ನದಿ ಯೋಜನೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ಹೊಸ ಪ್ರಕರಣ ದಾಖಲಿಸಿದೆ. ಸಮಾಜವಾದಿ ಪಕ್ಷದ ಸರ್ಕಾರದ ಆಡಳಿತ ಅವಧಿಯಲ್ಲಿ ಈ ಯೋಜನೆ ಜಾರಿಗೆ ಬಂದಿದೆ.

'ಈ ಸಂಬಂಧ ದಾಖಲಿಸಲಾದ ಎಫ್‌ಐಆರ್ ಆಧರಿಸಿ ಹಲವು ರಾಜ್ಯಗಳ 43 ಸ್ಥಳಗಳಲ್ಲಿ ಸಿಬಿಐ ಶೋಧ ಕಾರ್ಯಾಚರಣೆ ನಡೆಸುತ್ತಿದೆ. ಸೋಮವಾರ ಬೆಳಿಗ್ಗೆ ಆರಂಭಗೊಂಡಿರುವ ಕಾರ್ಯಾಚರಣೆಯು ಸಂಜೆಯವರೆಗೆ ಮುಂದುವರಿಯುವ ಸಾಧ್ಯತೆಗಳಿವೆ' ಎಂದು ಅಧಿಕಾರಿಗಳು ತಿಳಿಸಿದರು.

ತೃಣಮೂಲ ಕಾಂಗ್ರೆಸ್‌ಗೆ ಅಭಿಜಿತ್ ಮುಖರ್ಜಿ ಸೇರ್ಪಡೆ



ಕೋಲ್ಕತ್ತ (ಪಿಟಿಐ): ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರ ಪುತ್ರ, ಕಾಂಗ್ರೆಸ್‌ನ ಮಾಜಿ ಸಂಸದ ಅಭಿಜಿತ್ ಮುಖರ್ಜಿ ಅವರು ಸೋಮವಾರ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಪಶ್ಚಿಮ ಬಂಗಾಳದ ಜಂಗೀಪುರ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿದ್ದ ಅವರು, ಟಿಎಂಸಿ ಮುಖಂಡರ ಜೊತೆ ಸಂಪರ್ಕದಲ್ಲಿದ್ದರು. ಟಿಎಂಸಿ ಮುಖಂಡ ಸುದೀಪ್ ಬಂಡೋಪಾಧ್ಯಾಯ ಅವರು ಅಭಿಜಿತ್ ಅವರನ್ನು ಬರಮಾಡಿಕೊಂಡರು.

ಫಿಲಿಪ್ಪಿನ್ಸ್ ವಿಮಾನ ಅಪಘಾತ: ಸತ್ತವರ ಸಂಖ್ಯೆ 50ಕ್ಕೆ ಏರಿಕೆ

ಮನಿಲಾ (ಎಪಿ): ಫಿಲಿಪ್ಪಿನ್ಸ್‌ನಲ್ಲಿ ಭಾನುವಾರ ಸಂಭವಿಸಿದ ಸೇನಾ ವಿಮಾನ ಅಪಘಾತದಲ್ಲಿ ಸಾವಿಗೀಡಾದವರ ಸಂಖ್ಯೆ 50ಕ್ಕೆ ಏರಿದೆ.

ಸುಲು ಪ್ರಾಂತ್ಯದ ಜುಲು ವಿಮಾನ ನಿಲ್ದಾಣದಲ್ಲಿ ರನ್‌ವೇಯಲ್ಲಿ ಇಳಿಯಲು ಸಾಧ್ಯವಾಗದೆ ಈ ವಿಮಾನವು ಅಪಘಾತಕ್ಕೀಡಾಗಿತ್ತು.

'ಲಾಕ್‌ಹೀದ್ ಸಿ–130 ಹೆರ್ಕ್ಯೂಲೆಸ್' ಸೇನಾ ವಿಮಾನದಲ್ಲಿ 96 ಯೋಧರು ಪ್ರಯಾಣಿಸುತ್ತಿದ್ದರು. 49 ಯೋಧರನ್ನು ಪೊಲೀಸರು, ಅಗ್ನಿಶಾಮಕದ ದಳ ಹಾಗೂ ಸೇನಾ ಪಡೆ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ರಕ್ಷಿಸಲಾಗಿದೆ.

ವಿಮಾನದಲ್ಲಿದ್ದ ಬಹುತೇಕ ಯೋಧರು ಹೊಸದಾಗಿ ನೇಮಕಗೊಂಡು ತರಬೇತಿ ಪಡೆದಿದ್ದರು. ಈ ಯೋಧರನ್ನು ಅಬು ಸಯ್ಯಫ್ ಉಗ್ರರ ವಿರುದ್ಧ ಹೋರಾಟಕ್ಕೆ ನಿಯೋಜಿಸಲು ಉದ್ದೇಶಿಸಲಾಗಿತ್ತು.

ಲಕ್ಸೆಂಬರ್ಗ್ ಪ್ರಧಾನಿಗೆ ಕೋವಿಡ್

ಬ್ರುಸೆಲ್ಸ್ (ಎಪಿ): ಲಕ್ಸೆಂಬರ್ಗ್ ಪ್ರಧಾನಿ ಕ್ಸೇವಿಯರ್ ಬೆಟ್ಟೆಲ್ ಅವರಿಗೆ ಕೋವಿಡ್–19 ದೃಢಪಟ್ಟಿದ್ದು, ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಬೆಟ್ಟೆಲ್ ಅವರು ಯುರೋಪಿಯನ್ ಶೃಂಗಸಭೆಯಲ್ಲಿ ಭಾಗವಹಿಸಿದ ನಂತರ ಕೋವಿಡ್ ಪರೀಕ್ಷೆಗೊಳಪಟ್ಟಿದ್ದರು. ನಂತರ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಆರಂಭಿಕ ಹಂತದಲ್ಲಿ ಅವರಿಗೆ ಸೌಮ್ಯಪ್ರಮಾಣದ ರೋಗಲಕ್ಷಣಗಳಿದ್ದವು. ಮುನ್ನೆಚ್ಚರಿಕೆ ಕ್ರಮವಾಗಿ ಭಾನುವಾರ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶಿವಸೇನಾ–ಬಿಜೆಪಿ ಸಂಬಂಧ ಅಮೀರ್–ಕಿರಣ್ ರಾವ್ ಅವರಂತೆ'

ಮುಂಬೈ: ಶಿವಸೇನಾ ಮತ್ತು ಬಿಜೆಪಿ ಪಕ್ಷಗಳ ನಡುವೆ ಇರುವ ಸಂಬಂಧ ಭಾರತ–ಪಾಕಿಸ್ತಾನದಂತೆ ಅಲ್ಲ, ಆಮೀರ್ ಖಾನ್ ಮತ್ತು ಕಿರಣ್ ರಾವ್ ಅವರಂತೆ ಎಂದು ಶಿವಸೇನಾ ಸಂಸದ ಸಂಜಯ್ ರಾವತ್ ಹೇಳಿದ್ದಾರೆ.

ಶುಭಮನ್ ಗಿಲ್ ಗಾಯಗೊಂಡಾಗ ಅಭಿಮನ್ಯು ಈಶ್ವರನ್ ಅವರನ್ನು ಇಂಗ್ಲೆಂಡ್‌ಗೆ ಕಳುಹಿಸಲು ಆಸಕ್ತಿ

ಪಡಿಕ್ಕಲ್, ಪೃಥ್ವಿಗೆ ಆಯ್ಕೆ ಸಮಿತಿ ಅಡ್ಡಗಾಲು?

ನವದೆಹಲಿ (ಪಿಟಿಐ): ಯುವ ಬ್ಯಾಟ್ಸ್‌ಮನ್‌ಗಳಾದ ದೇವದತ್ತ ಪಡಿಕ್ಕಲ್ ಮತ್ತು ಪೃಥ್ವಿ ಶಾ ಅವರನ್ನು ಇಂಗ್ಲೆಂಡ್‌ಗೆ ಕರೆಸಿಕೊಳ್ಳಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂದಾಗಿದ್ದರೂ ಅದರ ಆಶಯಯಕ್ಕೆ ಆಯ್ಕೆ ಸಮಿತಿ ಅಡ್ಡಗಾಲು ಹಾಕಿತ್ತು ಎಂಬ ಬಗ್ಗೆ ವದಂತಿಗಳು ಎದ್ದಿವೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಆಡಿದ ಭಾರತ ತಂಡ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗಾಗಿ ಇಂಗ್ಲೆಂಡ್‌ನಲ್ಲೇ ಉಳಿದುಕೊಂಡಿದೆ. ತಂಡದ ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಕಳೆದ ವಾರ ಗಾಯಗೊಂಡ ಕಾರಣ ಅವರ ಬದಲಿಗೆ ಬಂಗಾಳದ ಅಭಿಮನ್ಯು ಈಶ್ವರನ್ ಅವರನ್ನು ಕರೆಸಿಕೊಳ್ಳಲು ನಿರ್ಧರಿಸಲಾಗಿತ್ತು. 2019–20ನೇ ಸಾಲಿನ ರಣಜಿ ಟೂರ್ನಿಯಲ್ಲೂ ನ್ಯೂಜಿಲೆಂಡ್ ಪ್ರವಾಸದಲ್ಲೂ ನೀರಸ ಆಟವಾಡಿದ ಅಭಿಮನ್ಯುಗೆ ಅವಕಾಶ ನೀಡಿದ್ದು ಕ್ರಿಕೆಟ್ ವಲಯದ ಅಚ್ಚರಿಗೆ ಕಾರಣವಾಗಿತ್ತು.

ದೇವದತ್ತ ಪಡಿಕ್ಕಲ್– ಪ್ರಜಾವಾಣಿ ಚಿತ್ರ

ಪೃಥ್ವಿ ಶಾ –ಪಿಟಿಐ ಚಿತ್ರ

ಪಡಿಕ್ಕಲ್ ಮತ್ತು ಪೃಥ್ವಿ ಅವರನ್ನು ಇಂಗ್ಲೆಂಡ್‌ಗೆ ಕಳುಹಿಸಲು ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ವಿರೋಧ ವ್ಯಕ್ತಪಡಿಸಿದ್ದರಿಂದ ಅಭಿಮನ್ಯು ಹಾದಿ ಸುಗಮವಾಗಿದೆ ಎನ್ನಲಾಗಿದೆ. ಅಭಿಮನ್ಯು ಈಶ್ವರನ್ ಪ್ರಬಲ ತಂಡದ ಎದುರಿನ ಟೆಸ್ಟ್ ಸರಣಿಯಲ್ಲಿ ಆಡುವಷ್ಟು ತಾಂತ್ರಿಕವಾಗಿ ಬಲಿಷ್ಠರಾಗಿದ್ದಾರೆಯೇ ಎಂಬ ಸಂದೇಹ ಕ್ರಿಕೆಟ್ ವಲಯದಲ್ಲಿ ಮೂಡತೊಡಗಿದೆ.

'ಇಬ್ಬರು ಆರಂಭಿಕ ಬ್ಯಾಟ್ಸ್‌ಮನ್‌ಗಳ ಅಗತ್ಯವಿದೆ ಎಂದು ತಂಡದ ಆಡಳಿತ ವಿಭಾಗದ ವ್ಯವಸ್ಥಾಪಕರು ಚೇತನ್ ಶರ್ಮಾ ಅವರಿಗೆ ಕಳೆದ ತಿಂಗಳ ಕೊನೆಯಲ್ಲಿ ಇ ಮೇಲ್ ಕಳುಹಿಸಿದ್ದರು. ಶುಭಮನ್ ಗಿಲ್ ಅವರ ಗಾಯದಿಂದ ತಂಡದ ಮೇಲೆ ಆಗಲಿರುವ ಗಂಭೀರ ಪರಿಣಾಮದ ಬಗ್ಗೆ ಗೊತ್ತಿದ್ದರೂ ತಂಡದ ಆಡಳಿತದ ಮನವಿಯನ್ನು ಚೇತನ್ ಶರ್ಮಾ ಗಂಭೀರವಾಗಿ ಪರಿಗಣಿಸಲಿಲ್ಲ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಅವರಿಗಾಗಲಿ ಕಾರ್ಯದರ್ಶಿ ಹಾಗೂ ಆಯ್ಕೆ ಸಮಿತಿಯ ಸಂಚಾಲಕರಾಗಿರುವ ಜಯ್ ಶಾ ಅವರಿಗಾಗಲಿ ಈ ಕುರಿತು ಅಧಿಕೃತವಾಗಿ ಯಾರಿಂದಲೂ ಮನವಿ ಬಂದಿಲ್ಲ ಎನ್ನಲಾಗಿದೆ. ಪಡಿಕ್ಕಲ್ ಮತ್ತು ಪೃಥ್ವಿ ಸದ್ಯ ಶ್ರೀಲಂಕಾದಲ್ಲಿದ್ದಾರೆ. ಅಲ್ಲಿ ಏಕದಿನ ಮತ್ತು ಟಿ20 ಸರಣಿ ಮುಗಿದ ಕೂಡಲೇ ಇಂಗ್ಲೆಂಡ್‌ಗೆ ತೆರಳಬೇಕಾಗಿದೆ. ಭಾರತ ತಂಡ ಬಯೊಬಬಲ್ ಪ್ರವೇಶಿಸುವ ಮುನ್ನ ಅಲ್ಲಿರಬೇಕಾಗುತ್ತದೆ' ಎಂದು ಅಧಿಕಾರಿ ವಿವರಿಸಿದರು.

ಚೇತನ್ ಶರ್ಮಾ ಕಳೆದ ತಿಂಗಳಲ್ಲೇ ಮುತುವರ್ಜಿ ವಹಿಸಿದ್ದರೆ ಪಡಿಕ್ಕಲ್ ಮತ್ತು ಪೃಥ್ವಿ ಈಗಾಗಲೇ ಇಂಗ್ಲೆಂಡ್ ತಲುಪಿರುತ್ತಿದ್ದರು ಮತ್ತು ಅಭ್ಯಾಸ ಪಂದ್ಯಗಳಲ್ಲಿ ಆಡಲು ಲಭ್ಯವಾಗುತ್ತಿದ್ದರು.

'ಅಭಿಮನ್ಯು ಈಶ್ವರನ್ ಅವರನ್ನು ಪೃಥ್ವಿ ಜೊತೆ ಹೋಲಿಕೆ ಮಾಡಲಾಗದು. ಪೃಥ್ವಿ ಶ್ರೇಷ್ಠ ಬ್ಯಾಟ್ಸ್‌ಮನ್ ಆಗಿದ್ದಾರೆ. ಅವರನ್ನು ಎರಡನೇ ತಂಡದೊಂದಿಗೆ ಶ್ರೀಲಂಕಾಕ್ಕೆ ಕಳುಹಿಸುವ ಬದಲು ಟೆಸ್ಟ್ ಆಡಲು ಇಂಗ್ಲೆಂಡ್‌ಗೆ ಕಳುಹಿಸಬೇಕಾಗಿತ್ತು' ಎಂದು ರಾಷ್ಟ್ರೀಯ ತಂಡದ ಮಾಜಿ ಮುಖ್ಯಸ್ಥರೊಬ್ಬರು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು
- ಇಬ್ಬರು ಆರಂಭಿಕ ಬ್ಯಾಟ್ಸ್‌ಮನ್‌ಗಳಿಗೆ ಬೇಡಿಕೆ ಇಟ್ಟ ತಂಡದ ಆಡಳಿತ
- ಬಿಸಿಸಿಐ ಅಧ್ಯಕ್ಷ, ಕಾರ್ಯದರ್ಶಿಗೆ ಮಾಹಿತಿ ತಲುಪಿಸದೆ ಲೋಪ
- ಇಂಗ್ಲೆಂಡ್‌ಗೆ ತೆರಳಿದರೂ ಬ್ಯಾಟ್ಸ್‌ಮನ್‌ಗಳಿಗೆ ಅಭ್ಯಾಸ ಪಂದ್ಯ ಕೈತಪ್ಪುವ ಸಾಧ್ಯತೆ

ಒಲಿಂಪಿಕ್ಸ್: ಭಾರತ ತಂಡವನ್ನು ಮುನ್ನಡೆಸಲಿರುವ ಬಾಕ್ಸರ್, ಹಾಕಿ ಆಟಗಾರ

ಮೇರಿ, ಮನ್‌ಪ್ರೀತ್ ಧ್ವಜಧಾರಿಗಳು

ನವದೆಹಲಿ (ಪಿಟಿಐ/ಎಪಿ): ಆರು ಬಾರಿಯ ವಿಶ್ವ ಚಾಂಪಿಯನ್, ಬಾಕ್ಸರ್ ಮೇರಿ ಕೋಮ್ ಮತ್ತು ಪುರುಷರ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಅವರಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಧ್ವಜಧಾರಿಗಳ ಗೌರವ ಲಭಿಸಿದೆ. ಇವರಿಬ್ಬರು ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜವನ್ನು ಹಿಡಿಯಲಿದ್ದರೆ, ಕುಸ್ತಿಪಟು ಬಜರಂಗ್ ಪೂನಿಯಾ ಅವರು ಸಮಾರೋಪ ಸಮಾರಂಭಕ್ಕೆ ಧ್ವಜಧಾರಿಯಾಗಲಿದ್ದಾರೆ.

ಧ್ವಜಧಾರಿಗಳ ಆಯ್ಕೆ ಕುರಿತು ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಟೋಕಿಯೊ ಒಲಿಂಪಿಕ್ಸ್ ಆಯೋಜನಾ ಸಮಿತಿಗೆ ಮಾಹಿತಿ ನೀಡಿದೆ.

ಮೇರಿ ಕೋಮ್


ಮನ್‌ಪ್ರೀತ್ ಸಿಂಗ್– ಪಿಟಿಐ ಚಿತ್ರ

ಲಿಂಗ ಸಮಾನತೆಯನ್ನು ಸಾರುವ ಉದ್ದೇಶದೊಂದಿಗೆ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ತಲಾ ಒಬ್ಬ ಪುರುಷ ಮತ್ತು ಮಹಿಳಾ ಅಥ್ಲೀಟ್‌ಗೆ ಭಾರತದ ಧ್ವಜಧಾರಿ ಗೌರವ ನೀಡಲಾಗಿದೆ. ಇತ್ತೀಚೆಗೆ ಈ ಕುರಿತು ಐಒಎ ಅಧ್ಯಕ್ಷ ನರಿಂದರ್ ಬಾತ್ರಾ ಸುಳಿವು ನೀಡಿದ್ದರು.

ಒಲಿಂಪಿಕ್ಸ್‌ನ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಪದಕ ವಿಜೇತ ಭಾರತದ ಏಕೈಕ ಅಥ್ಲೀಟ್ ಅಭಿನವ್

ಬಜರಂಗ್ ಪೂನಿಯಾ

ಬಿಂದ್ರಾ ಅವರು 2016ರ ರಿಯೊ ಡಿ ಜನೈರೊ ಒಲಿಂಪಿಕ್ಸ್‌ನಲ್ಲಿ ಭಾರತದ ಧ್ವಜ ಹಿಡಿದು ತಂಡವನ್ನು ಮುನ್ನಡೆಸಿದ್ದರು. 2008ರ ಬೀಜಿಂಗ್ ಒಲಿಂಪಿಕ್ಸ್‌ನ ಶೂಟಿಂಗ್ ಸ್ಪರ್ಧೆಯ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು.

ಟೋಕಿಯೊ ಕ್ರೀಡಾಕೂಟವು ಇದೇ 23ರಿಂದ ನಿಗದಿಯಾಗಿದ್ದು, ಆಗಸ್ಟ್ 8ರಂದು ಕೊನೆಗೊಳ್ಳಲಿದೆ. ಭಾರತದ 100ಕ್ಕೂ ಹೆಚ್ಚು ಅಥ್ಲೀಟ್‌ಗಳು ಈ ಕ್ರೀಡಾಕೂಟದಲ್ಲಿ ಅದೃಷ್ಟಪರೀಕ್ಷೆಗೆ ಸಜ್ಜಾಗಲಿದ್ದಾರೆ.

ದೇಶಿ ಪಿಂಕ್‌ಬಾಲ್ ಪಂದ್ಯಕ್ಕೆ ಶಾಂತಾ ಸಲಹೆ

ನವದೆಹಲಿ (ಪಿಟಿಐ): ಮಹಿಳೆಯರ ಐತಿಹಾಸಿಕ ಹಗಲು ರಾತ್ರಿ ಟೆಸ್ಟ್ ಪಂದ್ಯಕ್ಕೂ ಮೊದಲು ಭಾರತದಲ್ಲಿ ದೇಶಿ ಮಟ್ಟದ ಪಿಂಕ್ ಬಾಲ್ ಪಂದ್ಯಗಳನ್ನು ಆಯೋಜಿಸುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಪೆಕ್ಸ್ ಸಮಿತಿ ಸದಸ್ಯೆ ಶಾಂತಾ ರಂಗಸ್ವಾಮಿ ಸಲಹೆ ನೀಡಿದ್ದಾರೆ.

ಈ ಕುರಿತು ಮಂಡಳಿಯ ಪದಾಧಿಕಾರಿಗಳು ಒಳಗೊಂಡಂತೆ ಸಹೋದ್ಯೋಗಿಗಳಿಗೆ ಪತ್ರ ಬರೆದಿರುವ

ಶಾಂತಾ ರಂಗಸ್ವಾಮಿ

ಅವರು ಕೊರೊನಾದಿಂದಾಗಿ ಕ್ರಿಕೆಟ್ ನಡೆಯದೇ ಇದ್ದ ದಿನಗಳ ಬದಲಿಗೆ ಇತರ ಪಂದ್ಯಗಳನ್ನು ಆಯೋಜಿಸುವಂತೆಯೂ ಸೂಚಿಸಿದ್ದಾರೆ.

ಸೆಪ್ಟೆಂಬರ್ 30ರಿಂದ ಆಸ್ಟ್ರೇಲಿಯಾದಲ್ಲಿ ಮಹಿಳೆಯರ ಹಗಲು ರಾತ್ರಿ ಪಂದ್ಯ ನಡೆಯಲಿದೆ. ಪುರುಷರ ತಂಡ ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಹಗಲು ರಾತ್ರಿ ಟೆಸ್ಟ್‌ನಲ್ಲಿ ಹೀನಾಯವಾಗಿ ಸೋತಿತ್ತು. ಮಹಿಳೆಯರು ಇಂಥ ಪರಿಸ್ಥಿತಿಗೆ ಒಳಗಾಗದಿರಬೇಕಾದರೆ ದೇಶಿ ಮಟ್ಟದಲ್ಲಿ ಸಾಕಷ್ಟು ಪಂದ್ಯಗಳನ್ನು ಆಡಬೇಕು ಎಂದು ಅವರು ಹೇಳಿದ್ದಾರೆ.

ಅರ್ಜೆಂಟೀನಾಗೆ ಕೊಲಂಬಿಯಾ ಎದುರಾಳಿ

ಬ್ರೆಸಿಲಿಯಾ, ಬ್ರೆಜಿಲ್ (ಎಪಿ): ಅರ್ಜೆಂಟೀನಾ ತಂಡ ಕೋಪಾ ಅಮೆರಿಕ ಟೂರ್ನಿಯ ಸೆಮಿಫೈನಲ್ ಹಣಾಹಣಿಯಲ್ಲಿ ಬುಧವಾರ ಕೊಲಂಬಿಯಾವನ್ನು ಎದುರಿಸಲಿದೆ. ಇದು, ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಲಯೊನೆಲ್ ಮೆಸ್ಸಿ ಅವರ 150ನೇ ಪಂದ್ಯ ಆಗಲಿದೆ. ಹೀಗಾಗಿ ಕುತೂಹಲ ಹೆಚ್ಚಿದೆ.

ವಿಂಬಲ್ಡನ್ ಟೆನಿಸ್ ಟೂರ್ನಿ: ಕ್ರೆಚಿಕೊವಾ ಪರಾಭವ

ಇತಿಹಾಸ ಬರೆದ ಜಬೆವುರ್

ಲಂಡನ್ (ರಾಯಿಟರ್ಸ್/ಎಎಫ್‌ಪಿ): ಟ್ಯೂನಿಷಿಯಾದ ಆನ್ಸ್ ಜಬೆವುರ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಸೋಮವಾರ ಇತಿಹಾಸ ಬರೆದರು. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಏಳನೇ ಶ್ರೇಯಾಂಕದ ಇಗಾ ಸ್ವಟೆಕ್ ಅವರನ್ನು ಮಣಿಸುವ ಮೂಲಕ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಮೊದಲ ಅರಬ್ ಮಹಿಳೆ ಎನಿಸಿಕೊಂಡರು.

ಆನ್ಸ್ ಜಬೆವುರ್ ಆಟದ ಶೈಲಿ– ರಾಯಿಟರ್ಸ್ ಚಿತ್ರ

ಇಲ್ಲಿ ನಡೆದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಜಬೆವುರ್ ಅವರಿಗೆ 5–7, 6–1, 6–1ರಿಂದ ಜಯ ಒಲಿಯಿತು. ಸತತ ನಾಲ್ಕು ಗೇಮ್‌ಗಳನ್ನು ಕಳೆದುಕೊಂಡ ಜಬೆವುರ್, ಮೊದಲ ಸೆಟ್‌ಅನ್ನು ಕೈಚೆಲ್ಲಿದರು. ಆದರೆ ಅವರು ನೀಡಿದ ತಿರುಗೇಟಿಗೆ, ಕಳೆದ ವರ್ಷದ ಫ್ರೆಂಚ್ ಓಪನ್ ಚಾಂಪಿಯನ್, ಪೋಲೆಂಡ್‌ನ ಸ್ವಟೆಕ್ ಸೋಲೊಪ್ಪಿಕೊಳ್ಳಬೇಕಾಯಿತು.

ಕ್ರೆಚಿಕೊವಾಗೆ ಸೋಲು: ಅಗ್ರಶ್ರೇಯಾಂಕದ ಆ್ಯಷ್ಲಿ ಬಾರ್ಟಿ 7-5, 6-3ರಿಂದ ಫ್ರೆಂಚ್ ಓಪನ್ ಚಾಂಪಿಯನ್, ಜೆಕ್ ಗಣರಾಜ್ಯದ ಬರ್ಬೊರಾ ಕ್ರೆಚಿಕೊವಾ ಅವರನ್ನು ಸೋಲಿಸಿದರು. ಆಸ್ಟ್ರೇಲಿಯಾ ಆಟಗಾರ್ತಿ ಮೊದಲ ಬಾರಿ ಈ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದರು. ಇನ್ನೊಂದು ಹಣಾಹಣಿಯಲ್ಲಿ, ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ 6–2, 6–3ರಿಂದ ರಷ್ಯಾದ ಲ್ಯೂಡ್‌ಮಿಲಾ ಸ್ಯಾಮ್ಸೊನೊವಾ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ನಾಲ್ಕನೇ ಸುತ್ತಿನ ಹಣಾಹಣಿಯಲ್ಲಿ ಇಟಲಿಯ ಮಟ್ಟಿಯೊ ಬೆರೆಟ್ಟಿನಿ ಅವರು 6-4 6-3 6-1ರಿಂದ ಇಲ್ಯಾ ಇವಾಷ್ಕಾ ಎದುರು ಗೆದ್ದರು.

ನೊವಾಕ್‌ಗೆ 50ನೇ ಕ್ವಾರ್ಟರ್‌ಫೈನಲ್

ಪುರುಷರ ವಿಭಾಗದಲ್ಲಿ ಚಿಲಿಯ ಕ್ರಿಸ್ಟಿಯನ್ ಗರಿನ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ಸರ್ಬಿಯಾದ ನೊವಾಕ್ ಜೊಕೊವಿಚ್ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ 50ನೇ ಬಾರಿ ಕ್ವಾರ್ಟರ್ ಫೈನಲ್ ಹಂತಕ್ಕೇರಿದ ಸಾಧನೆ ಮಾಡಿದರು. ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಜೊಕೊವಿಚ್ 6-2, 6-4, 6-2ರಲ್ಲಿ ಗೆದ್ದು 12ನೇ ಬಾರಿ ವಿಂಬಲ್ಡನ್ ಟೂರ್ನಿಯ ಎಂಟರ ಘಟ್ಟ ಪ್ರವೇಶಿಸಿದರು.

ಒಲಿಂಪಿಕ್ಸ್‌ಗೆ 26 ಅಥ್ಲೀಟ್‌ಗಳು

ನವದೆಹಲಿ (ಪಿಟಿಐ): ಸ್ಪ್ರಿಂಟರ್ ದ್ಯುತಿ ಚಾಂದ್ ಸೇರಿ ಟೋಕಿಯೊ ಒಲಿಂಪಿಕ್ಸ್‌ಗೆ 26 ಮಂದಿ ಕ್ರೀಡಾಪಟುಗಳ ತಂಡವನ್ನು ಭಾರತ ಅಥ್ಲೆಟಿಕ್ ಫೆಡರೇಷನ್ ಸೋಮವಾರ ಪ್ರಕಟಿಸಿದೆ. ಮಹಿಳೆಯರ 100 ಮತ್ತು 200 ಮೀಟರ್ಸ್ ಓಟದಲ್ಲಿ ದ್ಯುತಿ ಚಾಂದ್ ಸ್ಪರ್ಧಿಸಲಿದ್ದು ಎಂ.ಪಿ.ಜಬೀರ್ ಪುರುಷರ 400 ಮೀ. ಹರ್ಡಲ್ಸ್‌ನಲ್ಲಿ, ಗುರುಪ್ರೀತ್ ಸಿಂಗ್ ಪುರುಷರ 50 ಕಿಮೀ ವೇಗ ನಡಿಗೆ ಮತ್ತು ಅನು ರಾಣಿ ಮಹಿಳೆಯರ ಜಾವೆಲಿನ್ ಥ್ರೋದಲ್ಲಿ ಪಾಲ್ಗೊಳ್ಳಲಿದ್ದಾರೆ.

ತಂಡಗಳು: ಪುರುಷರು: ಅವಿನಾಶ್ ಸಬ್ಳೆ (3000 ಮೀ ಸ್ಟಿಪಲ್ ಚೇಸ್), ಎಂ.ಪಿ. ಜಬೀರ್ (400 ಮೀ ಹರ್ಡಲ್ಸ್), ಎಂ.ಶ್ರೀಶಂಕರ್ (ಲಾಂಗ್ ಜಂಪ್), ತಜಿಂದರ್ ಪಾಲ್ ಸಿಂಗ್ ತೂರ್ (ಶಾಟ್ ಪಟ್), ನೀರಜ್ ಚೋಪ್ರಾ, ಶಿವಪಾಲ್ ಸಿಂಗ್ (ಜಾವೆಲಿನ್ ಥ್ರೋ), ಕೆ.ಟಿ.ಇರ್ಫಾನ್, ಸಂದೀಪ್ ಕುಮಾರ್, ರಾಹುಲ್ ರೋಹಿಲ್ಲ (20 ಕಿಮೀ ನಡಿಗೆ), ಗುರುಪ್ರೀತ್ ಸಿಂಗ್ (50 ಕಿಮೀ ನಡಿಗೆ), ಅಮೋಜ್ ಜೇಕಬ್, ಆರೋಗ್ಯ ರಾಜೀವ್, ಮುಹಮ್ಮದ್ ಅನಾಸ್, ನಾಗನಾಥನ್ ಪಾಂಡಿ, ನೊಹ್ ನಿರ್ಮಲ್ ಟೋಮ್ (4x400 ರಿಲೇ), ಸಾರ್ಥಕ್ ಭಾಂಬ್ರಿ, ಅಲೆಕ್ಸ್ ಆ್ಯಂಟನಿ (4x400 ಮೀ ಮಿಶ್ರ ರಿಲೆ); **ಮಹಿಳಾ ವಿಭಾಗ:** ದ್ಯುತಿ ಚಾಂದ್ (100, 200 ಮೀ ಓಟ), ಕಮಲ್‌ಪ್ರೀತ್ ಕೌರ್, ಸೀಮಾ ಪೂನಿಯಾ (ಡಿಸ್ಕಸ್ ಥ್ರೋ), ಅನು ರಾಣಿ (ಜಾವೆಲಿನ್), ಭಾವನಾ ಜಾಟ್, ಪ್ರಿಯಾಂಕಾ ಗೋಸ್ವಾಮಿ (20 ಕಿಮೀ ವೇಗ ನಡಿಗೆ), ರೇವತಿ ವೀರಮಣಿ, ಶುಭಾ ವೆಂಕಟೇಶನ್, ಧನಲಕ್ಷ್ಮಿ ಶೇಖರ್ (4x400 ಮೀ ಮಿಶ್ರ ರಿಲೇ).

ಮನೀಷ್ ಅರ್ಧಶತಕ: ಗೆದ್ದ ‘ಭುವನೇಶ್ವರ ಬಳಗ’

ಕೊಲಂಬೊ (ಪಿಟಿಐ): ಶ್ರೀಲಂಕಾ ವಿರುದ್ಧದ ಸರಣಿಗಾಗಿ ಇಲ್ಲಿಗೆ ಆಗಮಿಸಿರುವ ಭಾರತ ಕ್ರಿಕೆಟ್ ತಂಡದ ಆಟಗಾರರು ಸೋಮವಾರ ಎರಡು ಬಣ ಮಾಡಿಕೊಂಡು ಟಿ–20 ಪಂದ್ಯ ಆಡಿದರು. ಇದರಲ್ಲಿ ಭುವನೇಶ್ವರ ಕುಮಾರ್ ಪಡೆಯು ಶಿಖರ್ ಧವನ್ ಬಳಗವನ್ನು ಮಣಿಸಿತು.

ಧವನ್ ಬಳಗದ ಪರ ಕನ್ನಡಿಗ ಮನೀಷ್ ಪಾಂಡೆ (63, 45 ಎಸೆತ) ಮತ್ತು ಭುವನೇಶ್ವರ ನೇತೃತ್ವದ ತಂಡದ ಪರ ಸೂರ್ಯಕುಮಾರ್ ಯಾದವ್ (50) ಅರ್ಧಶತಕ ಸಿಡಿಸಿದರು. ಮೊದಲು ಬ್ಯಾಟ್ ಮಾಡಿದ ಧವನ್ ಬಳಗ 20 ಓವರ್‌ಗಳಲ್ಲಿ 154 ರನ್ ಗಳಿಸಿತು. ಭುವನೇಶ್ವರ್ ನಾಯಕತ್ವದ ತಂಡ 17 ಓವರ್‌ಗಳಲ್ಲಿ ಈ ಗುರಿ ತಲುಪಿತು.